ಸಂಚಿಕೆ
೧೪

ಮೇ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ





Copyright © KCO – Brindavana

ಸಂಚಿಕೆ ೧೪
ಮೇ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ಪುಟಾಣಿ ಪ್ರಪಂಚ | ಪು ೧೬ |
| ಓದುಗರ ಓಲೆಗಳು | ಪು ೨ | ವನಿತಾ ವಾಣಿ | ಪು ೧೭ - ೧೮ |
| ಹಿನ್ನೋಟ | ಪು ೩ - ೪ | ಸಹಾಯ ಹಸ್ತ | ಪು ೧೯ |
| ಯುವ ವಾಣಿ | ಪು ೫ | ಕ್ಯಾಮೆರಾ ಕಣ್ಣಿಂದ | ಪು ೧೯ |
| ಹೀಗೊಂದು ಪ್ರಶ್ನೆ | ಪು ೫ | ಸದಸ್ಯತ್ವದ ಮಾಹಿತಿ | ಪು ೨೦ |
| ಸಾಹಿತ್ಯ ವಾಣಿ | ಪು ೬ - ೧೩ | | |
| ಅಮ್ಮ ನಿನಗಾಗಿ | ಪು ೧೪ - ೧೫ | | |



**ಸಂಪಾದಕ ಮಂಡಳಿ**


ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು


ಸರಿತಾ ನವಲಿ
ಸಂಪಾದಕರು


ಅಹೀಶ್ ಭಾರದ್ವಾಜ
ಸಂಪಾದಕ ವರ್ಗ


ಡಾ. ಅಶೋಕ್ ಕಟ್ಟೀಮನಿ
ಸಂಪಾದಕ ವರ್ಗ


ಕಾವ್ಯಾ ಕಡಮೆ
ನಾಗರಕಟ್ಟೆ
ಸಂಪಾದಕ ವರ್ಗ


ರಾಘವೇಂದ್ರ
ಕುಂದಲಗುರ್ಕಿ
ಸಂಪಾದಕ ವರ್ಗ


ಕೇಶವ ಪ್ರಶಾಂತ್
ಸಂಪಾದಕ ವರ್ಗ


ಮುಖಪುಟ ಚಿತ್ರ:ಹೊಯ್ಸಳ ಲಾಂಛನ, ಬೇಲೂರು, ಕೃಪೆ : ಅರ್ಣವ ಜೋಶಿ, ಬೆಂಗಳೂರು

ಸಂಪಾದಕೀಯ ಪುಟ ಚಿತ್ರ:
ಶ್ರೀ ಚೆನ್ನಕೇಶವ ದೇವಸ್ಥಾನ ಬೇಲೂರು
ಕೃಪೆ: ಅರ್ಣವ ಜೋಶಿ, ಬೆಂಗಳೂರು

ಪತ್ರಿಕೆ ವಿನ್ಯಾಸ:
ಅಹೀಶ್ ಭಾರದ್ವಾಜ
ಕೇಶವ ಪ್ರಶಾಂತ್

## ಅಧ್ಯಕ್ಷರ ಮಾತು.....



**ನ್ಯೂ ಜೆರ್ಸಿ ಮತ್ತು ವಿಶ್ವ ಕನ್ನಡಿಗರಿಗೆಲ್ಲಾ ಯುಗಾದಿ ಹಬ್ಬದ ಶುಭಾಶಯಗಳು !**

ಬಂಧು ಮಿತ್ರರಿಗೆ ದುರ್ಮುಖಿ ನಾಮ ಸಂವತ್ಸರವು ಸುಖ, ಶಾಂತಿ, ನೆಮ್ಮದಿ, ಆರೋಗ್ಯ ಮತ್ತು ಐಶ್ವರ್ಯ ತರಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ನ್ಯೂ ಜೆರ್ಸಿಯಲ್ಲಿ ಈ ಬಾರಿ ಏಪ್ರಿಲ್ ನಲ್ಲಿ ಕೂಡ ಹಿಮ ಬಿದ್ದು, ವಸಂತನ ಬರುವಿಕೆಯನ್ನು ಎದುರು ನೋಡುತ್ತಾ ಚಳಿಯಲ್ಲೇ ಬೃಂದಾವನ ಮಿಲನ ತಂಡವು ವಸಂತೋತ್ಸವವನ್ನು ಬಹಳ ಅದ್ದೂರಿಯಾಗಿ ನಡೆಸಿತು.

ಬೃಂದಾವನ ಕನ್ನಡ ಕೂಟ - ನ್ಯೂ ಜೆರ್ಸಿ ಅವರಿಂದ ಮತ್ತೊಂದು ಸಿಹಿ ಸುದ್ದಿ ! ನಮ್ಮ "ಬೃಂದಾವನ ಕನ್ನಡ ಕಲಿಸೋಣ - ಕನ್ನಡ ಶಾಲೆ" ಏಪ್ರಿಲ್ ೨ ರಂದು ಮೂರನೆ ಶಾಲೆ ತೆರೆದಿದೆ. ಪೋಷಕರು ಮತ್ತು ಸ್ವಯಂ ಸೇವಕರ ಪ್ರೋತ್ಸಾಹದಿಂದ ಇಂದು ಬೃಂದಾವನ ಕನ್ನಡ ಕಲಿಸೋಣದ ಮೂರು ಶಾಖೆಗಳು ಸೌತ್ ಬ್ರುನ್ಸ್ವಿಕ್, ಈಸ್ಟ್ ವಿಂಡ್ಸರ್ ಮತ್ತು ಎಡಿಸನ್ ನಗರಗಳಲ್ಲಿ ಪ್ರಾರಂಭವಾಗಿರುವುದಷ್ಟೇ ಅಲ್ಲದೆ ನೂರಕ್ಕೂ ಹೆಚ್ಚು ಮಕ್ಕಳು ಕನ್ನಡ ಭಾಷೆಯನ್ನು ಅತ್ಯಂತ ಉತ್ಸಾಹದಿಂದ ಕಲಿಯುತ್ತಿದ್ದಾರೆ. ಬೃಂದಾವನ ಮಿಲನ ತಂಡ ೧೦೦ ಮಕ್ಕಳಿಗೆ ಕನ್ನಡ ಕಲಿಸುವ ಘಟ್ಟ ಮುಟ್ಟಿದ ಈ ಸುಸಂದರ್ಭದಲ್ಲಿ ಮೂರು ಶಾಲೆಯ ಸ್ವಯಂ ಸೇವಕರಿಗೆ ವಸಂತೋತ್ಸವದಂದು ಗೌರವಿಸಿದೆವು.

ಸೆಪ್ಟೆಂಬರ್ ನಲ್ಲಿ ನಡೆಯುವ ಅಕ್ಕ ಸಮ್ಮೇಳನದ ಬಿಸಿ ಹತ್ತಿದೆ, ಬೃಂದಾವನದ ಸದಸ್ಯರು ನೂರಾರು ಸಂಖ್ಯೆಗಳಲ್ಲಿ ಸ್ವಯಂ ಸೇವಕರಾಗಿ ೯ನೇ ವಿಶ್ವ ಕನ್ನಡ ಸಮ್ಮೇಳನಕ್ಕೆ ಹೆಗಲು ಕೊಡುತ್ತಿದ್ದಾರೆ. ಅವರಲ್ಲಿ ಹಲವಾರು ಮಂದಿ ಕಾರ್ಯ-ಕವಲುಗುಳ ಚುಕ್ಕಾಣಿ ಕೂಡ ಹಿಡಿದಿದ್ದಾರೆ . ಬೃಂದಾವನದಿಂದ ಹಲವಾರು ನಾಟಕ, ನೃತ್ಯ ಮತ್ತು ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೂಡ ಕೊಡುತ್ತೇವೆ . ಒಟ್ಟಿನಲ್ಲಿ ಅಟ್ಲಾಂಟಿಕ್ ಸಿಟಿ ನ್ಯೂ ಜೆರ್ಸಿಯಲ್ಲಿ ,ಎಲ್ಲಾ ಕನ್ನಡ ಸಂಘಗಳ ಸಹಯೋಗದೊಂದಿಗೆ ನಡೆಯುತ್ತಿರುವ ವಿಶ್ವ ಕನ್ನಡ ಸಮ್ಮೇಳನಕ್ಕೆ ,ನ್ಯೂ ಜೆರ್ಸಿಯ ಕನ್ನಡ ಸಂಘ - 'ಬೃಂದಾವನ' ಒಂದು ದೊಡ್ಡ ಚೈತನ್ಯವಾಗಿ ಕೈ ಜೋಡಿಸಿದೆ ಎಂಬ ಸಂತೋಷ ನಮಗಿದೆ.

ನಾವಿಕೋತ್ಸವ - ನಾವಿಕ ಕನ್ನಡ ಉತ್ಸವ ೨೦೧೬ ಜುಲೈ ೧೬ -೧೭ ರಂದು ರವೀಂದ್ರ ಕಲಾಕ್ಷೇತ್ರ, ಬೆಂಗಳೂರಿನಲ್ಲಿ ವಿಶ್ವದೆಲ್ಲಡೆಯ ಕನ್ನಡಿಗರೊಂದಿಗೆ ನಡೆಯುತ್ತಿದೆ. ಬೇಸಿಗೆ ರಜೆಯಲ್ಲಿ ಬೆಂಗಳೂರಿಗೆ ತೆರಳುವ ಮಕ್ಕಳ ಕಲೆ ಹಾಗು ಅವರ ಸಾಮರ್ಥ್ಯಗಳನ್ನು ಕುಟುಂಬ ವರ್ಗಕ್ಕೆ ಹಾಗು ಕನ್ನಡ ಜನತೆಯ ಮುಂದೆ ಪ್ರದರ್ಶಿಸುವ ಒಂದು ಅವಕಾಶ. ಬೃಂದಾವನ ಕೂಟ ಉತ್ಸಾಹದಿಂದ ನಾವಿಕೊತ್ಸವದಲ್ಲಿ ಭಾಗವಹಿಸಿ "ನ್ಯೂ-ಜೆರ್ಸಿಯ ಬೃಂದಾವನ ಕನ್ನಡ ಕಲಿಸೋಣ - ಕನ್ನಡ ಶಾಲೆ" ಕಾರ್ಯವೈಖರಿ ಮತ್ತು ಯಶಸ್ಸನ್ನು ಕರ್ನಾಟಕ ಮತ್ತು ವಿಶ್ವ ಕನ್ನಡಿಗರ ಜೊತೆ ಹಂಚಿಕೊಳ್ಳಬೇಕೆಂಬ ಉತ್ಸಾಹದಲ್ಲಿದೆ.

**-ಮಲ್ಲಿಕ್ ಪ್ರಸಾದ್ ಅಧ್ಯಕ್ಷರು, ಬೃಂದಾವನ**

## ಪ್ರಧಾನ ಸಂಪಾದಕರಿಂದ......

**ಸಮಸ್ತ ಓದುಗರಿಗೆ ಯುಗಾದಿಯ ಮತ್ತು ಹೊಸ ವರ್ಷದ ಶುಭಾಶಯಗಳು !!!**

ವಸಂತ ಮಾಸದ ಆಗಮನ ನಮ್ಮನ್ನಲ್ಲದೆ ಪ್ರಾಣಿ, ಪಕ್ಷಿ ಮತ್ತು ಹಸಿರಿಗೆ ಹೊಸ ಚೈತನ್ಯ ದ ಉಸಿರನ್ನು ತುಂಬಿ ಚೈತ್ರದ ಸಡಗರದಲ್ಲಿ ತೇಲಿಸುತ್ತದೆ. ಪ್ರತಿ ಕವಿಯ ವರ್ಣನೆ, ಅನುಭವ ಅವರ್ಣನೀಯ ಮತ್ತು ಅನನ್ಯ.

“ಸುರ ಲೋಕದ ಸುರನದಿಯಲಿ ಮಿಂದು
ಸುರಲೋಕದ ಸಂಪದವನ್ನು ತಂದು
ನವ ಸಂವತ್ಸರ ಭೂಮಿಗೆ ಬಂದು
ಕರೆಯುತಿದೆ ಇಂದು”
.....ಎಂದು ಕುವೆಂಪು ವರ್ಣಿಸಿದರೆ ,

“ಹೆಜ್ಜೆಗೊಂದು ಹೊಸ ಯುಗಾದಿ
ಚೆಲುವು ನಮ್ಮ ಜೀವನ
ನಮ್ಮ ಹಾದಿಯೋ ಅನಾದಿ
ಪಯಣವೆಲ್ಲ ಪಾವನ”
.... ಎಂದು ಕೆ ಎಸ್ ನ ಅನುಭವದ ಭಾವವಾದರೆ ,

ಜನಪ್ರಿಯ ಗೀತೆ ,
“ಯುಗ ಯುಗಾದಿ ಕಳೆದರೂ
ಯುಗಾದಿ ಮರಳಿ ಬರುತಿದೆ .........
ಹೊಂಗೆ ಹೂವ ತೊಂಗಲಲ್ಲಿ
ಭೃಂಗದ ಸಂಗೀತ ಕೇಲಿ
ಮತ್ತೆ ಕೇಳ ಬರುತಿದೆ”
ಎಂದು ಬೇಂದ್ರೆಯವರು ಮೋಹಕವಾಗಿ ಹಿಡಿದಿಡುತ್ತಾರೆ.

ಎಲ್ಲವೂ ಹೊಸತು ಹೊಸತು. ನಿಮ್ಮ ಹೊಸ ವರುಷದ ಹೊಸ ಭರವಸೆ, ಹೊಸ ಕನಸು ನನಸಾಗಲಿ.

ಎಂದಿನಂತೆ ತಂಡದ ಸದಸ್ಯರು ಪ್ರೀತಿ ಮತ್ತು ಮುತುವರ್ಜಿಯಿಂದ ಈ ಸಂಚಿಕೆಯನ್ನು ಸಿದ್ಧಪಡಿಸಿದ್ದಾರೆ. ಎಲ್ಲರಿಗೂ ನನ್ನ ಹೃತ್ಪೂರ್ವಕ ನಮನಗಳು.

ಮತ್ತೆ ಸಿಗೋಣ .

**- ಸತ್ಯ ಪ್ರಸಾದ**

## ಸಂಪಾದಕರಿಂದ......

**ನ್ಯೂ ಜೆರ್ಸಿ ಮತ್ತು ಸಮಸ್ತ ಕನ್ನಡ ಬಳಗಕ್ಕೆ ನಮಸ್ಕಾರಗಳು.**

ಬೃಂದಾವನ ವಾಣಿಯ ಸಂಚಿಕೆಗಳನ್ನು ನೀವೆಲ್ಲ ಓದಿ , ಮೆಚ್ಚಿದ್ದಕ್ಕೆ, ವಾಣಿಯ ಸಂಪಾದಕ ತಂಡದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ನಿಮ್ಮ ಸಲಹೆ ಮತ್ತು ಅನಿಸಿಕೆಗಳನ್ನು ತುಂಬು ಹೃದಯದಿಂದ ಸ್ವೀಕರಿಸಿ , ಮುಂಬರುವ ಸಂಚಿಕೆಗಳಲ್ಲಿ ಅವುಗಳನ್ನು ಅಳವಡಿಸಿಕೊಳ್ಳುಲು ಪ್ರಯತ್ನಿಸುತ್ತೇವೆ.

ಪ್ರತಿವರುಷ ಸಂಭ್ರಮದ ಯುಗಾದಿಯನ್ನು ಆಚರಿಸಿ, ಬೃಂದಾವನದ 'ವಸಂತೋತ್ಸವ'ದ ಸವಿನೆನಪುಗಳನ್ನು ಮೆಲುಕು ಹಾಕುತ್ತಿರುವಾಗ , ಮೇ ತಿಂಗಳಿನಲ್ಲಿ ಆಚರಿಸುವ 'ತಾಯಂದಿರ ದಿನ'ದ ಸಂತೋಷ ಎಲ್ಲರಲ್ಲಿ ಕಾಣುವುದು.

ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ 'ತಾಯಿಗೆ' ಕವನದ ಸಾಲುಗಳು ಹೀಗಿವೆ.

**“ತಾಯೊಲವೆ ತಾಯೊಲವು
ಈ ಲೋಕದೊಳಗೆ
ಕಡಲಿಂಗೆ ಕಡಲಲ್ಲದುಂಟೆ ಹೋಲಿಕೆಗೆ !”**

ನಿಜ .ಕವಿ ಹೇಳುವಂತೆ, ತಾಯಿ ತೋರುವ ಒಲವಿಗೆ ಹೋಲಿಕೆಯುಂಟೆ ?

ನಮ್ಮ ಈ ಸಂಚಿಕೆಯ ವಿಷಯ ವಿಶೇಷವೂ ಸಹ 'ತಾಯಿ'. ಕನ್ನಡ ಬಳಗದ ಬರಹಗಾರರು ಪ್ರೀತಿ ಮತ್ತು ಅಭಿಮಾನಗಳಿಂದ 'ಅಮ್ಮ' ನ ಕುರಿತು ಕವನ, ಕಥೆ, ಲೇಖನಗಳನ್ನು ಬರೆದಿದ್ದಾರೆ. ಅಮ್ಮನ ಮಮತೆ ತೋರುವ ಸುಂದರ ಛಾಯಾಚಿತ್ರಗಳನ್ನು ಕಳುಹಿಸಿಕೊಟ್ಟಿದ್ದಾರೆ. ಅಲ್ಲದೇ 'ಅಂತರಂಗದ ಅನ್ವೇಷಣೆ , 'ಓ ನನ್ನ ಚೇತನ', 'ನಾನು ಓದಿದ ಪುಸ್ತಕ ' ಮುಂತಾದ ಅಂಕಣಗಳನ್ನೊಳಗೊಂಡು 'ಬೃಂದಾವನ ವಾಣಿ' ನಿಮ್ಮ ಮುಂದಿದೆ. ವಾಣಿಯ ಈ ಸಂಚಿಕೆ ಓದುಗರ ಮೆಚ್ಚುಗೆ ಪಡೆಯುತ್ತದೆ ಎನ್ನುವ ಆಶಯ ನಮ್ಮದು. ನಿಮ್ಮ ಅನಿಸಿಕೆ, ಸಲಹೆಗಳಿಗೆ ಸದಾ ಸ್ವಾಗತ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

ಮುಂದಿನ ಸಂಚಿಕೆಯಲ್ಲಿ ಮತ್ತೆ ಸಿಗೋಣ.

**-ಸರಿತಾ ನವಲಿ.**


Copyright © KCO – Brindavana



## ಓದುಗರ ಓಲೆಗಳು

ಗೆಳೆಯರೇ,

ಬೃಂದಾವನ ವಾಣಿಯ ಮೂರನೆಯ ಸಂಚಿಕೆ ಬಿಡುಗಡೆಯಾದ ಸಂದರ್ಭದಲ್ಲಿ ನನ್ನ ಈ ಅನಿಸಿಕೆಗಳನ್ನು ಬರೆಯುತ್ತಿದ್ದೇನೆ. ಬೃಂದಾವನ ವಾಣಿಯ ಮೂರೂ ಸಂಚಿಕೆಗಳನ್ನೂ ನಾನು ಅಕ್ಷರ ಬಿಡದಂತೆ ಓದಿದ್ದೇನೆ. ಪ್ರತಿ ಸಂಚಿಕೆಯ ಮುಖಪುಟದ ಚಿತ್ರವನ್ನೂ ಸುಮಾರು ಬಾರಿ ನೋಡಿ ಆನಂದಿಸಿದ್ದೇನೆ, ಸಂಚಿಕೆಗಳ ವಿಷಯ ವೈವಿಧ್ಯತೆ ಮತ್ತು ಹರವಿನ ಬಗ್ಗೆ ಸೋಜಿಗ ಪಟ್ಟಿದ್ದೇನೆ. ಪುಟಗಳ ವಿನ್ಯಾಸ, ವರ್ಣ ಸಂಯೋಜನೆಗಳಿಗೆ ಮನ ಸೋತಿದ್ದೇನೆ. ಒಟ್ಟಿನಲ್ಲಿ ಒಂದು ಹವ್ಯಾಸಿ *e-ಪತ್ರಿಕೆಯನ್ನು* ಇಷ್ಟು ಚೆನ್ನಾಗಿ ಮಾಡಲು ಸಾಧ್ಯ ಎಂಬುದನ್ನು ಬೃಂದಾವನ ವಾಣಿ ನೋಡಿ ನಂಬತೊಡಗಿದ್ದೇನೆ.

ಪತ್ರಿಕೆಯ ಹುಚ್ಚು ಅಂಟಿಸಿಕೊಂಡ ಗೆಳೆಯರ ಜೊತೆ ನಾಲ್ಕೈದು ವರ್ಷಗಳಿಂದ ಒಂದು ಸಣ್ಣ ಮಾಸಿಕ Newsletter ನ ಪ್ರಕಟಣೆಯಲ್ಲಿ ಭಾಗಿಯಾಗಿರುವ ನಾನು, ಪತ್ರಿಕೆಯೆಂಬ ರಾಕ್ಷಸ ಕೂಸಿನ ಪ್ರಸವ ಎಷ್ಟು ಕಷ್ಟಕರವಾದುದೆಂದು ಅನುಭವಿಸಿ ತಿಳಿದಿದ್ದೇನೆ. ಒಂದು ಸಣ್ಣ ಪತ್ರಿಕೆ ತರುವುದೇ ಅಷ್ಟು ಕಷ್ಟದ್ದಾದಾಗ, ಬೃಂದಾವನ ವಾಣಿಯಂತಹ ವೈವಿಧ್ಯಮಯ, ಸುಂದರ, ಸಾಹಿತ್ಯಪೂರ್ಣ, ಸಂವೇದನಾಶೀಲ ಪತ್ರಿಕೆಯ ಪ್ರತಿ ಸಂಚಿಕೆಯ ಹಿಂದೆ ಎಂತಹ ಪರಿಶ್ರಮವಿರುತ್ತದೆಂಬ ಕಲ್ಪನೆಯನ್ನು ನಾನು ಮಾಡಿಕೊಳ್ಳಬಲ್ಲೆ.

ಬೃಂದಾವನ ವಾಣಿ ಪ್ರತಿ ಸಂಚಿಕೆಯಲ್ಲೂ ಹೊಸತನ್ನು ಕೊಡುತ್ತಿದೆ, ಹೊಸ ವಿಭಾಗಗಳನ್ನು ಸೇರಿಸುತ್ತಿದೆ, ಹೆಚ್ಚು ಮೌಲಿಕವಾಗುತ್ತಿದೆ, ಹೆಚ್ಚು ಹೆಚ್ಚು ಓದುಗ ವಲಯಗಳಿಗೆ ವಿಸ್ತರಿಸುತ್ತಿದೆ. ಇಂದು ಕನ್ನಡದಲ್ಲಿ ಪ್ರಕಟವಾಗುತ್ತಿರುವ ಯಾವುದೇ ಪತ್ರಿಕೆಗೆ ಸಮನಾಗಿ ಬೃಂದಾವನ ವಾಣಿ ನಿಲ್ಲುತ್ತದೆ. ಇದರಲ್ಲಿ ಸುದ್ದಿಯಿದೆ, ಸಾಹಿತ್ಯವಿದೆ, ಕಾವ್ಯವಿದೆ, ಕಲೆಯಿದೆ, ಮಕ್ಕಳ ಪ್ರತಿಭಾ ಪ್ರದರ್ಶನವಿದೆ ಮತ್ತು ಎಲ್ಲಕ್ಕೂ ಮಿಗಿಲಾಗಿ ಸಂಪಾದಕ ವರ್ಗ ಮತ್ತು ಬರಹಗಾರರ ಕನ್ನಡ ಪ್ರೇಮ, ಸೃಜನಶೀಲತೆ ಮತ್ತು ಆತ್ಮೀಯ ಸಹೃದಯತೆಯಿದೆ. ಈ ಕಾರಣದಿಂದಲೇ ಬೃಂದಾವನ ವಾಣಿ ಆತ್ಮೀಯವಾಗುತ್ತದೆ. ನೀವೆಲ್ಲರೂ ಆತ್ಮೀಯರಾಗುತ್ತೀರಿ.

ಸಂಪಾದಕ ವರ್ಗ, ಮಿಲನ ತಂಡ ಮತ್ತು ಬೃಂದಾವನ ವಾಣಿಯನ್ನು ಜತನದಿಂದ ರೂಪಿಸುತ್ತಿರುವ ಎಲ್ಲ ಕಾಣದ ಕೈಗಳಿಗೂ ನನ್ನ ಹೃದಯಪೂರ್ವಕ ಶುಭಾಶಯಗಳು.

ಬೃಂದಾವನದಲ್ಲಿ ಮೊಳಕೆಯೊಡೆದ 'ಬೃಂದಾವನ ವಾಣಿ' , ಮಲ್ಲಿಗೆಯ ಬಳ್ಳಿಯಂತೆ ಬೆಳೆದು, ಕನ್ನಡಿಗರೆಲ್ಲರ ವಾಣಿಯಾಗಿ, ತನ್ನ ಆತ್ಮೀಯ ಸವಿ ಕಂಪನ್ನು ಎಲ್ಲ ಕಡೆ ಸೂಸಲಿ.

ಪ್ರೀತಿಯಿಂದ,

**ದಾಶರಥಿ ಘಟ್ಟು** (ನ್ಯೂ ಜೆರ್ಸಿ)

ಬೃಂದಾವನ ವಾಣಿ, ಕನ್ನಡದ ಒಂದು ಪ್ರಬುದ್ಧ ಪತ್ರಿಕೆಯಾಗಿ ಹೊರಹೊಮ್ಮುತ್ತಿದೆ. ಇದು ಒಂದು ಉತ್ತಮ ಮಾಸಪತ್ರಿಕೆಯಾಗುವ ಎಲ್ಲಾ ಲಕ್ಷಣಗಳಿವೆ. ದೊಡ್ಡವರಿಂದ ಹಿಡಿದು , ಚಿಣ್ಣರ ತನಕ ಎಲ್ಲರಿಗೂ ಪ್ರಿಯವಾಗುವ ಇ-ಪತ್ರಿಕೆ. 'ಸುಧಾ', ತರಂಗ' ಗಳಿಗೆ ಸರಿಸಮವಾಗಿ ನಿಲ್ಲಬಹುದು. ಸಂಪಾದಕರ ಬಳಗ ಹಾಗೂ ಲೇಖಕರ ಬಳಗಕ್ಕೆ ಹೃತ್ಪೂರ್ವಕ ಧನ್ಯವಾದಗಳು, ಅಭಿನಂದನೆಗಳು. ನಾನು ಬೆಂಗಳೂರಿನಿಂದ 350 ಕಿ.ಮೀ. ದೂರದ ಚೆನ್ನೈನಲ್ಲಿ ವಾಸವಾಗಿದ್ದೇನೆ. ಇಲ್ಲಿ ಒಂದು ಕನ್ನಡ ಪತ್ರಿಕೆಯಾಗಲಿ, ಸಿನೆಮಾ ಆಗಲಿ, ಕೊನೆಗೆ ಕನ್ನಡ ಶಬ್ದ ಕೂಡ ಕೇಳಿಸುವುದಿಲ್ಲ. ಆದರೆ ನೀವು ಸಾವಿರಾರು ಮೈಲಿ ಆಚೆ ಬೇರೊಂದು ಭೂಖಂಡದಲ್ಲಿದ್ದು, ಕನ್ನಡದ ಸವಿ ಸವಿಯುತ್ತಿದ್ದೀರಿ. ನಿಜವಾಗಲೂ ನೀವುಗಳು ಧನ್ಯರು.

ಮತ್ತೊಮ್ಮೆ ಧನ್ಯವಾದಗಳು.

**ಹಿ.ಶ. ಸುಬ್ರಹ್ಮಣ್ಯ (ಚೆನ್ನೈ)**

ಸಂಚಿಕೆ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು.

**ಸುಜಯಾ ರಾವ್ (ನ್ಯೂ ಜೆರ್ಸಿ)**

ಬೃಂದಾವನ ವಾಣಿ ಸಂಪಾದಕ ಮಂಡಳಿಗೆ ಅಭಿನಂದನೆಗಳು. ನಿಮ್ಮ ಕಾರ್ಯ ವೈಖರಿ ಉತ್ತಮವಾಗಿದೆ. ಎಲ್ಲ ಲೇಖನಗಳನ್ನು ಒದಿ ಆನಂದಿಸಿದೆ. ನಿಮ್ಮ ಈ ಒಳ್ಳೆಯ ಕೆಲಸವನ್ನು ಮುಂದುವರೆಸಿ.

**ಸಂತೋಷಕುಮಾರ್ ಕಡ್ಲೆಬೇಳೆ (ನ್ಯೂ ಜೆರ್ಸಿ)**

ಬೃಂದಾವನ ವಾಣಿಯ ಸಂಚಿಕೆ ತುಂಬಾ ಅಚ್ಚುಕಟ್ಟಾಗಿ ಮೂಡಿ ಬಂದಿದೆ. ಸಂಪಾದಕ ವರ್ಗದವರಿಗೆ ಅಭಿನಂದನೆಗಳು.

**ಲಕ್ಷ್ಮಿ ಶೈಲೇಶ್ (ನ್ಯೂ ಜೆರ್ಸಿ)**

ಬೃಂದಾವನ ವಾಣಿ ಸೊಗಸಾಗಿ ಮೂಡಿ ಬಂದಿದೆ. ಮಕ್ಕಳು ಬರೆದ ಚಿತ್ರಗಳು ಒಂದಕ್ಕಿಂತ ಒಂದು ಸುಂದರವಾಗಿವೆ. ಅಭಿನಂದನೆಗಳು.

**ಬಿಂದು ಬಾಬು (ನ್ಯೂ ಜೆರ್ಸಿ)**

ಎಂದಿನಂತೆ ಮತ್ತೊಂದು ಬಾರಿ ತನ್ನ ಪ್ರತಿಭೆಯನ್ನು ತೋರಿಸಿದ ಬೃಂದಾವನ ವಾಣಿಗೆ ಶುಭಾಶಯಗಳು.

**ಉಷಾ ಸ್ವಾಮಿ (ನ್ಯೂ ಜೆರ್ಸಿ)**

ಬೃಂದಾವನ ವಾಣಿಯ ಸಂಚಿಕೆ ತುಂಬಾ ಅಚ್ಚುಕಟ್ಟಾಗಿ ಮೂಡಿ ಬಂದಿದೆ. ಸರಿತಾ ಅವರು ಬರೆದ ಕವನ, ಬಿಂದು ಅವರು ಬರೆದ ಲೇಖನ ಚೆನ್ನಾಗಿವೆ.

**ಗಾಯತ್ರಿ ಗೋಪಿ (ನ್ಯೂ ಜೆರ್ಸಿ)**

ಬೃಂದಾವನ ವಾಣಿ ಅದ್ಭುತವಾಗಿ ಮೂಡಿ ಬಂದಿದೆ...ಸಂಪಾದಕೀಯ ತಂಡಕ್ಕೆ ಅಭಿನಂದನೆಗಳು. ಅಹೀಶ್ ಅವರು ಬರೆದ ' e ಲೋಕದಲ್ಲಿ ನಾವು ನೀವು' 'ಲೇಖನವನ್ನು ಓದಿದೆ...ಅಲ್ಲಿ ಹೇಳಿದ ಪ್ರತಿಯೊಂದು ಮಾತು ಅಕ್ಷರ ಸಹ ಸತ್ಯ!!!! ಜೊತೆಗೆ ಎಲ್ಲರ ಲೇಖನಗಳನ್ನು ಓದಲು ಅವಕಾಶ ಮಾಡಿಕೊಟ್ಟ ಬೃಂದಾವನ ವಾಣಿ 'ಇ ಪತ್ರಿಕೆ' ಗೆ ಒಂದು ಜೈ!!

**ಸಂಧ್ಯಾ ಮಲ್ಲಿಕ್ (ನ್ಯೂ ಜೆರ್ಸಿ)**

'ಬೃಂದಾವನ ವಾಣಿ ' ಯನ್ನು ಮೆಚ್ಚಿದ ಮತ್ತು ಮಿಂಚಂಚೆ ಕಳುಹಿಸಿದ ಎಲ್ಲರಿಗೂ ಧನ್ಯವಾದಗಳು. ನಿಮ್ಮ ಅನಿಸಿಕೆ ಮತ್ತು ಸಲಹೆಗಳು ಮುಂಬರುವ ವಾಣಿಯ ಸಂಚಿಕೆಗಳನ್ನು ಇನ್ನೂ ಅಚ್ಚುಕಟ್ಟಾಗಿ ಪ್ರಕಟಿಸುವಲ್ಲಿ ಸಹಾಯವಾಗುತ್ತವೆ. ಕಾರಣಾಂತರಗಳಿಂದ ಈ ಸಂಚಿಕೆಯಲ್ಲಿ "ವ್ಯಕ್ತಿ ಪರಿಚಯ" ಅಂಕಣವನ್ನು ಪ್ರಕಟಿಸಲಾಗಿಲ್ಲ. ಇದಕ್ಕಾಗಿ ವಿಷಾದಿಸುತ್ತೇವೆ.

**-ಬೃಂದಾವನ ವಾಣಿ ಸಂಪಾದಕ ಮಂಡಳಿ**


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಹಿನ್ನೋಟ

## ಬೃಂದಾವನ ವಸಂತೋತ್ಸವ !!



ಸುಜಯಾ ರಾವ್

ಬೃಂದಾವನದ ಆಶ್ರಯದಲ್ಲಿ ಏಪ್ರಿಲ್ 9 ರಂದು ಮಿಲನ ತಂಡದ ನೇತೃತ್ವದಲ್ಲಿ, ಸೌತ್ .ಬ್ರೂನ್ಸ್ವಿಕ್ ಸೀನಿಯರ್ ಸೆಂಟರ್ ನಲ್ಲಿ ನಡೆದ ವಸಂತೋತ್ಸವ ಆಚರಣೆಗೆ  ಸುಮಾರು 400 ಕ್ಕೂ ಹೆಚ್ಚು ಕನ್ನಡಿಗರು ಪಾಲ್ಗೊಂಡು, ಈ ಕಾರ್ಯಕ್ರಮವನ್ನು Blockbuster ಎನ್ನಿಸಿದ್ದು ಬಹಳ ಹೆಮ್ಮೆಯ ವಿಷಯ.

ಶ್ರೀ ಶ್ರೀನಿವಾಸ ಭಟ್ಟರ್ ರವರ  ಶ್ರೀ ಗಣಪತಿ ಪೂಜೆ ಮತ್ತು ಪಂಚಾಂಗ ಶ್ರವಣದೊಂದಿಗೆ ಬೆಳಗಿನ 11 ಗಂಟೆಗೆ ಪ್ರಾರಂಭವಾದ ಯುಗಾದಿ ಕಾರ್ಯಕ್ರಮ ಬೇವು ಬೆಲ್ಲ ವಿತರಣೆಯ ನಂತರ, ರುಚಿಯಾದ ಒಬ್ಬಟ್ಟಿನ ಹಬ್ಬದೂಟದೊಂದಿಗೆ ಬಹಳ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಪ್ರಾರ್ಥನೆ, 'ಕನ್ನಡ ಕಲಿ' ಮಕ್ಕಳಿಂದ ಸಂಕೇತ ಗೀತೆ, ರಾಷ್ಟ್ರಗೀತೆಗಳಿಂದ ಪ್ರಾರಂಭವಾದ ವೈವಿಧ್ಯಮಯ ಕಾರ್ಯ್ರಮಗಳು ಎಲ್ಲರನ್ನು ರಂಜಿಸಿದವು. ಈಸ್ಟ್ ವಿಂಡ್ಸರ್ ಕನ್ನಡ  ಶಾಲಾ ಮಕ್ಕಳು 'ವಸಂತ ಮಾಸ ಬಂದಾಗ' ಕಿರು ನಾಟಕವನ್ನು ಪ್ರಸ್ತುತ ಪಡಿಸಿದರು. ಮಕ್ಕಳ ನಡುವಿನ ಕನ್ನಡದಲ್ಲಿನ ಮಾತುಕತೆ, ಸಮೂಹಗಾನವಾಗಿ ಹಾಡಿದ "ನಾವಾಡುವ ನುಡಿಯೇ ಕನ್ನಡ ನುಡಿ" ಎನ್ನುವ ಜನಪ್ರಿಯ ಗೀತೆ , ಎಲ್ಲರನ್ನು ರಂಜಿಸಿ, ಮಕ್ಕಳಲ್ಲಿ ಕನ್ನಡ ಭಾಷಾ ಪ್ರಜ್ಞೆಯನ್ನು ಮೂಡಿಸುವ  'ಬೃಂದಾವನ ಕನ್ನಡ ಶಾಲೆ'ಯ ಪ್ರಯತ್ನವನ್ನು ಬಿಂಬಿಸಿದವು. 'ವಿ ಕನ್ನಡ'  ತಂಡದ ಮಕ್ಕಳಿಂದ 'ಯಾವ ಮೋಹನ ಮುರಳಿ ಕರೆಯಿತು' ಕೊಳಲು ವಾದನಕ್ಕೆ ಮೂಕಾಭಿನಯವಂತೂ ಪ್ರೇಕ್ಷಕರನ್ನು ಮಂತ್ರ-ಮುಗ್ಧರನ್ನಾಗಿಸಿತು.  ಸೌತ್ ಬ್ರೂನ್ಸ್ವಿಕ್ ಕನ್ನಡ ಶಾಲೆಯ  ಪುಟ್ಟ ಪುಟಾಣಿ ಮಕ್ಕಳ 'ಮುತ್ತು ಮುತ್ತು ನೀರ ಹನಿಯ ' ನೃತ್ಯ ಹಾಗೂ ಅ,ಆ,ಇ,ಈ ಹಾಡಿಗೆ ಅಭಿನಯವಂತೂ ಬಣ್ಣಿಸಲಸಾಧ್ಯ.

ಯುವ ಬೃಂದಾವನದ 'ಮಹದೇಶ್ವರ' ಹಾಗೂ ರಂಗೀತರಂಗ ಹಾಡಿನ  ನೃತ್ಯಕ್ಕಂತೂ ಚಪ್ಪಾಳೆಯ ಸುರಿಮಳೆಯೋ ಸುರಿಮಳೆ. ಅನಿಲ್ ಸೇಲಮ್ ರವರ ಗಿಟಾರ್ ವಾದನ  ಅದ್ಭುತವಾಗಿತ್ತು. 'ಕ್ರೇಜಿ ಕ್ಯಾರಿಯೋಕಿ'  ತಂಡದವರು ಪ್ರಸ್ತುತ ಪಡಿಸಿದ 'ಮಧುರ ಗಾನಗಳ ಗೀತಗುಚ್ಛ'  ಎಲ್ಲರ ಮನ  ಸೂರೆಗೊಂಡಿತ್ತು. ಇಪ್ಪತ್ತಕ್ಕೂ ಅಧಿಕ ಹವ್ಯಾಸಿ ಹಾಡುಗಾರರು, ಕನ್ನಡದ ಜನಪ್ರಿಯ ಚಲನಚಿತ್ರ ಗೀತೆಗಳನ್ನು  ಹಾಡಿದರು.

ಕೊನೆಯದಾಗಿ, ನಮ್ಮ ಬೇಡಿಕೆಗೆ ಓಗೊಟ್ಟು ಬೆಂಗಳೂರಿನಿಂದ ಆಗಮಿಸಿದ 'ಸ್ವರಾಮೃತ' ತಂಡದವರು, ಸ್ಥಳೀಯ ಕಲಾವಿದರ ಪಕ್ಕವಾದ್ಯದೊಂದಿಗೆ  ನಡೆಸಿಕೊಟ್ಟಂತಹ  ಕನ್ನಡ-ಫ್ಯೂಷನ್ ಕಾರ್ಯಕ್ರಮ ಬಹಳ  ವೈಶಿಷ್ಟ್ಯಪೂರ್ಣವಾಗಿತ್ತು. ಅವರ ಹಲವಾರು ಹಾಡುಗಳಿಗೆ ಜನ ಹುಚ್ಚೆದ್ದು ಕುಣಿದರು.

ಈ ಶುಭ ಸಂದರ್ಭದಲ್ಲಿ ಬೃಂದಾವನ ಕನ್ನಡ ಶಾಲೆಯ ಸ್ವಯಂಸೇವಕರು ಹಾಗೂ ಬೃಂದಾವನ ವಾಣಿ, ಸಾಹಿತ್ಯಬೃಂದಾವನದ ಸ್ವಯಂಸೇವಕರನ್ನು ಗುರುತಿಸಿ, ವೇದಿಕೆಯ ಮೇಲೆ ಬರಮಾಡಿ ಕಿರುಕಾಣಿಕೆಯನ್ನು ನೀಡಲಾಯಿತು. ಈ ವರುಷದ ಯುಗಾದಿ ಹಬ್ಬ/ವಸಂತೋತ್ಸವ ಬಹಳ ವಿಜೃಂಭಣೆಯಿಂದ ನೆರವೇರಿತು. ■

## ವಸಂತೋತ್ಸವ ಛಾಯಾಚಿತ್ರಗಳು













Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ವಸಂತೋತ್ಸವ ಛಾಯಾಚಿತ್ರಗಳು















**ನ್ಯೂ** ಜೆರ್ಸಿ ಕನ್ನಡ ಮಕ್ಕಳ ಕನ್ನಡ ಕಲಿಕೆಯ ಸಂಭ್ರಮ, ಬೃಂದಾವನ ಕನ್ನಡ ಕಲಿಸೋಣ ಕಾರ್ಯಕ್ರಮದ ಮಹತ್ತರ ಸಾಧನೆ.. ನಮ್ಮ ಮೂರನೆಯ ಕನ್ನಡ ಶಾಲೆ ಎಡಿಸನ್ ನಲ್ಲಿ ಪ್ರಾರಂಭವಾಗಿದೆ.



ವಸಂತೋತ್ಸವ ಸಂದರ್ಭದಲ್ಲಿ ಬೃಂದಾವನ ಕನ್ನಡ ಶಾಲೆಯ ಸ್ವಯಂಸೇವಕ ಶಿಕ್ಷಕರನ್ನು ವೇದಿಕೆಯ ಮೇಲೆ ಬರಮಾಡಿ ಕಿರುಕಾಣಿಕೆಯನ್ನು ನೀಡಲಾಯಿತು.









Copyright © KCO – Brindavana

# ಬೃಂದಾವನ ವಾಣಿ

**ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ**




## ಯುವ ವಾಣಿ

ಯುವ ಬೃಂದಾವನ ಒಂದು ಉತ್ಸಾಹದ ಚಿಲುಮೆ. ಯಾವಾಗಲು ಏನಾದರು ಒಂದು ಹೊಸತನ ಇರುತ್ತದೆ.ಈ ಸಲ ವಸಂತೋತ್ಸವದಂದು ನಮ್ಮ ಕನ್ನಡದ ಹುಡುಗ ಅನಿಲ್ ಸೇಲಂ ತನ್ನ ಸಂಗೀತದ ಅನುಭವ ಯುವ ಬೃಂದಾವನದ



ಜೊತೆ ಹಂಚಿಕೊಂಡ .ಅನಿಲ್ 11 ಮತ್ತು 6 ತಂತುಗಳ ಗಿಟಾರ್ ಅಲ್ಲದೆ ಫ್ರೆಂಚ್ ಹಾರ್ನ್ ,ಕೀಬೋರ್ಡ್ , ಐರಿಶ್ ಟಿನ್ ವ್ಹಿಸ್ಲ ಗಳನ್ನೂ ನುಡಿಸುತ್ತಾನೆ. ಅವನ ಸಂಗೀತ ಸಾಹಿತ್ಯ ರಚನೆಯ ತುಣುಕು ಎಲ್ಲರ ಮುಂದಿಟ್ಟು ಅವನು ಕಲಿತು ಬಂದ ಹಾದಿಯ ಬಗ್ಗೆ ಕೂಡ ವಿವರಿಸಿ,



ಅವನ ಹೊಸ ಆಲ್ಬಮ್ ರೂಟ್ಸ್( roots ) ನ ತುಣುಕು ಗಳ ನುಡಿಸಿ ಅಲ್ಲಿ ಕೇಳುತ್ತಿದ್ದ 30 ಮಕ್ಕಳನ್ನ ಮಂತ್ರ ಮುಗ್ಧರನ್ನಾಗಿಸಿ ಸಂಗೀತದ ಅಲೆಗಳ ಮೇಲೆ ತೇಲಿಸಿದ ಅನಿಲ್. ಕೊನೆಗೆ ತನ್ನ ಇನ್ಸ್ಟ್ರುಮೆಂಟ್ ಗಳನ್ನ ವಿವರಿಸಿದಾಗ ಘನ ಚರ್ಚೆ ನಡೆಸಿದರು ನಮ್ಮ ಯುವಕರು. ಅನಿಲ್ ಸೇಲಂ ಮೈಸೂರಿನವರಾದ ಅನುಸೂಯ ಮತ್ತು ಕೃಷ್ಣಮೂರ್ತಿ ಯವರ ಪ್ರತಿಭಾವಂತ ಮಗ .ಅನಿಲ್ ಕಾಲೇಜ್ ಆಫ್ ನ್ಯೂ ಜೆರ್ಸಿ ಯಲ್ಲಿ ಬಯಾಲಜಿ ಓದುತ್ತಿದ್ದಾನೆ.

ಯುವ ಬೃಂದಾವನದ ನಾಯಕರುಗಳಾದ ಸುಹಾಸ್ ಕುಮಾರ್ ಮತ್ತು ಅಮೂಲ್ಯ ಕಟ್ಟಿಮನಿ 2016 ರ ಯುವ ಬೃಂದಾವನದ ಕಾರ್ಯಕ್ರಮಗಳ ಪಟ್ಟಿ ತಯಾರಿಸಿದ್ದಾರೆ .ಯುವಕ, ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಯುವ-ಬೃಂದಾವನದಲ್ಲಿ ಪಾಲ್ಗೊಳ್ಳಲುyuva@brindavana.org ಗೆ ಮಿಂಚಂಚೆ ಕಳಿಸಿ.




## ಹೀಗೊಂದು ಪ್ರಶ್ನೆ. . . .

ಈ ಕೆಳಗಿನ ಛಾಯಾಚಿತ್ರಗಳಿಗೆ ಒಂದು ಸಾಲಿನ 'ತಲೆಬರಹ' ಬರೆದು ಕಳಿಸಿ.

ನಮ್ಮ ಮಿಂಚಂಚೆ ವಿಳಾಸ : vani@brindavana.org

ಆಯ್ದ 'ತಲೆಬರಹ'ಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

**" .................. " ?**



**"................" ?**



**ಛಾಯಾಚಿತ್ರ ಕೃಪೆ : ಶಿವಶಂಕರ ಬಣಗಾರ ( ಹೊಸಪೇಟೆ ,ಕರ್ನಾಟಕ)**

ಕಳೆದ ಸಂಚಿಕೆಯ 'ಹೀಗೊಂದು ಪ್ರಶ್ನೆ' ಛಾಯಾಚಿತ್ರಗಳಿಗೆ ಒಂದು ಸಾಲಿನ 'ತಲೆಬರಹ' ಬರೆದು ಕಳುಹಿಸಿದವರು.



೧) "ಮುಂಜಾವಿನಿಂದ ಮುಸ್ಸಂಜೆಯ ಕಡೆಗೆ ಬಾಳಿನ ಪಯಣ" - ಹಿ.ಶ. ಸುಬ್ರಹ್ಮಣ್ಯ (ಚೆನ್ನೈ)

೨ ) "ಮೂಡಣದಲಿ ರವಿ ಉದಯಿಸಲು ತೆರೆಯಿತು ಭಾಗ್ಯದ ಬಾಗಿಲು !!"
"ಪಡುವಣದಿ ಅರುಣ ಅಸ್ತಮಿಸೆ, ಮೋಕ್ಷದ ದಿಕ್ಕಿಗೆ ನಿರ್ಗಮಿಸೆ ?" - ಪ್ರಸನ್ನ ಕುಮಾರ್ (ನ್ಯೂ ಜೆರ್ಸಿ)




Copyright © KCO – Brindavana

## ಕನ್ನಡ ಬಳಗದ ಸಾಹಿತ್ಯಾಭಿರುಚಿ

### ಸಾಹಿತ್ಯ ಬೃಂದಾವದಲ್ಲಿ ಮೆಚ್ಚುಗೆ ಪಡೆದ ಅನುವಾದಿತ ಕವನ

ಮೂಲ ಕವನ: Midnight Lamentation by Harold Monro. ಮೂಲ ಕವನ ನೋಡಲು ಇಲ್ಲಿ ಕ್ಲಿಕ್ಕಿಸಿ



ಸರಿತಾ ನವಲಿ

### ನಿಶೀಥದಲ್ಲೊಂದು ವಿಲಾಪ

ಓ ಸಂಗಾತಿ, ನಾನು-ನೀನು
ನಿರ್ಜೀವವಾಗಿ ಧರೆಗುರುಳಿ,
ಮಣ್ಣಲ್ಲಿ ಮಣ್ಣಾಗುವೆವು ಮರಳಿ.
ಅದೆಂಥ ಏಕಾಂಗಿತನ ನಮ್ಮಿಬ್ಬರಲ್ಲಿ!
ನೀನಿಲ್ಲದ ನಾನು, ನಾನಿಲ್ಲದ ನೀನು;
ಮಾಡುವುದಾದರೂ ಏನು? (೧)

ಸಹಿಸಲಾರೆ, ಮೊದಲು ನೀ-
ನನ್ನನ್ನಗಲುವ ಕಲ್ಪನೆ;
ಎಣಿಸಲಾರೆ ನೀ ದುಃಖಿಸುವ ನನ್ನ ಕೊನೆ.
ಏಕಾಂಗಿಗಳು ನಾವೀಗ;
ಮಾಡುವುದೆಂತು, ಈ ದಾರಿ ಸುಗಮ?
ಆಗಲು ನಮ್ಮ ಸಮಾಗಮ. (೨)

ನಿಕಟ ಏಕತಾನ ನಮ್ಮೀ ಜನನ;
ನಮ್ಮಲ್ಲಿದೆ ಅದೇ ಸೊಗಸು,
ಅದೇ ನಿರ್ಮಲ ಮನಸು.
ನಮ್ಮಿಬ್ಬರ ಅಗಲಿಕೆ ದಿಟ; ನಮ್ಮೀ ಅಗಲಿಕೆ.
ಈ ಹೃದಯಗಳು ಹೀಗೆ ಮಿಡಿಯಲು,
ಸಾಧ್ಯವೇ ಹೊಂಗಿರಣ ಕಾಣಲು? (೩)

ನಾ ಓಡುವೆ, ಹೊಸ ಹುಮ್ಮಿನಿಂದ ನಿನ್ನನ್ನರಸಿ,
ಹಾದಿಬೀದಿಗಳಲ್ಲಿ ಕಣ್ಣು ಹಾಯಿಸಿ.
ನಿನ್ನುಸಿರಿನ ಮಿಡಿತ ಆಲಿಸಿ,
ನಮ್ಮ ಸಮ್ಮಿಲನ ಬಯಸಿ.
ಕೇಳಿ ನಿನ್ನ ಅಭಯವಾಣಿ ಮುದದಿ,
ಒಂದಾಗುವ ಪ್ರೀತಿಯ ಮಹದಾನಂದದಿ. (೪)

ಅದೆಷ್ಟು ನಶ್ವರ ಈ ಜೀವನಿಯಮ;
ಕೃಶವಾಗಿ ನಶಿಸುವುದು, ತಪ್ಪಿಸಲಾಗದ ಕ್ರಮ.
ಕಾಡುವುದು ಸದಾ ಅಂತ್ಯದ ಚಿಂತೆ.
ನಿನ್ನುಸಿರ ದನಿ ಕೇಳದೆ,
ನನ್ನೀ ಮನದ ಮ್ಲಾನತೆ;
ಹರಡಿದೆ ಎಲ್ಲೆಡೆಯೂ ಶಾಂತತೆ. (೫)

ಓ! ಕ್ಷಣಮಾತ್ರದಲ್ಲಿ ವಿದಾಯ;
ನಿಸ್ತೇಜ ಮುಖಭಾವ; ಅಂತ್ಯದ ಪರಿಚಯ.
ಅಲ್ಲಿರಬಹುದೊಂದು ತಾಣ,
ನಿರ್ಜೀವ ನಮ್ಮೀ ವದನ,
ಕಳೆಗುಂದಿದ ಪುಷ್ಪಗಳ ಆವರಣ,
ಬರೀ ದುಃಖಿತ ವಾತಾವರಣ. (೬)

ಏನೀ ಅಭದ್ರತೆ?
ಅನುಸರಿಸಿ ನಮ್ಮೀ ಮಿಳಿತ ಮನ,
ಅರಸೋಣವೇ ಜೀವ ಚಿರಂತನ?
ಬರೀ ಸ್ಪರ್ಶ, ನಿನ್ನೀ ಮೆಲ್ನುಡಿ;
ಭಾವಿಸಲು ನಿನ್ನ ಸ್ಮೃತಿ,
ಅನಿಸುವುದು ನನಗೆ ಅಪಕೀರ್ತಿ. (೭)

ದಾರಿಯ ನಾ ಕಾಣದಾದೆ,
ಪ್ರೀತಿಯಿಂದ ಪ್ರೀತಿಗೆ.
ನಿನ್ನನ್ನೆಂದಿಗೂ ಸೇರಲಾರೆ,
ಈ ದೇಹದಿಂದಾಚೆಗೆ.
ನೀನು-ನಾನು ಮಣ್ಣಲ್ಲಿ ಮಣ್ಣಾದಾಗ;
ಉಳಿದಿಲ್ಲ ಅಲ್ಲಿ ಏನೂ ಹೇಳಲು,
ಅಲ್ಲಿದೆ, ಬೀಗವಿಕ್ಕಿದ ಬಾಗಿಲು. (೮) ■

## ಕವನಗಳು



### ಮಾತು. . .

ಲಕ್ಷ್ಮಿ ಕೊಲಾಲ

ಹುಡುಕುತ ಅಲೆ ಅಲೆಯುತ
ನಿನ ಮಾತ ಕೇಳುವಾ ಇಚ್ಛೆ...
ಸ್ಮರಿಸಲು ಕನವರಿಸಲು
ಕನಸಿಲ್ಲವಲ್ಲವೆಂಬ ಚಿಂತೆ..

ಏನ ಹುಡುಕಲಿ ? ನಾ ಏಕೆ ಹುಡುಕಲಿ?
ಎಂದು ಯೋಚಿಸುವೆ ನಾ ಅರಿವಿರದೆ..!!

ನಿನ್ನೊಲವನು ಅರಸಿ ಅರಸುತಾ..
ನಿನ್ನೊಳಿತನು ಬಯಸುವಾಸೆ..
ಆ ಆಸೆಯು ಕನ್ನಡಿಯ ಗಂಟಾಗದಿರಲೆಂಬ
ಬಯಕೆ ನನ್ನೀ ಮನಕೆ..!

ಹೇಗೆ ಹೇಳಲಿ ?ಇನ್ನೆಲ್ಲಿ ಹುಡುಕಲಿ?
ಎಂದು ಮಿಡಿದಿದೆ..ಈ ಮನವು ತೊದಲಿದೆ..
ದಿನವೂ ತುಸುಮಾತು..ಇರಲಿ ಅದು ಪಿಸುಮಾತು..
ಈ ಮಾತಲಿ ಅಡಗಿದೆ ...ನೀನರಿಯದಾ ಆ ಒಲವ ಹುಟ್ಟು..!!

### ಬುತ್ತಿ. . .

ಪ್ರೀತಿಯಾ ಸಿಹಿಬುತ್ತಿಯ ಕಟ್ಟಿಡುತಿರೆ
ಬಂಧಿಸಿ ನಾ ಇಂದು..
ಜಾರಿದಾ ಸಿಹಿಮುತ್ತಲಿ
ಬಿಡಿಸಿದೆಯಲ್ಲ ನೀ ಬಳಿ ಬಂದು... !

ಆ ಸಿಹಿ ಮುತ್ತನು ಬಚ್ಚಿಡುತಿರೆ
ಈ ಹೃದಯದ ಪೆಟ್ಟಿಗೆಯಲಿ ನಾ ತಂದು..
ಸ್ಪರ್ಶದಾ ಹೊಸ ಬೆಳಕಲಿ
ಹುಡುಕಿದೆಯಲ್ಲ ಮೆಲ್ಲನೆ ನೀ ಇಳಿದು...!


ಮುಸ್ಸಂಜೆಯಲಿ ಮುನಿದು ಮುಚ್ಚಿದರೆ
ಬಾಗಿಲನು ಬೇಗ ಬೇಗಾ..
ಕರೆಯುವೆ ನಿನ್ನ ಅಂಗೈಯ್ಯ ಅರಮನೆಗೆ
ಬರದಿರಲಿ ನಾ ಹೇಗೆ ಇನ್ನೀಗಾ..?

ರಾತ್ರಿಯ ನಿದಿರೆಯಲು ಸಿಹಿಕನಸು..
ಆ ಕನಸಿನಪ್ಪುಗೆಯಲು ಹುಸಿಮುನಿಸು...
ನಿನ್ನ ಮರೆಯಲೋ ..ಮಣಿಯಲೋ.. ಮುದ್ದಿಸಲೋ.?
ನನಗಿದುವೆ ಒಂದು______ಸಿಹಿ ಒಗಟು...!!


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ಹರಿನಾಮದ ಹಿರಿಮೆ

**"ಹರಿ ನಾಮಕೀರ್ತನೆ ಅನುದಿನ ಮಾಳ್ಪಗೆ ನರಕ ಭಯಗಳುಂಟೇ?"**
**"ಕಲಿಯುಗದಲಿ ಹರಿ ನಾಮವ ನೆನೆದರೆ ಕುಲ ಕೋಟಿಗಳುದ್ಧರಿಸುವವು"**

**ಕ**ಲಿಯುಗದ ಮಹಿಮೆಯೇ ಹೀಗೆ. ಇಲ್ಲಿ ಅಸುರೀ ಶಕ್ತಿಗಳದ್ದೇ ಪ್ರಭಾವ. ಪಾಪಕರ್ಮಗಳಂತೂ ಎಲ್ಲೆಡೆ ಎಡೆಬಿಡದೆ ನಡೆಯುತ್ತವೆ. ಇಲ್ಲಿ ಸಾಧನೆಯೆನ್ನುವುದು ಬಲು ಕಠಿಣ . ವ್ರತಾನುಷ್ಠಾನಗಳಿಗೆ ಆಸಕ್ತಿಯಿರದು. ಮನಸ್ಸಿಗೆ ಏಕಾಗ್ರತೆ ಬರದು. ವಿಷಯಾಸಕ್ತಿಗಳು ದಾರಿ ತಪ್ಪಿಸುವವು. ಮನಸ್ಸು ಚಂಚಲವಾಗಿ ಸ್ಥಿರತೆ ಎನ್ನುವುದೇ ಇಲ್ಲ. ಧ್ಯಾನ ಮಾಡೋಣವೆಂದರೆ ಧಾರಣಾಶಕ್ತಿಯ ಕೊರತೆ. ಯಜ್ಞಯಾಗಾದಿಗಳಿಗೆ ಸಂಪನ್ಮೂಲಗಳ ಕೊರತೆ. ಪ್ರಾಕೃತಿಕ ವಿಕೋಪಗಳಿಂದಾಗಿ ಎಲ್ಲರಿಗೂ ಶಾರೀರಿಕ ಬಾಧೆ , ವಿಚಿತ್ರ ರೋಗ ರುಜಿನಗಳು, ನಾನಾ ವಿಧದ ಕಷ್ಟ ಕಾರ್ಪಣ್ಯಗಳು. ವೇದಾದಿ ಪುಣ್ಯಪ್ರದ ಶಾಸ್ತ್ರಗಳ ಶ್ರವಣಕ್ಕೆ ಅವಕಾಶಗಳೇ ಇಲ್ಲ. ಇದ್ದರೂ ಅಲ್ಲಿ ಶ್ರದ್ಧೆಯಿಲ್ಲ. ಹಾಳು ಹರಟೆಯಲ್ಲಿಯೇ ಆಸಕ್ತಿ. ಭಾರತ ಪುರಾಣಾದಿಗಳ ಶ್ರವಣವೆಂದರೆ ಬೇಸರ ತರಿಸುತ್ತವೆ.

ಹೀಗಿರುವಾಗ ಕಲಿಯುಗದಲ್ಲಿ ಪುಣ್ಯ ಸಂಪಾದನೆಯ ಎಲ್ಲ ಹಾದಿಗಳೂ ಪ್ರಯಾಸಕರ. ನೂರಾರು ಜನ್ಮಗಳಿಗೆ ಬೇಕಾಗುವ ಪಾಪಗಳನ್ನು ಕೆಲವೇ ದಿವಸಗಳಲ್ಲಿ ಮಾಡಿಬಿಡುತ್ತೇವೆ. ಇಲ್ಲಿ ನಿಷ್ಕಾಮ ಕರ್ಮಗಳಿಗೆ ಅವಕಾಶವೇ ಇಲ್ಲ. ಇಂತಹ ಸನ್ನಿವೇಶದಲ್ಲಿ ನಮ್ಮ ಸ್ವರೂಪೋದ್ಧಾರವಾದರೂ ಹೇಗಾದೀತು? ಭಗವಂತನ ಅನುಗ್ರಹವನ್ನು ಪಡೆಯುವ ಬಗೆಯಾದರೂ ಹೇಗೆ ? ನಮ್ಮ ಈ ಭವಚಕ್ರ ಪರಿಭ್ರಮಣೆಗೆ ಕೊನೆಯಾದರೂ ಎಂತು? ಸಾಧನೆಯೇ ಸಾಧ್ಯವಿಲ್ಲವೆಂದಾದಮೇಲೆ ಈ ಜನ್ಮದ ಸಾರ್ಥಕ್ಯವಾದರೂ ಏನು?

ಕಲಿಯುಗದಲ್ಲಿ ಕಾಲಪ್ರಭಾವದಿಂದ ಉದ್ಭವಿಸುವ ಈ ಎಲ್ಲ ಸಮಸ್ಯೆಗಳಿಗೂ 'ಭಾಗವತ' ಗ್ರಂಥ , 'ಹರಿನಾಮ ಕೀರ್ತನೆ' ಎನ್ನುವ ಸೂಕ್ತ ಮತ್ತು ಸುಲಭವಾದ ಪರಿಹಾರವನ್ನು ತಿಳಿಸುತ್ತದೆ. ಕಾಲವಶಾತ್ ನಮಗಿಲ್ಲಿ ಪುಣ್ಯದ ಬಾಗಿಲುಗಳೆಲ್ಲ ಮುಚ್ಚಿವೆ ಎಂದು ನಾವಂದು ಕೊಂಡರೆ, ಇದು 'ಹರಿನಾಮ' ಎನ್ನುವ ಮಹಾಪುಣ್ಯದ ರಾಜಮಾರ್ಗವನ್ನೇ ನಮಗೆ ತೋರಿಸಿಕೊಡುತ್ತದೆ. **ಹರಿನಾಮೈವ ಹರಿನಾಮೈವ ಹರಿನಾಮೈವ ಕೇವಲಂ | ಕಲೌ ನಾಸ್ತ್ಯೇವ ನಾಸ್ತ್ಯೇವ ನಾಸ್ತ್ಯೇವ ಗತಿರನ್ಯಥಾ ||** ಎನ್ನುತ್ತಾ ವ್ಯಾಸರು ಕಲಿಯುಗದಲ್ಲಿ ಹರಿನಾಮವನ್ನು ಬಿಟ್ಟರೆ ನಮಗೆ ಅನ್ಯ ಗತಿಯೇ ಇಲ್ಲ ಎಂದು ಸಾರುತಾರೆ. ಅದರ ಮಹಿಮೆಯನ್ನು ತಿಳಿಸುತ್ತಾರೆ. ಹರಿನಾಮದ ಹಿರಿಮೆ ಅಂಥದ್ದು. ಎಲ್ಲ ಪಾಪಗಳನ್ನೂ ಕಳೆಯುವಂಥದ್ದು. ಸರ್ವ ವಿಧದ ಶತ್ರುಗಳನ್ನೂ ಭಂಜಿಸುವುದು ಮತ್ತು ಅಪಾರ ಪುಣ್ಯವನ್ನು ಕರುಣಿಸುವುದು.

ಈ ನಿಟ್ಟಿನಲ್ಲಿ ಚಿಂತಿಸಿದರೆ ಕಲಿಯುಗದ ಜನರೇ ಪುಣ್ಯವಂತರು. ಯಾಕೆಂದರೆ ಕೃತಾದಿ ಯುಗಗಳಲ್ಲಿ ಹರಿಯನ್ನು ಒಲಿಸಿಕೊಳ್ಳಲು ಸಾಧಿಸಬೇಕಾದ ಪುಣ್ಯದ ಲೇಶವೂ ಬೇಡ ಕಲಿಯುಗದಲ್ಲಿ ಕೇಶವನನ್ನು ಒಲಿಸಿಕೊಳ್ಳಲು. ಭಕ್ತಿಯಿಂದ ನಡೆಸುವ ನಾಮಕೀರ್ತನೆಯೊಂದೇ ಸಾಕು ಅದಷ್ಟೂ ಫಲಗಳನ್ನು ಒಮ್ಮೆಗೇ ಕೊಟ್ಟು ಬಿಡುತ್ತದಂತೆ. **ಯತ್ಫಲಂ ನಾಸ್ತಿ ತಪಸಾ ನ ಯೋಗೇನ ಸಮಾಧಿನಾ | ತತ್ಸರ್ವಂ ಲಭ್ಯತೇ ಸಮ್ಯಕ್ ಕಲೌ ಕೇಶವ ಕೀರ್ತಿನಾತ್** || ಅಶ್ವಮೇಧಾದಿ ಯಾಗ, ಕಠಿಣ ವ್ರತ ನಿಯಮಾನುಷ್ಠಾನ, ಯೋಗ ಸಮಾಧಿ, ತಪಸ್ಸು ಇತ್ಯಾದಿಗಳಿಂದ ಕಷ್ಟಪಟ್ಟು ಗಳಿಸಬಹುದಾದ ಫಲವನ್ನೆಲ್ಲ , ಕಲಿಯುಗದಲ್ಲಿ ಕೇವಲ ಭಕ್ತಿಯಿಂದ ಹರಿನಾಮ ಕೀರ್ತನೆ ಮಾಡುವುದೊಂದರಿಂದಲೇ ಸುಲಭವಾಗಿ ಪಡೆಯಬಹುದಂತೆ.

ಹರಿನಾಮವೆನ್ನುವುದು ಕಲಿಯುಗದಲ್ಲಿ ಮಾತ್ರವಲ್ಲ , ಸರ್ವಕಾಲದಲ್ಲಿಯೂ ಸಕಲೇಷ್ಟದಾಯಕ. ಹರಿನಾಮದ ಮಹಿಮೆಯನ್ನು ಭಾರತಪುರಾಣಾದಿಗಳು ಬಹಳವೇ ಸಾರಿವೆ. ಪುರಾಣಗಳಲ್ಲಿ ಬರುವಂತೆ , ಮಾಡಬಾರದ ಪಾಪಗಳನ್ನು ಮಾಡಿ ಅತಿ ಭ್ರಷ್ಟನೆನಿಸಿದ ಅಜಾಮಿಳನನ್ನು ಉದ್ಧರಿಸಿದ್ದು ಈ ಹರಿನಾಮ. ಮೊಸಳೆ ಸರೋವರದಲ್ಲಿ ಕಾಲ್ಸೆಳೆದಾಗ ಇನ್ನೇನು ತನ್ನ ಅವಸಾನವಾಯಿತು ಎಂದು ಅಂದುಕೊಂಡಾಗ ಈ ಗಜೇಂದ್ರನನ್ನು ಕಾಯ್ದಿದ್ದು ಈ ಹರಿಯ ನಾಮ. ತುಂಬು ಸಭೆಯಲ್ಲಿ ದ್ರೌಪದಿಯ ಮಾನ ಉಳಿಸಿದ್ದು ಈ ಹರಿನಾಮ. ಗೋಕುಲದಲ್ಲಿ ಗೋಪಾಲರನ್ನು ಕಾಯ್ದದ್ದು ಈ ಹರಿಯ ನಾಮ. ಬಾಲಕ ಧ್ರುವನಿಗೆ ಉನ್ನತ ಪದವಿಯನ್ನಿತ್ತದ್ದು ಶ್ರೀ ಹರಿಯ ನಾಮ. ಭಕ್ತ ಪ್ರಹ್ಲಾದನನ್ನು ಎಲ್ಲ ಅಪಾಯಗಳಿಂದ ಪಾರು ಮಾಡಿದ್ದು ಈ ಹರಿಯ ನಾಮ. ಪಾಂಡವರನ್ನು ದೂರ್ವಾಸರ ಶಾಪದಿಂದ ಪಾರು ಮಾಡಿದ್ದು ಈ ಹರಿಯ ನಾಮ. ಹೀಗೆ ಒಂದೇ ಎರಡೇ , ಈ ಹರಿನಾಮದ ಮಹಿಮೆಯನ್ನು ಸಾರುವ ಅದೆಷ್ಟೋ ಉದಾಹರಣೆಗಳು ಭಾರತ ಪುರಾಣಾದಿಗಳಲ್ಲಿವೆ.

ಅದಕ್ಕೆಂದೇ "ಹರಿ ನಾಮಕೀರ್ತನೆ ಅನುದಿನ ಮಾಳ್ಪಗೆ ನರಕ ಭಯಗಳುಂಟೇ?" , "ಕಲಿಯುಗದಲಿ ಹರಿ ನಾಮವ ನೆನೆದರೆ ಕುಲ ಕೋಟಿಗಳುದ್ಧರಿಸುವವು", " ಸುಲಭದ ಮುಕುತಿಗೆ ಸುಲಭ ಸಾಧನವಿದು" ಎಂಬಿತ್ಯಾದಿಯಾಗಿ ಪುರಂದರದಾಸರೇ ಮೊದಲಾದ ದಾಸವರೇಣ್ಯರು ಕೂಡಾ ಈ ಹರಿನಾಮದ ಹಿರಿಮೆಯನ್ನು ತಮ್ಮ ಕೃತಿಗಳಲ್ಲೂ ಸಾರಿದ್ದಾರೆ. "ನರಜನ್ಮ ಬಂದಾಗ ನಾಲಿಗೆ ಇರುವಾಗ ಕೃಷ್ಣ ಎನಬಾರದೇ" ಎನ್ನುತ್ತಾ ನಮ್ಮ ಈ ಜನ್ಮದ ಸಾರ್ಥಕ್ಯ ಹರಿನಾಮ ಕೀರ್ತನೆಯಿಂದ ಮಾತ್ರ ಸಾಧ್ಯ ಎಂಬುದಾಗಿ ನಮ್ಮನ್ನು ಎಚ್ಚರಿಸಿದ್ದಾರೆ. **"ಯೋ ದೇವಾನಾಂ ನಾಮಧಾ ಏಕ ಏವ"** ಎಂಬುದಾಗಿ ವೇದವು ಸಹ, ಎಲ್ಲ ದೇವತೆಗಳಿಗೂ ನಿಯಾಮಕನಾಗಿ ಎಲ್ಲರ ನಾಮಧಾರಕನಾಗಿರುವವನು ಎಂಬಿತ್ಯಾದಿಯಾಗಿ ಸ್ತುತಿಸಿದ ಶ್ರೀಹರಿಯ ನಾಮದ ಹಿರಿಮೆಯೂ ಕೂಡ ಅವನಂತೆಯೇ ಅನಂತ.

ಇಂತಹ ಅಪಾರ ಹಿರಿಮೆಯ ಶ್ರೀಹರಿಯ ನಾಮ ನಮ್ಮ ನುಡಿಗಳಲ್ಲಿಯೂ ಅಡಿಗಡಿಗೆ ಬರುವ ಕೃಪೆ ತೋರಲಿ. ನಮ್ಮೆಲ್ಲರನ್ನೂ ಉದ್ಧರಿಸಲಿ. ■

## ಕನ್ನಡಿ



ನಿನ್ನ ನಿರ್ಲಿಪ್ತ ಮುಖವನ್ನು ಪ್ರತಿಬಿಂಬಿಸಿತು ಕನ್ನಡಿ,
ಹುಡುಕಿದೆ ನಿನ್ನ ಜೀವನಕ್ಕೆ ಒಂದು ಸರಳ ಮುನ್ನುಡಿ.
ಕನ್ನಡಿ ವಾಪಸ್ಸು ನಿನ್ನನ್ನೇ ಮಿಕ ಮಿಕನೆ ನೋಡಿತು,
ಅದರ ಮುಜುಗರದ ಮೌನ ಯಾಕೋ ನಿನ್ನನ್ನು
ಅಗಾಧವಾಗಿ ಕಾಡಿತು!

"ನೀನು ಯಾರು?", ಎಂಬ ಪ್ರಶ್ನೆಗೆ ಏನು ನೀಡುತ್ತಿ
ಉತ್ತರ?
ಮನುಜ, ನೌಕರ, ತಂದೆ, ವಾನರ - ವಾಸ್ತವಕ್ಕೆ
ಬರುತ್ತವಾ ಒಂದಾದರೂ ಹತ್ತಿರ?
ಕ್ಷಣಿಕವಾಗಿ ಬಿಡು ಈ ನಿನ್ನ ವಿಧವಿಧದ ನಾಮಕರಣ,
ನಗ್ನವಾಗಿ ನಿಂತಾಗ ಎಲ್ಲಾ ಪ್ರಶ್ನೆಗಳು ಎದುರಿಸುತ್ತವೆ
ದಿವ್ಯ ಮರಣ!

## ಹಕ್ಕಿ



ಸುಮ್ಮನೆ ಬಾನನ್ನು ನೋಡುತ್ತಾ ಕುಳಿತ್ತಿದ್ದೆ ಒಂದು
ಬೇಸಿಗೆ,
ಇದ್ದಕ್ಕಿದ್ದಂತೆ ಕಾಣಿಸಿತು ಬಾನಿನ ಅಂಚಿನಲ್ಲಿ ಒಂದು
ಹಾಸಿಗೆ!
"ಬೆಳ ಬೆಳಗೆ ಏನಿದು ಹಾರುವ ಸುಪ್ಪತ್ತಿಗೆ?",
ಯೋಚಿಸಿದೆ ನಾನು ನಕ್ಕಿ,
ಅದು ಹತ್ತಿರ ಬಂದಾಗ ನೋಡಿದರೆ, ಗುಂಪಲ್ಲಿ
ಹಾರುತ್ತಿವೆ ನೂರಾರು ಹಕ್ಕಿ!

ಆ ಹಕ್ಕಿಗಳನು ಒಟ್ಟಿಗೆ ನೋಡಿದಾಗ ಕಂಡು ಬಂತು
ತ್ರಿಕೋಣ ರಚನೆ,
ಹೀಗೆ ಹಾರುವುದಕ್ಕೆ ಅವುಗಳು ಮಾಡಿರಬಹುದು
ಎಷ್ಟು ಯೋಚನೆ?
ಹಾಗೇ ಸುಗುಮವಾಗಿ ಸಾಗುತ್ತವೆ, ಸೇರುವ ತನಕ
ತಮ್ಮ ನೆಲೆ,
ಕೆಳಗೆ ನಿಂತು ನೋಡುವ ಕೆಲವರಿಗೆ, ಈ ಸಾಮಾನ್ಯ
ಕ್ರಿಯೆಯೇ ಒಂದು ಕಲೆ!

**- ಮಾಧವ ವೆಂಕಟೇಶ (ಕಾರ್ನಿಂಗ್ , ನ್ಯೂ ಯಾರ್ಕ್)**

ಚಿತ್ರ ಕೃಪೆ : ಅಂತರ್ಜಾಲ


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ನಾನು ಓದಿದ ಪುಸ್ತಕ



ಕಾವ್ಯಾ ಕಡಮೆ ನಾಗರಕಟ್ಟೆ

## ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು': ಒಂದು ಹೊಸ ಓದು


**ಈ ಕಾದಂಬರಿಗೆ ಒಂದೇ ಕತೆ ಎಂಬುದಿಲ್ಲ. ನಿರಂತರವಾಗಿ ಹರಿಯುವ ನದಿಯ ಜುಳುಜುಳು ನಿನಾದದಂತೆ ಇಲ್ಲಿ ಎಲ್ಲ ಪಾತ್ರಗಳ ಕತೆಯೂ ಒಂದಕ್ಕೊಂದು ಬೆಸೆದುಕೊಂಡಿದೆ.**

**ನಾ**ನು ತುಂಬಾ ಪುಟ್ಟ ಹುಡುಗಿಯಾಗಿದ್ದಾಗಿನಿಂದಲೂ ನಮ್ಮ ಮನೆಯ ಪುಸ್ತಕದ ಕಪಾಟಿನಲ್ಲಿ ದೈವ ಗಾಂಭೀರ್ಯದಲ್ಲಿ ಕುಳಿತ 'ಮಲೆಗಳಲ್ಲಿ ಮದುಮಗಳು' ಮತ್ತು 'ಶ್ರೀ ರಾಮಾಯಣ ದರ್ಶನಂ' ಕೃತಿಗಳನ್ನು ಬೆರಗಿನಿಂದ ಮುಟ್ಟಿ ನೋಡಿಯೇ ಸಂತೃಪ್ತಿ ಪಟ್ಟುಕೊಳ್ಳುತ್ತಿದ್ದೆ. ಏಕೆಂದರೆ ಆಗಿನ್ನೂ ದಿನಪತ್ರಿಕೆಗಳ ಭಾನುವಾರದ ಪುರವಣಿಗೆಳಲ್ಲಿ ಬರುವ ಮಕ್ಕಳ ಕತೆಗಳನ್ನೂ, ಪುಟ್ಟ ಪುಟ್ಟ ಪದ್ಯಗಳನ್ನೂ ಓದಿ ಅದನ್ನು ಲೇಖಕರು ಹೇಗೆ ಬರೆದರೋ ಅಂತ ವಿಸ್ಮಯ ಪಡುವ ನನಗೆ ಮನುಷ್ಯಮಾತ್ರರಾದ ಒಬ್ಬರು ಈ ರೀತಿಯ ಏಳುನೂರು- ಎಂಟುನೂರು ಪುಟಗಳ ಪುಸ್ತಕ ರಚಿಸುತ್ತಾರೆ ಎನ್ನುವ ಸಂಗತಿಯೇ ನಂಬಲಸಾಧ್ಯವಾಗಿತ್ತು

ಅದನ್ನು ನನ್ನ ತಾಯಿಯ ಬಳಿ ಹೇಳಿದಾಗ ಅವರು ಈ ಮಹಾಕಾದಂಬರಿಯ ಕರ್ತೃ 'ಕುವೆಂಪು' ಅವರೆಂದೂ, ಅವರು ಈ ಎರಡು ಕೃತಿಗಳನ್ನಲ್ಲದೇ ಇನ್ನೂ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ ಎಂದದ್ದಲ್ಲದೆ, ಅವರ ಗದ್ಯ ಬರಹಗಳೆಲ್ಲವೂ ಇಷ್ಟೇ ದಪ್ಪ ಹೊತ್ತಿಗೆಗಳು ಎಂದು ಹೇಳಿ ಈ ಗ್ರಂಥಕರ್ತರ ಕುರಿತಾದ ನನ್ನ ಬೆರಗನ್ನು ಇನ್ನಷ್ಟು ಹೆಚ್ಚಿಸಿ ಬಿಟ್ಟಿದ್ದರು. ಆಗಲೇ ಒಂದೆರಡು ಬಾರಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಒಂದೆರಡು ಪುಟಗಳನ್ನು ಓದಿ ನಂತರ "ಅಯ್ಯೋ ಇದನ್ನು ಓದಲು ನನಗೆ ಇಡೀ ಜೀವಮಾನವೇ ಬೇಕೇನೋ" ಅಂದುಕೊಂಡು ನಿರಾಸೆಯಿಂದ ಮತ್ತದನ್ನು ಪುಸ್ತಕದ ಶೆಲ್ಫಿಗೇ ಸೇರಿಸಿದ್ದೆ.

ಅದಾದ ನಂತರ ಹೈಸ್ಕೂಲು ಮುಗಿದ ಮೇಲೊಮ್ಮೆ, ಕಾಲೇಜು ಮುಗಿದಾಗೊಮ್ಮೆ ಈ ಕಾದಂಬರಿಯನ್ನು ಓದಲು ಪ್ರಯತ್ನಿಸಿ "ಈ ಕೃತಿಯನ್ನು ಓದಲು, ಮನನ ಮಾಡಿಕೊಳ್ಳಲು, ಅರ್ಥೈಸಿಕೊಳ್ಳಲು ನಾನಿನ್ನೂ ತುಂಬಾ ಚಿಕ್ಕವಳು" ಎಂಬ ನಿರ್ಣಯದೊಂದಿಗೆ ಮತ್ತೆ ಆ ಪುಸ್ತಕವನ್ನು ಯಥಾಸ್ಥಿತಿಯಲ್ಲಿಯೇ ಇಟ್ಟುಬಿಡುತ್ತಿದ್ದೆ. ಪ್ರತೀ ಬಾರಿಯೂ ಇಪ್ಪತ್ತಕ್ಕಿಂತ ಹೆಚ್ಚು ಪುಟಗಳನ್ನು ಓದಲಾಗದೇ ಸೋತು ಕೂಡುತ್ತಿದ್ದೆ. ನಂತರ ಮದುವೆಯಾಗಿ ಅಮೇರಿಕೆಗೆ ಬರುವಾಗ ಲಗೇಜಿನ ಇಪ್ಪತ್ತೂರು ಕೇಜಿಗಳಲ್ಲಿ ಚಿಕ್ಕಂದಿನಿಂದಲೂ ನನ್ನನ್ನು ತನ್ನ ಗಾತ್ರದಿಂದಲೇ ಕಾಡುತ್ತಿದ್ದ ಈ ಒಂದೂವರೆ ಕೆಜಿಯ ಪುಸ್ತಕವೂ ಸೇರಿತ್ತು.

ಹೀಗೆ ಹಟ ತೊಟ್ಟು ಕುವೆಂಪುರವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಬೆನ್ನು ಬಿದ್ದವಳು ನಾನು. ಕಳೆದ ಚಳಿಗಾಲದುದ್ದಕ್ಕೂ ಹಿಮ ಸುರಿವ ಮುಗಿಲನ್ನು ಕಿಟಕಿಯ ಈಚೆಗಿಂದ ಕಣ್ತುಂಬಿಕೊಳ್ಳುತ್ತಲೇ ಈ ಕೃತಿಯನ್ನು ಮನತುಂಬಿಕೊಂಡವಳು. ಮುಂದೆ ನನ್ನ ಬದುಕಿನುದ್ದಕ್ಕೂ ನನ್ನ ದಿನಗಳನ್ನು "ಈ ಕಾದಂಬರಿಯನ್ನು ಓದುವ ಮೊದಲು ಮತ್ತು ನಂತರ" ಎಂದು ವಿಂಗಡಿಸ- ಬಹುದೆನ್ನುವಷ್ಟು ಅನುಭವಜನ್ಯವಾಗಿದೆ, ಲೋಕಾತೀತವಾಗಿದೆ, ಸ್ಫೂರ್ತಿದಾಯಕವಾಗಿದೆ ಈ ಕಾದಂಬರಿ.




ಕುವೆಂಪು ಅವರು ಈ ಕಾದಂಬರಿಯ ಮೊದಲ ಪುಟದಲ್ಲಿಯೇ ಓದುಗರಿಗೆ ಈ ಮಾತುಗಳನ್ನು ಹೇಳುತ್ತಾರೆ- "ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದೂ ಯಃಕಶ್ಚಿತವಲ್ಲ! ಇಲ್ಲಿ ಯಾವುದಕ್ಕೂ ಮೊದಲಿಲ್ಲ; ಯಾವುದಕ್ಕೂ ತುದಿಯಿಲ್ಲ; ಯಾವುದೂ ಎಲ್ಲಿಯೂ ನಿಲ್ಲುವುದು ಇಲ್ಲ; ಕೊನೆಮುಟ್ಟುವುದೂ ಇಲ್ಲ! ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ! ಇಲ್ಲಿ ಎಲ್ಲಕ್ಕೂ ಇದೆ ಅರ್ಥ; ಯಾವುದೂ ಅಲ್ಲ ವ್ಯರ್ಥ; ನೀರೆಲ್ಲ ಊ ತೀರ್ಥ!" ಈ ಮಾತುಗಳು ಇಡೀ ಕಾದಂಬರಿಯ ಸತ್ವವಾಗಿರುವುದು ಸುಳ್ಳಲ್ಲ. ಇಲ್ಲಿ ಬರುವ ಗುತ್ತಿ- ತಿಮ್ಮಿ, ಮುಕುಂದಯ್ಯ- ಚಿನ್ನಮ್ಮ, ಐತ- ಪೀಂಚಲು ಇವರೆಲ್ಲ ಮುಖ್ಯ ಪಾತ್ರಗಳು ಅಂದುಕೊಂಡರೆ ಅದು ಅರ್ಧಸತ್ಯವಾಗುತ್ತದೆ. ಹತ್ತಾರು ಮುಖ್ಯ ಪಾತ್ರಗಳೇ ಇರುವ ಈ ಕಾದಂಬರಿಯಲ್ಲಿ ಪ್ರಕೃತಿಯಲ್ಲಿ ಒಂದಂಶವಾಗಿ ಬೆರೆತುಹೋದ ನೂರಾರು ಮನುಷ್ಯರೂ, ಪ್ರಾಣಿಗಳೂ, ಬಂದು ಹೋಗುತ್ತಾರೆ. ಹಾಗೆ ನೋಡಿದರೆ ಇದು ಮಲೆನಾಡಿನ ಜನಜೀವನದ ಕತೆ. ಶೀರ್ಷಿಕೆಯಲ್ಲಿ ಬರುವ 'ಮದುಮಗಳು' ಇಲ್ಲಿ ಒಂದು ವ್ಯಕ್ತಿಯಾಗಿರದೇ ಇಡೀ ಸೃಷ್ಟಿ ಸೌಂದರ್ಯವೇ ಮದುಮಗಳ ರೂಪ ತಳೆದಿದೆ. ಮಳೆ, ಸೆಕೆ, ಚಳಿ, ಮೂಡುಗಾಳಿ- ಇವೇ ಆ ಮದುಮಗಳ ಆಭರಣಗಳಾಗಿವೆ.

ಈ ಕಾದಂಬರಿಗೆ ಒಂದೇ ಕತೆ ಎಂಬುದಿಲ್ಲ. ನಿರಂತರವಾಗಿ ಹರಿಯುವ ನದಿಯ ಜುಳುಜುಳು ನಿನಾದದಂತೆ ಇಲ್ಲಿ ಎಲ್ಲ ಪಾತ್ರಗಳ ಕತೆಯೂ ಒಂದಕ್ಕೊಂದು ಬೆಸೆದುಕೊಂಡಿದೆ. ಆ ಪಾತ್ರಗಳು ಕೇವಲ ಮನುಷ್ಯರಾಗಿರದೇ ಅದರಲ್ಲಿ ಪ್ರಾಣಿಗಳೂ ಪ್ರಕೃತಿಯೂ ಸೇರಿದೆ. ಉದಾಹರಣೆಗೆ ಗುತ್ತಿಯ ನಾಯಿ ಹುಲಿಯನ ಪಾತ್ರ ಯಾವ ಮನುಷ್ಯನಿಗಿಂತ ಏನೂ ಕಡಿಮೆಯಿಲ್ಲ. ಹುಲಿಯ ಕುರ್ಕನೊಡನೆ ಹೋರಾಡಿ ತನ್ನ ಒಂದು ಕಣ್ಣು ಕಳೆದುಕೊಂಡಾಗ, ಎಲ್ಲಿದ್ದರೂ ತನ್ನ ನಾಯಕ ಗುತ್ತಿಯ ಹಿಂದೆ ಅವನ ಬಂಟನಂತೆ ಹಿಂಬಾಲಿಸುವಾಗ, ಗುತ್ತಿ ಹಾಕುವ ಅರ್ಧ ಊಟವನ್ನೇ ಆಸೆಗಣ್ಣಿಂದ ನೋಡುವಾಗ, ತುಂಟಾಟ ಆಡುವಾಗ, ಕೊನೆಗೆ ಪ್ರವಾಹ ದಾಟಲಾಗದೇ ತನ್ನ ಯಜಮಾನನನ್ನು ಕೂಗುವಾಗ, ಆ ನಾಯಿಯ ದುಃಖ, ಸಂತಸ, ಸಂಕಟಗಳನ್ನು ಲೇಖಕರು ನಿರಾಯಾಸವಾಗಿ ಓದುಗರಿಗೆ ಮನಮುಟ್ಟುವಂತೆ ದಾಟಿಸುತ್ತಾರೆ.

ಮುಖ್ಯವಾಗಿ ಮಲೆನಾಡಿನ ಕೋಣೂರು, ಹೂವಳ್ಳಿ, ಹಳೆಮನೆ, ಸಿಂಬಾವಿ, ಬೆಟ್ಟಳ್ಳಿ ಮತ್ತು ಮೇಗರವಳ್ಳಿಗಳಲ್ಲಿ ತೆರೆದುಕೊಳ್ಳುವ ಈ ಕಾದಂಬರಿಯಲ್ಲಿ ಲೇಖಕರು ಸರಿ- ತಪ್ಪುಗಳನ್ನು ವಿಮರ್ಶಿಸಲು ಹೋಗುವುದಿಲ್ಲ. ಪ್ರತೀ ಪಾತ್ರವು ಲೇಖಕರ ಮೌಲ್ಯಗಳಿಂದ, ಸರಿ- ತಪ್ಪುಗಳ ಜಿಜ್ಞಾಸೆಯಿಂದ ಬಿಡಿಸಿಕೊಂಡು ಸ್ವತಂತ್ರವಾಗಿ ವರ್ತಿಸುತ್ತವೆ. ಇದೇ ಕಾದಂಬರಿಕಾರರ ಹೆಗ್ಗಳಿಕೆಯೂ ಹೌದು. ಉದಾಹರಣೆಗೆ ಕುವೆಂಪು ಅವರ ವೈಚಾರಿಕ ಮನೋಭಾವ ಇಲ್ಲಿನ ಎಷ್ಟೋ ಪಾತ್ರಗಳಿಗೆ ಇಲ್ಲ. ಕೆಳಜಾತಿಯ ಪೀಂಚಲುವನ್ನು ಅಕಸ್ಮಾತಾಗಿ ಮುಟ್ಟಿಬಿಟ್ಟ ಕಾರಣ ದೇವರ ವನವನ್ನು ಪ್ರವೇಶಿಸದ ಮುಕುಂದಯ್ಯ, ಏನೇನೋ ಅಂಧಶ್ರದ್ಧೆಯ ಕಾರಣಗಳಿಂದ ಮನಸ್ಸಿನ ಸ್ವಾಸ್ಥ್ಯ ಕಳೆದುಕೊಳ್ಳುವ, ಮತ್ತು ಎಲ್ಲಕ್ಕೂ ಉತ್ತರ ಕಂಡುಕೊಳ್ಳುವ ಚಿನ್ನಮ್ಮ.. ಇವು ಒಂದೆರಡು ನಿದರ್ಶನಗಳಷ್ಟೇ.

ನಾಗರೀಕತೆಯ ಕಾರಣವಾಗಿ ಮನುಷ್ಯ ಕಟ್ಟಿಕೊಂಡ ನೈತಿಕ ಸ್ತರಗಳ ಕುರಿತಾಗಿಯೂ ಲೇಖಕರು ಚರ್ಚಿಸುತ್ತಾರೆ. ಆ ಮೂಲಕ ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿಯೂ ಅವನು ದಾಟಬಹುದಾದ, ದಾಟಬಾರದ ಲಕ್ಷ್ಮಣ ರೇಖೆಗಳು ಇದ್ದೇ ಇರುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಇದಕ್ಕೆ ಒಂದು ದೃಷ್ಟಾಂತವೆಂದರೆ ಕಾವೇರಿ ಕಳೆದುಹೋದ ತನ್ನ ಉಂಗುರ ತೆಗೆದುಕೊಳ್ಳಲು ಮಧ್ಯರಾತ್ರಿ ಚೀಂಕ್ರನೊಡನೆ ಹಿಂದೆ ಮುಂದೆ ನೋಡದೇ ತೆರಳುವುದು, ನಂತರ ಅದೇ ಕಾರಣಕ್ಕಾಗಿ ಕಷ್ಟದಲ್ಲಿ ಸಿಕ್ಕಿಕೊಳ್ಳುವುದು.

ಮೈಸೂರಿನ ರಂಗಾಯಣ ನಾಟಕ ತಂಡವು ನಾಲ್ಕು ವರ್ಷಗಳ ಹಿಂದೆ ಈ ಕಾದಂಬರಿಯ ರಂಗರೂಪವನ್ನು ಅಹೋರಾತ್ರಿ ನಾಟಕವನ್ನಾಗಿ ಪ್ರದರ್ಶಿಸಿತ್ತು. ಈಗ ಆ ನಾಟಕದ ಸೀಡಿಗಳು ಮಾರಾಟಕ್ಕೆ ದೊರೆಯುತ್ತಿವೆ. ತುಂಬಾ ಹಿಂದೊಮ್ಮೆ ಚಂದನ ವಾಹಿನಿಯಲ್ಲಿ ಈ ಕಾದಂಬರಿ ಧಾರಾವಾಹಿಯಾಗಿಯೂ ಪ್ರಸಾರವಾದ ನೆನಪು. ಆದರೆ ಯಾವುದೇ ದೃಶ್ಯರೂಪದ ಪ್ರಸ್ತುತಿಯನ್ನು ವೀಕ್ಷಿಸುವ ಮೊದಲು ಒಮ್ಮೆ ಈ ಕಾದಂಬರಿಯನ್ನು ಓದಿ ಬಿಡುವುದೇ ಒಳ್ಳೆಯದು ಅಂತ ನನ್ನ ಅಭಿಪ್ರಾಯ. ಏಕೆಂದರೆ ಓದುತ್ತೋದುತ್ತ ಕುವೆಂಪು ಅವರು ಸೃಷ್ಟಿಸಿದ ಮಲೆನಾಡು ನಮ್ಮ ಮನಸ್ಸಿನಲ್ಲಿ ಕಟ್ಟಿಕೊಳ್ಳುವ ಪರಿಯೇ ಅನನ್ಯ. ಓದುವ ಮೊದಲೇ ದೃಶ್ಯರೂಪವನ್ನು ನೋಡಿಬಿಟ್ಟರೆ ಆ ಅಪೂರ್ವ ಅನುಭವವನ್ನು ನಾವು ಕಳೆದುಕೊಂಡುಬಿಡುವ ಅಪಾಯವಿದೆ.

ಕನ್ನಡ ಸಾಹಿತ್ಯದಲ್ಲಿ ಆಸಕ್ತಿ ಇರುವವರಷ್ಟೇ ಅಲ್ಲದೇ ಕನ್ನಡಿಗರೆಲ್ಲರೂ ಓದಲೇಬೇಕಾದ ಕಾದಂಬರಿ 'ಮಲೆಗಳಲ್ಲಿ ಮದುಮಗಳು' ಅಂತ ನಿಸ್ಸಂಕೋಚವಾಗಿ, ದಿಟ್ಟವಾಗಿ ಹೇಳಬಲ್ಲೆ. ಈ ಕಾದಂಬರಿಯ ಮೂಲಕೃತಿ ಕನ್ನಡದಲ್ಲಿಯೇ ಇರುವುದು ನಮ್ಮೆಲ್ಲರ ಭಾಗ್ಯವೇ ಆಗಿದೆ, ಈ ಕೃತಿ ಕನ್ನಡದ ಘನತೆ ಹೆಚ್ಚಿಸಿದೆ ಎಂಬುದೂ ಅಷ್ಟೇ ಸತ್ಯ. ■


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಅತಿಥಿ ಬರಹಗಾರರು



ಪ್ರಮೋದ ಸಾಗರ (ಬೆಂಗಳೂರು)

### ತಾಯಿ ತುತ್ತು

ನನ್ನಮ್ಮನಿಗೆ ಮಾತ್ರ ಗೊತ್ತು
ನನ್ನ ಹೊಟ್ಟೆಯ ಅಳತೆ ಎಷ್ಟೆಂದು !
ಹಸಿವಿದ್ದೂ ನಾ ...
"ಹೊಟ್ಟೆ ತುಂಬಿತು ಸಾಕು"
ಎಂದರೂ ಇನ್ನಷ್ಟು ಮತ್ತಷ್ಟು
ಬಡಿಸಿ ಉಣಿಸುವಳು.
ಅಥವಾ ಹಾಗೆ ಒತ್ತಾಯಿಸಲೆಂದೇ...
ನನ್ನೀ ಹೊಟ್ಟೆ ತುಂಬಿದ ನಾಟಕ.(೧)

ಅಮ್ಮನದು ಅಡುಗೆಯನೂ
ಕಲೆಯಾಗಿಸುವ ಕೈಯಿ
ಉಣ್ಣಲು ಇರಬೇಕಿತ್ತು
ನನಗಿನ್ನೊಂದು ಬಾಯಿ.
ಅಮ್ಮ ರೊಟ್ಟಿಯ ತಟ್ಟಿ
ಬಿಸಿ ಬಿಸಿ ಬಡಿಸುತಿರೆ
ಹಂಚಿನೆದುರಲೇ ಕುಳಿತು
ಉಣ್ಣುವ ನನಗೆ ಸ್ವರ್ಗ. (೨)

ನನ್ನೂಟ ಮುಗಿಯುವವರೆಗೂ
ಬಡಿಸುತ್ತಾ ಎದುರಲೇ ಕುಳಿತು
ಕಣ್ತುಂಬಿಕೊಳ್ಳುವುದು
ಅವಳಿಗೂ ಅದೇನೋ ಹಿಗ್ಗು.
ಆದರೂ...
ಉಣ್ಣುವಾಗ, ಮೊದಲಿನಂತೆ
ಕತೆ ಹೇಳೆಂದರೆ...
ಈಗೆಲ್ಲಾ ಗದರುವಳು. (೩)

ಅಮ್ಮ...
ಅನ್ನಕ್ಕೆ ಕೈಮುಗಿದು
ಉಣ್ಣಲು ಕಲಿಸಿದವಳು.
ಅನ್ನವ ವ್ಯರ್ಥ
ಮಾಡುವುದ ಎಂದಿಗೂ
ಸಹಿಸದವಳು. (೪)

ಎಷ್ಟೆಲ್ಲಾ ಪಕ್ವಾನ್ನಗಳ
ಹೊರಗೆಷ್ಟೇ ಉಂಡರೂ
ಅಮ್ಮನ ಕೈರುಚಿಗೆ
ಎಂದಿಗೂ ಸಮನಿಲ್ಲ.
ಮನೆಯಿಂದ ದೂರವಿಡುವ
ದುಡಿಮೆಯ ಸಮಯದಲ್ಲಿ
ಅಮ್ಮನ ಅಡಿಗೆಯ
ನೆನಪು ಕಾಡದ ದಿನವಿಲ್ಲ ( ೫ )

ಏಕೆಂದರೆ ಅದು ಕೇವಲ
ಹಸಿವ ನೀಗುವ ಅನ್ನವಲ್ಲ
ಅದರೊಳಗಿದೆ ಅವಳ
ವಾತ್ಸಲ್ಯ , ಪ್ರೇಮಗಳ ಹೂರಣ
ಕಾರಣ ಅದೇ
ನನ್ನ ಬದುಕ ತ್ರಾಣ
ಅಮ್ಮ...
ನಾ ಕಂಡ ಸಾಕ್ಷಾತ್ ಅನ್ನಪೂರ್ಣ. ( ೬)



ಸುನಿಲ್ ಕೇಸರಿ (ಬೆಂಗಳೂರು)

### ರಂಗಾಯ್ತು ಬದುಕಮ್ಮ

ಹೃದಯದ ಕಣಜದೊಳಗಿನ
ಪ್ರೀತಿಯ ರಾಶಿ ನೀನಮ್ಮ...
ನಿನ್ನಯ ಸಿರಿತನ ನನ್ನ ಹಸಿವೆಗೆ ಹಿತವಮ್ಮ. . .
ನನ್ನ ಹಸಿವಿಗೆ ಹಿತವಮ್ಮ. . .

ಮನದ ಮಲ್ಲಿಗೆ ದಳದ ಮರೆಯಲಿ
ಹೊಳೆವ ಬಣ್ಣವೆ ನೀನಮ್ಮ
ನಿನ್ನಯ ಆ ಬಣ್ಣದಿಂದಲೇ
ರಂಗಾಯ್ತು ಬದುಕಮ್ಮ
ರಂಗಾಯ್ತು ಬದುಕಮ್ಮ

ಭಾವಭರಿತ ಬಾನಿನಂಗಳ
ಹೊಳೆವ ತಾರಿಣಿ ನೀನಮ್ಮ
ಆ ಹೊಳೆವ ನಿನ್ನ ಮನದ ಚೆಲುವು
ಈ ಕಾವ್ಯನೆ ಹುಟ್ಟಮ್ಮ. . . .
ಈ ಕಾವ್ಯನೆ ಹುಟ್ಟಮ್ಮ. . . .



ದೀಪಕ್ ನಾಯ್ಕ (ಕುಮಟಾ ,ಕರ್ನಾಟಕ)

### ಮನದ ಮಾತು . . .

ನಾ ಹುಟ್ಟಿದಾಗ ನನ್ನ ಎಲುಬೆಲ್ಲಾ ಮೃದು ,
ನನ್ನ ಬೆನ್ನೆಲುಬಾಗಿ ನಿಲ್ಲುವಂತೆ ಬೆಳೆಸಿದವಳು ನೀನು |
ನಾನು ಮಾತು ಬರದೆ ಅಳುವಾಗ ,
ನನ್ನ ಮನದ ಮಾತು ಕೇಳಿಸಿಕೊಂಡವಳು ನೀನು |
ಪುಟ್ಟ ಪುಟ್ಟ ಹೆಜ್ಜೆ ಇಡಲು ಆಗದೆ ಮುಗ್ಗರಿಸಿ ಬಿದ್ದಾಗ ,
ಕೈ ಹಿಡಿದು, ನನ್ನ ಕಾಲಾಗಿ ನಡೆಸಿದವಳು ನೀನು |
ನಾ ಉಚ್ಚರಿಸಿದ ಪ್ರಥಮ ಪದವರ್ಣ ನೀನು |
ನಿನ್ನ ಎಲ್ಲ ನೋವ ಮರೆತು, ನನ್ನ ನಗುವಲ್ಲಿ ನಗುವ ಕಂಡವಳು ನೀನು |
ನಾ ಅನಾರೋಗ್ಯದಿ ಮಲಗಿರೆ , ಎಚ್ಚರವಿದ್ದು ಮರುಗಿದವಳು ನೀನು|
ನಾ ಎಲ್ಲಿದ್ದರೂ , ಹೇಗಿರುವೆನೆಂದು ಕೊರಗುವವಳು ನೀನು |
ನೀ ಇಲ್ಲದ ಲೋಕ ಕಲ್ಪಿಸಲು ಆಗದು ! ನೀನೇ ನಮಗೆಲ್ಲಾ, ನೀ ಇಲ್ಲದೆ ಏನು ಇಲ್ಲಾ..
ನಿನ್ನ ನಗು ಮಾಸದಂತೆ ನಾ ಕಾಯುವೆ ,
ಪ್ರತಿ ಜನ್ಮದಲ್ಲು ನೀನೇ ನನ್ನ ತಾಯಿಯಾಗುವಂತೆ ನಾ ಬಯಸುವೆ....


Copyright © KCO – Brindavana

**ಕಥಾಸಮಯ**

ಅನಿಲ್ ಭಾರದ್ವಾಜ



## ಬಾ ಕಂದ ಮರಳಿ ಗೂಡಿಗೆ

**“ಪಂಚರಂಗಿ, ಮರೆಯಬೇಡ, ಇದು ನಿನ್ನ ಊರು, ನಿನ್ನ ಮರ, ನಿನ್ನ ಗೂಡು. ಬಾ ಕಂದ ಮರಳಿ ಗೂಡಿಗೆ” ಬಾಚಿ ಬಿಗಿದಪ್ಪಿದಳು ಹೆತ್ತಮ್ಮ.**

“**ಅ**ಮ್ಮಾ, ಯೋಚಿಸಬೇಡ, ನಿಜವಾಗಿಯೂ ಸ್ವಲ್ಪವೇ ದಿನದಲ್ಲಿ ವಾಪಸಾಗುವೆ” ಹೇಳಿದ ಮಯೂರ, ಪ್ರಾಯಕ್ಕೆ ಬಂದಿದ್ದ ನನ್ನ ಮೊದಲ ಮುದ್ದು ಮರಿ. ನಾನು ಮೂಕಳಾಗಿ ಕಂಬದಂತೆ ನಿಂತೆ. ನನ್ನ ಮನಸ್ಸು ಮಿಂಚಿನಂತೆ ಕೆಲ ವರ್ಷ ಹಿಂದಕ್ಕೆ ಪುಟ ತಿರುವಿತು, ಹೊರ ಪ್ರಪಂಚದ ಅರಿವು ಸಂಪೂರ್ಣ ಮಾಯವಾಯಿತು.

ನಾನು ಪಂಚರಂಗಿ. ಹುಟ್ಟಿದ್ದು ಬೆಳೆದದ್ದು ಬೆಂಗಳೂರಿನ ಗಾಂಧಿ ಬಜಾರಿನ ದೊಡ್ಡರಳಿಮರದಲ್ಲಿ. ಹೆಸರಿಗೆ ತಕ್ಕಂತೆ ಅದೊಂದು ಬೃಹತ್ತಾದ ವೃಕ್ಷ. ಅದರಲ್ಲಿ ಬಹುತೇಕ ನನ್ನ ಜಾತಿಯ ಮೈನಾ ಹಕ್ಕಿಗಳು ಹಾಗೂ ಕೆಲವು ಗಿಳಿಗಳು ಮನೆ ಮಾಡಿಕೊಂಡಿದ್ದವು. ಸುತ್ತ ಮುತ್ತಲಿನ ಜನಜಂಗುಳಿಯೊಂದಿಗೆ ಸ್ಪರ್ಧಿಸುವಂತಿತ್ತು ನಮ್ಮ ಸಮುದಾಯ. ಅದೆಷ್ಟು ಸೌಹಾರ್ದತೆ, ಅದೆಷ್ಟು ಸಹೃದಯತೆ, ಅದೆಷ್ಟು ಉತ್ಸಾಹಭರಿತ ಜೀವನ...ನಾನು ಹೆಚ್ಚಾಗಿ ಕಂದು ಬಣ್ಣದ ಪಕ್ಷಿಯಾದರೂ, ನನ್ನಮ್ಮ ತನ್ನ ಆಪ್ತ ಗೆಳತಿಯಾದ ಗಿಳಿಯೊಂದರ ಹೆಸರು ನನಗಿಟ್ಟಿದ್ದಳು.

ಬಟ್ಟೆ-ಬರೆ, ತಿಂಡಿ-ತಿನಿಸು, ಮತ್ತಿತರ ಸಾಮಗ್ರಿಗಳನ್ನು ಕೊಳ್ಳುವ ಮತ್ತು ಮಾರುವ ಜನರು ಬಜಾರಿನ ಬೀದಿಗಳಿಗೆ ಜೀವಕಳೆ ತರುತ್ತಿದ್ದರು. ಸಾಲುಮರಗಳಲ್ಲಿ ವಾಸಿಸಿದ್ದ ನಾವುಗಳು ಅವರ ಚಟುವಟಿಕೆಗಳಿಗೆ ಪ್ರೇಕ್ಷಕ, ಶ್ರೋತೃಗಳಾಗಿದ್ದೆವು.

ಇಂದು ಗೌರಿ-ಗಣೇಶ ಹಬ್ಬದ ಹಿಂದಿನ ದಿನ, ಮುಸ್ಸಂಜೆ. ಬಜಾರು ಸ್ವರ್ಗಲೋಕವಾಗಿ ರೂಪಾಂತರಗೊಂಡಿತ್ತು. ರಸ್ತೆಯ ಸಾಲುದ್ದಕ್ಕೂ ಇಕ್ಕೆಲಗಳಲ್ಲಿ ಹೂವು, ಹಣ್ಣು, ಬಾಳೆಕಂದು, ಪ್ರತಿಮೆ, ಅಲಂಕರಣ ವಸ್ತುಗಳು ಇತ್ಯಾದಿ ಬಿರುಸಾಗಿ ಮಾರಾಟವಾಗುತ್ತಿತ್ತು.

‘ಹನ್ನೆರೆಡಾಣೆಗೆ ಒಂದು ಮಳ ಬರತ್ತೆ ಕೊಡಪ್ಪ,’ ದಬಾಯಿಸುತ್ತಿದ್ದಳು ಒಬ್ಬಾಕೆ. ‘ನೋಡ್ರಿ, ಒಂದುಕಾಲು ರುಪಾಯಿಗಿಂತ ಐದು ಪೈಸನೂ ಕಡಿಮೆಗೆ ಕೊಡಲ್ಲ.’ ಸಿಡುಕಿದ ಹೂವಿನ ರಾಶಿ ಮಧ್ಯೆ ಕುಳಿತು ಇಡ್ಲಿ-ಚಟ್ನಿ ಲಗಾಯಿಸುತ್ತಿದ್ದ ಹೂಗಾರ. ತಿರಸ್ಕರಿಸಿ ನಾಲ್ಕು ಹೆಜ್ಜೆ ಮುಂದಿಟ್ಟಳು ಆ ಹೆಂಗಸು. ‘ಚಮತ್ಕಾರ ನೋಡೀಗ, ಆಕೆ ಹಿಂತಿರುಗಿ ಒಂದು ರೂಪಾಯಿಗೆ ಕೇಳ್ತಾಳೆ, ಆತನೂ ಗೊಣಗುತ್ತಾ ಸಮ್ಮತಿಸಿ ಅವಳಿಗೆ ಹೂವು ಮಾರುತ್ತಾನೆ,’ ತಮಾಷೆ ಮಾಡಿದಳು ನನ್ನ ಮಿತ್ರೆ. ಅವಳ ಶಕುನ ನಿಜವಾಗಿತ್ತು, ಎಲ್ಲರೂ ಕೇಕೆ ಹಾಕಿ ನಕ್ಕೆವು.

‘ಅಪ್ಪಾ ! ಈ ವರ್ಷ ಮಣೆಯ ಮೇಲಿರುವ ಗಣೇಶನನ್ನು ಕೊಡಿಸುವೆ ಎಂದಿದ್ದೆ. ಮರೆತೆಯಾ?’ ಆಕ್ಷೇಪಿಸಿದ ಅವನ ತಂದೆಯನ್ನು ಪುಟ್ಟ ಬಾಲಕನೊಬ್ಬ. ಚೌಕಾಸಿ ಮಾಡಿ ಕೊನೆಗೂ ಮಗ ತನ್ನ ಬಯಕೆ ಪೂರೈಸಿಕೊಂಡ.

ಹಬ್ಬದ ಹುಮ್ಮಸ್ಸು, ಸಡಗರ ಮಾನವರ ಜೊತೆ ನಮಗೂ ಅಂಟುಬಿಟ್ಟಿತ್ತು. ಹೊತ್ತಾರೆ ಎದ್ದು ಯಥೇಚ್ಛವಾಗಿ ಬಿದ್ದಿದ್ದ ಹಬ್ಬದ ಶೇಷವನ್ನು ನಮ್ಮ ಗೂಡುಗಳಿಗೆ ರವಾನಿಸಿದೆವು.‘ಇವೊತ್ತು ಮದನೆಯ ಕಡೆ ದಿನವಂತೆ ಈ ಮರದಲ್ಲಿ, ನಿನಗೆ ಗೊತ್ತಿತ್ತೆ?’ ಪ್ರಶ್ನಿಸಿದಳು ನನ್ನ ಸಖಿ. ಕೊಕ್ಕಿನಲ್ಲಿದ್ದ ನನಗೆ ಅಚ್ಚುಮೆಚ್ಚಾದ ಸೀತಾಫಲದ ಚೂರು ಕಳಚಿ ಬಿತ್ತು. ಮದನೆ ನನ್ನ ಆಪ್ತ ಸ್ನೇಹಿತೆ, ಎಳೆ ವಯಸ್ಸಿನಿಂದ ಈಗ ಪ್ರಾಯದ ವರೆಗೂ ಒಡನಾಡಿದ ಜೀವಗೆಳತಿ. ಕಳೆದೆರಡು ದಿನಗಳಿಂದ ಅವಳೊಂದಿಗೆ ಭೇಟಿ ಆಗಿರಲಿಲ್ಲ, ಈಗ ಚುಕ್ಕೆಗಳನ್ನು ಕೂಡಿಸಿದೆ. ಕ್ಷಣಾರ್ಧದಲ್ಲಿ ಅವಳ ನಿವಾಸದತ್ತ ಧಾವಿಸಿದೆ.



“ನೂರು ವರ್ಷ ಆಯಸ್ಸು ನಿನಗೆ! ಪಂಚು, ನಿನ್ನನ್ನೇ ನೆನೆಯುತ್ತಿದ್ದೆ.” ಮದನೆ ಹಿಗ್ಗಿ ರೆಕ್ಕೆ ಬಡಿದಳು. “ಸರಿ ಸರಿ. ಹರಟೆ ಬಿಟ್ಟು ವಿಷಯಕ್ಕೆ ಬಾ !” ಸಿಟ್ಟಿನಿಂದ ಗುಡುಗಿದೆ. “ಇಂದು ನಾವು ಈ ಮರ, ಊರು ಬಿಟ್ಟು ಬಹಳ ದೂರದ ಊರಿಗೆ ಸ್ಥಳಾಂತರಿಸುತ್ತಿದ್ದೇವೆ. ಆ ಪ್ರದೇಶ ಬಹಳ ಸುಭಿಕ್ಷವಾದದ್ದಂತೆ, ಅದೆಷ್ಟು ಮರಗಳೆಂದರೆ ಒಂದು ಮರದಲ್ಲಿ ಒಂದೇ ಸಂಸಾರದ ಗೂಡಂತೆ, ನಂಬುವೆಯಾ? ಬಹಳ ಪಕ್ಷಿಗಳು ಈಗಾಗಲೇ ವಲಸೆ ಹೋಗಿವೆಯಂತೆ. ಸ್ವರ್ಗಸುಖ ಎಂದು ಅಲ್ಲಿರುವ ನನ್ನ ಚಿಕ್ಕಪ್ಪ ಹೇಳಿ ನಮ್ಮಪ್ಪನನ್ನು ಸೆಳೆದಿದ್ದಾನೆ ” ಮದನೆ ವಿವರಿಸಿದಳು. “ಸ್ವರ್ಗ ?! ಸುತ್ತಲು ನೋಡು, ನಿನ್ನ ಎತ್ತಾಡಿದ ಬಂಧು-ಮಿತ್ರರು, ನಿನ್ನೊಂದಿಗೆ ಬೆಳೆದ ಅಪಾರ ಮಿತ್ರ ಸಮೂಹ, ಅವರ ಅಗಾಧ ಪ್ರೇಮ, ನೀ ತಿಳಿದ ಮಾನವ ಜನಾಂಗ. ಅದು ಸ್ವರ್ಗ”, ಚುಚ್ಚುವ ಉತ್ತರ ಕೊಟ್ಟೆ. ಮದನೆಗೆ ಆ ಮಾತು ಕಿಂಚಿತ್ತು ಅಂಟಲಿಲ್ಲ. “ನೀನು ನನ್ನೊಟ್ಟಿಗೆ ಬಂದುಬಿಡು. ನೀನೇನು ಯೌವನದ ಪಕ್ಷಿ, ಜೊತೆಗೆ ನಾನೂ ಇರುತ್ತೇನೆ, ನಿನಗೆ ಇಷ್ಟವಾಗದಿದ್ದಲ್ಲಿ ನೀನು ಹಿಂದಿರುಗಬಹುದು - ನನ್ನ ಚಿಕ್ಕಪ್ಪ ಮಾಮೂಲಾಗಿ ಬಂದುಹೋಗುತ್ತಿರುತ್ತಾನೆ ”. ಮನವರಿಕೆ ಮಾಡಲು ಯತ್ನಿಸಿದಳು ಮದನೆ. ಮುಂದಿರುವ ಆಯ್ಕೆಗಳಿಂದ ನನ್ನ ಹೃದಯ ಇಕ್ಕಟ್ಟಿಗೆ ಸಿಲುಕಿತ್ತು, ಮನಸ್ಸು ಗಲಿಬಿಲಿಯಾಗಿತ್ತು.ವಿವೇಚನೆ ಚೇತರಿಸಿಕೊಳ್ಳುವುದರೊಳಗೆ ನಾನು ಮದನೆಯೊಡನೆ ಹೊರಡಲು ಸಜ್ಜಾಗಿ ನಿಂತಿದ್ದೆ.

“ಪಂಚು, ಮದನೆಯವರೊಂದಿಗೆ ಸದಾ ಇರು, ಜೋಕೆ.ಹುಳ-ಹುಪ್ಪಟೆ ಕಂಡಿತೆಂದು ಅಡ್ಡಾಡಬೇಡ” ಹೀಗೆ ಅಮ್ಮನ ಉಪದೇಶದ ಪುರಾಣ ಸ್ವಲ್ಪ ಕಾಲ ನಡೆಯಿತು. “ಪಂಚರಂಗಿ, ಮರೆಯಬೇಡ, ಇದು ನಿನ್ನ ಊರು, ನಿನ್ನ ಮರ, ನಿನ್ನ ಗೂಡು. ಬಾ ಕಂದ ಮರಳಿ ಗೂಡಿಗೆ” ಬಾಚಿ ಬಿಗಿದಪ್ಪಿದಳು ಹೆತ್ತಮ್ಮ. ಅವಳ ಕಣ್ಣಂಚಿನಲ್ಲಿ ಕಂಬನಿ ನಿಂತಿತ್ತು. ಅವಳ ಶೋಕವೋ ಇಲ್ಲ ನನ್ನ ಅಂತರಾಳದ ನೋವೋ ತಿಳಿಯದು, ಹೃದಯ ಕುಸಿದಿತ್ತು. ರೆಕ್ಕೆ ಬಿಚ್ಚಿ, ಗಟ್ಟಿಯಾಗಿ ಅವಳನಪ್ಪಿ ಅತ್ತುಬಿಟ್ಟೆ.

‘ಅಮ್ಮಾ, ಯೋಚಿಸಬೇಡ, ನಿಜವಾಗಿಯೂ ಸ್ವಲ್ಪವೇ ದಿನದಲ್ಲಿ ವಾಪಸಾಗುವೆ,’ ಹೇಳಿ ಸರ್ರನೆ ಹೊರಟಿದ್ದ ಹಕ್ಕಿಯ ಗುಂಪನ್ನು ಸೇರಿದೆ.

'ಅದೋ ನೋಡಿ, ನಮ್ಮೂರು ಕಾಣಿಸುತ್ತಿದೆ, ಹೇಗಿದೆ?' ಗರ್ವದಿಂದ ಪ್ರಶ್ನಿಸಿದ ಮದನೆಯ ಚಿಕ್ಕಪ್ಪ. ನಾವು ಬಹಳಷ್ಟು ತಾಸುಗಳೇ ಹಾರಿದ್ದೆವು, ಮೈ-ರೆಕ್ಕೆಗಳು ನಿತ್ರಾಣವಾಗಿದ್ದವು, ದೇಹ ಕೊಂಚ ನಡುಗಲಾರಂಭಿಸಿತ್ತು - ಬೆಂಗಳೂರಿಗೆ ಹೋಲಿಸಿದರೆ ಈ ಪ್ರದೇಶ ಶೀತಲವಾಗಿತ್ತು. ಆದರೆ ಈ ನಾಡು ಬೆರಗುಗೊಳಿಸುವಂತೆ ಸುಂದರವಾಗಿತ್ತು - ಗಗನಚುಂಬಿ ದೇವದಾರು ಮರಗಳು, ಹಸಿರು ಹಾಸಿದ ಬೆಟ್ಟ-ಗುಡ್ಡಗಳು, ನಿರ್ಮಲವಾದ ನೀರು ಹರಿಯುತ್ತಿದ್ದ ನದಿ-ತೊರೆಗಳು, ಅಲ್ಲೊಂದು ಇಲ್ಲೊಂದು ಮಾನವರ ಮನೆಗಳು. 'ಅಲ್ಲಿ ನೋಡು ಪಂಚರಂಗಿ, ಜಿಂಕೆಗಳ ಒಂದು ದೊಡ್ಡ ಹಿಂಡೇ ಇದೆ,' ಉದ್ರೇಕದಿಂದ ಚೀರಿದಳು ಮದನೆ. ಪ್ರಕೃತಿಯ ಈ ಅಪಾರ ಚೆಲುವು ಮನಸ್ಸಿಗೆ ಮುದ ಹಾಗೂ ದೇಹಕ್ಕೆ ತಾಕತ್ತು ನೀಡಿತ್ತು.

'ಅದೇ ನಮ್ಮ ಮರ. ಆ ಗುಡ್ಡದ ಮೇಲೆ ಅದೇ ಭಾರಿ ಎತ್ತರದ್ದು,' ಮದನೆಯ ಚಿಕ್ಕಪ್ಪ ಹೆಮ್ಮೆಯಿಂದ ಹೇಳಿಕೊಂಡ. 'ಇಷ್ಟು ನೀಲಿಯಾದ ಆಕಾಶ ನಾನೆಂದೂ ನೋಡಿರಲಿಲ್ಲ , ವಾಸನೆಯೇ ಇಲ್ಲದ ಗಾಳಿ ಕುಡಿದಿರಲಿಲ್ಲ' ಕೊನೆಗೂ ನನ್ನ ಕಂಠದಿಂದ ಒಂದೆರಡು ಪದ ಹೊರಬಂದಿತು. ನಾನು ಅವರಲ್ಲಿ ಒಬ್ಬಳಾಗಿ ಉಲ್ಲಾಸದಿಂದ ದಿನ ಕಳೆದೆ. ಒಮ್ಮೊಮ್ಮೆ ಅಮ್ಮನ ನೆನಪಾಗಿ ಮನ ನೋಯುತ್ತಿತ್ತು. ದಿನ ಉರುಳಿ ವಾರವಾಗಿ, ಮಾಸಗಳೇ ಕಳೆದವು. ಸಂಗಾತಿಯೊಬ್ಬನು ಸಿಕ್ಕಿ, ಅವನೊಂದಿಗೆ ಸಲಿಗೆಯಾಗಿ ಸದಾ ಆಡುತ್ತಿದೆ. ಆತ್ಮೀಯ ಸಂಬಂಧ ಬೆಳೆದು ಸಂಗಾತಿಗಳಾದೆವು. ಅಮ್ಮನ ಸ್ಮರಿಸುವುದು ಬಹುತೇಕವಾಗಿ ಇಳಿದುಹೋಗಿತ್ತು. ನಮಗೆ ಮಕ್ಕಳಾಗಿ ಹತ್ತಿರದೊಂದು ಮರದಲ್ಲಿ ನಮ್ಮದೇ ಸಂಸಾರವೂ ಆರಂಭವಾಯಿತು. ಏಕಾಂಗಿಯಾಗಿ ಕುಳಿತು ಯೋಚಿಸಿದಾಗ ಕಾಲ ನನ್ನನ್ನು ವಂಚಿಸಿತೇನೋ ಎಂದು ಭಾಸವಾಗುತ್ತಿತ್ತು. ಇದಾವುದು ನಿನ್ನ ಸ್ವಂತದ್ದಲ್ಲ ಎಂದು ಒಳಮನಸ್ಸು ಗೇಲಿಮಾಡುತ್ತಿತ್ತು.

ಕೊನೆಗೂ ಒಂದು ದಿನ ಬೆಂಗಳೂರಿಗೆ ಹೋಗಿಬರುವ ಕಾಲ ಕೂಡಿಬಂತು. ಹೃದಯದಲ್ಲಿ ಅವಿವರಣೀಯ ಚೈತನ್ಯ, ನಿರೀಕ್ಷಣೆಯಿಂದ ಚಡಪಡಿಸುತ್ತಿದ್ದ ಮನಸ್ಸು.

**(ಮುಂದಿನ ಪುಟಕ್ಕೆ . . . . .)**

**ಚಿತ್ರ ಕೃಪೆ : ಅಂತರ್ಜಾಲ**


Copyright © KCO – Brindavana

ಸಂಚಿಕೆ
೦೪
ಮೇ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ನಾ ಕಂಡಂತೆ ಅಮೆರಿಕಾ



ಸತ್ಯ ಪ್ರಸಾದ್

## ' ಟಿಕೇಟ್ ' !! -ಏನೀ ಗೊಂದಲ ?

**" ಸರ್ ನಾವು ನಾಲ್ಕು ಜನ, ಬಹುರಾಷ್ಟ್ರೀಯ ಕಂಪನಿಯಿಂದ ಜೊತೆಯಲ್ಲಿ ಬಂದಿದ್ದೇವೆ, ದಯವಿಟ್ಟು ನಾಲ್ಕು ಟಿಕೆಟ್ ಕೊಟ್ಟಿಬಿಡಿ" ಎಂದು ಪರಿ ಪರಿಯಾಗಿ ಬೇಡಿದ್ದಾನೆ. ಪೋಲಿಸ್ ಕರೆಂಟ್ ಹೊಡೆದವನ ಹಾಗೆ ನಿಂತು ಬಿಟ್ಟಿದ್ದಾನೆ...**

**ಸು**ಮಾರು ಹದಿನೈದು ವರುಷದ ಹಿಂದೆ ನಡೆದ ಘಟನೆ. ನಾನು ಅಮೆರಿಕಾಗೆ ಹೊರಟು ನಿಂತಾಗ ಅತಿ ಹೆಚ್ಚು ಕೇಳಿದ ಶಬ್ದ deport, ನನ್ನ employer ಅಕ್ಷರಶಃ ಹೆದರಿಸಿಬಿಟ್ಟಿದ್ದ. ಅದರ ಬಗ್ಗೆ ದೊಡ್ಡ ಉಪನ್ಯಾಸವನ್ನೇ ನೀಡಿದ್ದರು. ಅಮೇರಿಕ ನೆಲದಲ್ಲಿ ಕಾಲಿಡುತ್ತಿದ್ದಂತೆ immigration officer ನಿಮ್ಮ ಎಲ್ಲಾ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸುತ್ತಾರೆ, ಸಣ್ಣ ತಪ್ಪು ಕಂಡರೂ ಅಲ್ಲಿಂದಲೇ ವಾಪಸ್ ಕಳಿಸಿ ಬಿಡುತ್ತಾರೆ, ಅಮೇರಿಕ ಕಾನೂನಿಗೆ ಅತೀ ಗೌರವ ಕೊಡುವ, ಹಣ ಅಧಿಕಾರ ಪ್ರಭಾವ ನಡೆಯದ ದೇಶ. ಏನೇ ತಪ್ಪು ಮಾಡಿದರೂ ಶಿಕ್ಷೆ ಕಟ್ಟಿಟ್ಟ ಬುತ್ತಿ ಇತ್ಯಾದಿ ಇತ್ಯಾದಿ...

ಆಗ ಬರುವವರಿಗೆಲ್ಲ ಈ ರೀತಿಯ ಉಪದೇಶಗಳು ಸಾಮಾನ್ಯವಾಗಿತ್ತು. ನಾನು ಅವೆನೆಲ್ ನಲ್ಲಿ ರೂಂಮೆಟ್ ಜೊತೆ ಅಪಾರ್ಟ್ ಮೆಂಟ್ ನಲ್ಲಿದ್ದೆ, ಅದೃಷ್ಟಕ್ಕೆ ಎದುರು ಮನೆಗೆ ಬೆಂಗಳೂರಿನ ಬಹುರಾಷ್ಟ್ರೀಯ ಕಂಪೆನಿಯಿಂದ ಕನ್ನಡದ ಮುನಿ, ಕಿರಣ್, ಸೇತು ಮತ್ತು ಪದ್ದ short assignment ಗೆಂದು ೩ ತಿಂಗಳ ಬಾಡಿಗೆಗೆ ಬಂದರು, ಕನ್ನಡ ಈ ನವ ತರುಣರು ಬಂದದ್ದು ನನಗೂ ಖುಷಿಯಾಗಿತ್ತು. ಬಹುತೇಕ ಪ್ರತಿ ದಿನ ಜೊತೆಗೆ ಯಾವುದಾದರು ಒಂದು ಮನೆಯಲ್ಲಿ ಅಡುಗೆ ಮಾಡಿ ಊಟ ಮಾಡುತ್ತಿದ್ದೆವು.

ಕಿರಣ್ ಸಿಟಿ ಹುಡುಗ ಚುರುಕು ಮತ್ತು ಚಾಲೂ, ಮುನಿ ಹಳ್ಳಿ ಹುಡುಗ ಅಳುಬುರುಕ, ಸೇತು ತಲೆ ಹರಟೆ ಮತ್ತು ಅತೀ ಮಾತು. ಲಾಯರ್ ಗೆ ಪಾಯಿಂಟ್ ಹಾಕೋ ಬುದ್ದಿ, ಪದ್ದ ನಿರುಪದ್ರವಿ. ಯಾರೂ ಕೆಲಸ, ಪ್ರಾಜೆಕ್ಟ್ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಂಡವರಂತೆ ಕಾಣುತ್ತಿರಲಿಲ್ಲ, ಅವೆಲ್ಲರಿಗೂ ಇದ್ದ ಒಂದೇ ಗುರಿ ,ಇರುವ ಅವಧಿಯಲ್ಲಿ ಎಷ್ಟು ಸಾಧ್ಯವೋ ಅಷ್ಟು ಅಮೇರಿಕಾ ನೋಡಿ ಬಿಡಬೇಕೆಂದು. ಒಂದು ತಿಂಗಳೊಳಗೆ ನ್ಯೂ ಯಾರ್ಕ್, ನಯಾಗರ, ಇಲ್ಲಿನ ಸುತ್ತ ಮುತ್ತ ಪ್ರದೇಶಗಳನ್ನು ನೋಡಿ ಮುಗುಸಿಬಿಟ್ಟಿದ್ದರು. ಕೀಲು ಕೊಟ್ಟ ಕುದುರೆ ತರಹ ಓಡಾಡುತ್ತಿದ್ದರು. ಹಿಡಿದು ನಿಲ್ಲಿಸುವುದೇ ಕಷ್ಟವಾಗಿತ್ತು.

ಕಿರಣ್ ಗೆ ಬೆಂಗಳೂರಿನಲ್ಲಿ ಕಾರ್ ಓಡಿಸಿ ಅಭ್ಯಾಸವಿತ್ತು. ಹೀಗೇ ಮಾತನಾಡುವಾಗ ಭಾರತದ ಡ್ರೈವರ್ ಲೈಸನ್ಸ್ ನಲ್ಲಿ ಇಲ್ಲಿನ car rent ಮಾಡಬಹುದೆಂದು ತಿಳಿಸಿದೆ. ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ವೀಕೆಂಡ್ ಕಾರ್ ರೆಂಟ್ ಮಾಡಿ ಫಿಲಿಡೆಲ್ಫಿಯ ಗೆ ಹೋಗಲು ರೆಡಿಯಾಗಿ ನನಗೂ ಬಲವಂತ ಮಾಡಿದರು. ಆಫೀಸ್ ಕೆಲಸವಿದ್ದ ಕಾರಣ ಬರಲು ಆಗುವುದಿಲ್ಲವೆಂದು ತಿಳಿಸಿದೆ. ಶನಿವಾರ ಬೆಳಿಗ್ಗೆಯೇ car rent ಮಾಡಿ ಫಿಲಿಡೆಲ್ಫಿಯ ಕಡೆ ಹೊರಟಿದ್ದಾರೆ. ಆಗ ಈಗಿನ ತರಹ GPS ಇರಲಿಲ್ಲ. ಎಲ್ಲ yahoo map print outಗಳು ! ಕಿರಣ್ ಕಾರ್ ಓಡಿಸುತ್ತಿದ್ದಾನೆ . ಪಕ್ಕದಲ್ಲಿ ಸೇತು ಅವನಿಗೆ ಮಾರ್ಗದರ್ಶನ ನೀಡುತ್ತಿದ್ದಾನೆ. NJTP ಯಲ್ಲಿ ಹೋಗುತ್ತಿರುವಾಗ ಸೇತು route 95 ಬೋರ್ಡ್ ನೋಡಿ confuse ಮಾಡಿಕೊಂಡು ಕಿರಣ್ ಗೆ 95 miles ಸ್ಪೀಡಿನಲ್ಲಿ ಓಡಿಸಲು ಹೇಳಿದ್ದಾನೆ. ಕಿರಣ್ ಆ ಸೂಚನೆಯನ್ನು ಚಾಚು ತಪ್ಪದೆ ಪಾಲಿಸಿದ್ದಾನೆ. ಕ್ಷಣಾರ್ಧದಲ್ಲಿ ಕೆಂಪು ಲೈಟ್ ಹಾಕಿಕೊಂಡು ಕಾಪ್ ಹಿಂದೆ ಬಂದಿದ್ದಾನೆ. ಪೋಲೀಸ್ ನೋಡುತ್ತಿದ್ದಂತೆ ಎಲ್ಲರ ಜಂಘಾಬಲವೇ ಉಡುಗಿ ಹೋಗಿದೆ. ಮುಂದಿನ ವಿಧಿ ವಿಧಾನ ಗಳ ಬಗ್ಗೆ ಹೆಚ್ಚು ಅರಿವಿಲ್ಲದ ಇವರು ಗಲಿಬಿಲಿಗೊಂಡು ಸುಮಾರು ಹೊತ್ತಿನ ನಂತರ shoulder ನಲ್ಲಿ ಕಾರ್ ನಿಲ್ಲಿಸಿದ್ದಾರೆ.

ಪೋಲೀಸ್ ಬಂದವನೇ ದರ್ಪದಿಂದ ಇವರ violation ತಿಳಿಸಿ, ಲೈಸನ್ಸ್, ರಿಜಿಸ್ಟ್ರೇಷನ್ ಮತ್ತು ಇನ್ಸೂರೆನ್ಸ್ ಪರಿಶೀಲಿಸಿ, ಕೊನೆಗೆ ಟಿಕೆಟ್ ಕೊಟ್ಟು ಕೋರ್ಟ್ ಹಾಜರಾತಿ ಕಡ್ಡಾಯ ಮಾಡಿ, ಅದರ ದಿನಾಂಕ ಮತ್ತು ಸಮಯ ತಿಳಿಸಿ ಹೊರಡಲು ಅನುವಾಗಿದ್ದಾನೆ.

ಅಷ್ಟರಲ್ಲಿ ಮುನಿಗೆ ದುಃಖ ತಡೆಯಲಾಗದೆ ಬಿಕ್ಕಿ ಬಿಕ್ಕಿ ಅಳಲು ಶುರು ಮಾಡಿದ್ದಾನೆ. ಪೋಲಿಸ್ ಕಾರಣ ಕೇಳಲು ಸೇತು ಸಹ ಕಣ್ಣೀರು ಹಾಕುತ್ತಾ ಬೋರ್ಡಿಂಗ್ ಪಾಸುಗೂ ಪೋಲಿಸ್ ಟಿಕೆಟ್ ಗೂ ವ್ಯತ್ಯಾಸ ತಿಳಿಯದ ಇವರು " ಸರ್ ನಾವು ನಾಲ್ಕು ಜನ , ಬೆಂಗಳೂರಿನ ಬಹುರಾಷ್ಟ್ರೀಯ ಕಂಪೆನಿಯಿಂದ ಜೊತೆಯಲ್ಲಿ ಬಂದಿದ್ದೇವೆ, ದಯವಿಟ್ಟು ನಾಲ್ಕು ಟಿಕೆಟ್ ಕೊಟ್ಟಿಬಿಡಿ' ಎಂದು ಪರಿ ಪರಿಯಾಗಿ ಬೇಡಿದ್ದಾನೆ. ಪೋಲಿಸ್ ಕರೆಂಟ್ ಹೊಡೆದವನ ಹಾಗೆ ನಿಂತು ಬಿಟ್ಟಿದ್ದಾನೆ...

ನನ್ನ ಸರ್ವಿಸ್ ನಲ್ಲಿ ಇದೇ ಮೊದಲನೇ ಗಿರಾಕಿ ಒಂದು ಟಿಕೆಟ್ ಕೊಟ್ಟರೆ ನಾಲ್ಕು ಟಿಕೆಟ್ ಕೇಳುತ್ತಿರುವುದೆಂದು ಅಚ್ಚರಿಗೊಂಡು , ಕೊನೆಗೆ ನಮ್ಮ ಕಾನೂನಿನಲ್ಲಿ ಅದಕ್ಕೆ ಅವಕಾಶವಿಲ್ಲವೆಂದು ಹೆಚ್ಚಿನ ವಿಷಯಕ್ಕೆ ನಿಮ್ಮ ಕಂಪನಿಗೆ ಮಾತನಾಡಿ ಎಂದು ತಿಳಿಸಿ ತಲೆ ಕೊಡವಿಕೊಂಡು ಹೊರಟು ಹೋಗಿದ್ದಾನೆ. ಈ ಪ್ರಜೆಗಳು ಅಷ್ಟಕ್ಕೆ ಸುಮ್ಮನಾಗದೆ ವಾಪಾಸ್ ಮನೆಗೆ ಬಂದು ಇಂಡಿಯದಲ್ಲಿ ಇರುವ ಅವರ ಮ್ಯಾನೇಜರ್ ಗೆ ಮಧ್ಯರಾತ್ರಿಯಲ್ಲಿ ಫೋನ್ ಮಾಡಿ, ಪೋಲಿಸ್ ನಾಲ್ಕು ಟಿಕೆಟ್ ಕೊಡಲಿಲ್ಲವೆಂದು ದೂರಿದ್ದಾರೆ. ನಿದ್ದೆಯ ಮಂಪರಿನಲ್ಲಿದ್ದ ಅವನು ಏನು ತಿಳಿಯದೆ ಇಲ್ಲಿನ ಮ್ಯಾನೇಜರ್ ಗೆ ಮಾತನಾಡಲು ತಿಳಿಸಿ ಫೋನ್ ಇಟ್ಟಿದ್ದಾನೆ.

ಅಷ್ಟರಲ್ಲಿ ನಮಗೆ ವಿಷಯ ಗೊತ್ತಾಯ್ತು.... ನಾನು ನನ್ನ ರೂಂ ಮೆಟ್ ಬಿದ್ದು ಬಿದ್ದೂ ನಕ್ಕು ಕೊನೆಗೆ ಇದು deport ಟಿಕೆಟ್ ಅಲ್ಲವೆಂದು ತಿಳಿಸಿದೆವು. ಆಗಲೇ ಅವರ ಮುಖದಲ್ಲಿ ನಗು ಕಂಡದ್ದು.... ■

## ಬಾ ಕಂದ ಮರಳಿ ಗೂಡಿಗೆ (ಮುಂದುವರೆದುದು. . . . . )

"ಇದೇನು ನನ್ನ ಮರ ಹೀಗೆ ವಿಕಾರವಾಗಿದೆ? ನನ್ನ ಗೂಡಿದ್ದ ಕೊಂಬೆಗೆ ಏನಾಯಿತು?!" ಉತ್ಕರ್ಷ ಕಂಠದಿಂದ ಕೂಗಾಡಿದೆ.

"ಅಂತೂ ಈ ಮುದಿಗೂಬೆಯನ್ನು ನೋಡಲು ಬಂದೆಯಾ?" ವ್ಯಂಗ್ಯವಾಗಿ ಪ್ರಶ್ನಿಸಿದಳು ಜರ್ಜರಿತವಾದ ಗೂಡಿನ ಮೂಲೆಯೊಂದರಲ್ಲಿದ್ದ ನನ್ನ ಹೆತ್ತವಳು. ಬಲವಾಗಿ ಅವಳನ್ನು ತಬ್ಬಿ ಸ್ವಲ್ಪ ಹೊತ್ತು ಕೂತೆ. ಮನಸ್ಸಿನ ಉದ್ವೇಗ ಕುಗ್ಗಿದಾಗ ಸುತ್ತ ತಿರುಗಿ ನೋಡಿದೆ. ಬಜಾರು ಆದ್ಯಂತವಾಗಿ ಪರಿವರ್ತನೆ ಹೊಂದಿತ್ತು - ಮರಗಳ ಸಂಖ್ಯೆ ಕ್ಷೀಣಿಸಿತ್ತು, ನಮ್ಮ ಮರದಲ್ಲಿ ಬರೀ ವೃದ್ಧಾಪ್ಯದಲ್ಲಿರುವ ಹಕ್ಕಿಗಳ ಎಣಿಸುವಷ್ಟೇ ಗೂಡುಗಳಿದ್ದವು, ನನ್ನೆಲ್ಲಾ ಇಂದ್ರಿಯಗಳು ಸೂಕ್ಷ್ಮವಾದಂತೆ ಇತ್ತು, ವಾಹನಗಳ ಕರ್ಕಶ ಕೂಗು ಕಿವುಡುಬೀಳುವಂತಿತ್ತು, ಜನರು ಕ್ರೂರಮೃಗದಿಂದ ಬಚಾಯಿಸಿಕೊಳ್ಳಲು ಕಿತ್ತೋಟ ಓಡುವ ಹಾಗಿತ್ತು.

"ಈ ಅವಸ್ಥೆ ನೋಡಿ ಮನಸ್ಸಿಗೆ ಆಘಾತವಾಯಿತೆ?" ಅಮ್ಮ ಕೇಳಿದಳು ಕನಿಕರದಿಂದ. ಮಾತನಾಡಲಾಗದೆ ಸಮ್ಮತಿಸಿ ತಲೆಯಾಡಿಸಿದೆ.

'ಇದು ನಾನಿದ್ದ ಸ್ಥಳವೆ? ಇದು ನನ್ನ ಮನೆಯೇ, ಊರೇ?' ಪ್ರಶ್ನೆಗಳು ಉಕ್ಕಿ ಬಂದವು. 'ನನ್ನ ಮನಸ್ಸು ಮನೆಯಿಲ್ಲದ, ನೆಲೆಯಿಲ್ಲದ ಭಿಕಾರಿ ಆಯಿತೆ?' ಎಂದು ಚಿಂತಿಸಿದೆ. ಕ್ರಮೇಣ ನಾನು ಮತ್ತು ಮಕ್ಕಳು ಪರಿಸರಕ್ಕೆ ಹೊಂದಿಕೊಂಡು, ಆತ್ಮೀಯರೊಂದಿಗೆ ಕೆಲ ದಿನಗಳು ಆನಂದಿಸಿದೆವು.

"ಅಮ್ಮ, ಈ ಊರು ಸಾಕಾಯಿತು. ಯಾವಾಗ ನಮ್ಮೂರಿಗೆ ಹೋಗುವುದು?" ಬೇಸರಿಸಿ ಕೇಳಿದ ನನ್ನ ಮಗ ಮಯೂರ. ಆಗ ಅರಿವಾಯಿತು ಈ ವ್ಯಕ್ತಿತ್ವದ ಮುಗ್ಗಟ್ಟು ಬರಿದೆ ನನ್ನ ಸಮಸ್ಯೆ ಎಂದು. "ನಾಳೆಯೇ ನಮ್ಮ ಮನೆಗೆ ಹೊರಡುತ್ತಿದ್ದೇವೆ. ನಿನ್ನೆಲ್ಲಾ ಹೊಸ ಸ್ನೇಹಿತರಿಗೆ ಹೇಳಿ ಬಾ" ಎಂದು ಹೇಳಿಕಳಿಸಿದೆ.

"ಇಲ್ಲೇ ಇರಲು ಯಾವಾಗ ಬರುವಿ?" ಹರಿತವಾಗಿ ಕೇಳಿದಳು ನನ್ನ ತಾಯಿ. ಮುಖಕೊಟ್ಟು ಉತ್ತರಿಸಲಾಗದೆ, "ಬರುವೆ, ಬರುವೆ. ನಿನ್ನ ಆರೋಗ್ಯ ಚೆನ್ನಾಗಿ ನೋಡಿಕೋ,"ಎಂದು ಮಾತು ಬದಲಿಸಿದೆ. ಹೊರಡುವ ಸಮಯ ಬಂದಿತ್ತು. ಎಲ್ಲರಿಗೂ ವಿದಾಯ ಹೇಳಿ ನನ್ನ... ನಮ್ಮ ... ಊರ ಕಡೆ ನನ್ನ ಸಂಸಾರ ಹಾರಿ ಹೊರಟಿತು.

"ಅಮ್ಮ,ಏಕೆ ಅಷ್ಟು ಹೊತ್ತಿಂದ ಮೈಮರೆತು ಕುಳಿತಿರುವೆ? ನಾನು ಹೊರಡುತ್ತಿದ್ದೀನಿ, ಆಶೀರ್ವದಿಸು." ನಯವಾಗಿ ತಿವಿದ ಮಯೂರ. ನಾನು ಯೋಚನಾಲೋಕದಿಂದ ಹೊರಬಂದು ಅವನಿಗೊಂದು ಮುತ್ತಿಟ್ಟೆ. "ಚೆನ್ನಾಗಿರು ನನ್ನ ಕಂದ," ಎಂದು ಹರಸಿದೆ. ಥಟ್ಟನೆ ಹಾರಿ ಹೋದ ನನ್ನ ಮಯೂರ. ■


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ




## ಫೇಸ್ ಬುಕ್ಕಿನ ಗೋಡೆ ಮ್ಯಾಲೆ ಇತ್ತೊಂದು. . . .

**ರಸ್ತೆ ಮಧ್ಯೆ ಎರಡು ತುಂಡಾಗಿ ಬಿದ್ದ ದೇಹ! ಜೀವ ಉಳಿಸಿರೆಂದು ಬೇಡುತ್ತಿರುವ ಒಂದು ತುಂಡಿನ ಎರಡು ಕೈಗಳು! ಅದರ ಸುತ್ತಲೂ ರಣಹದ್ದುಗಳಂತೆ ಸ್ಮಾರ್ಟ್ ಫೋನಿನಲ್ಲಿ ಫೋಟೊ, ವಿಡಿಯೊ ತೆಗೆದು ತಮ್ಮ ಫೇಸ್ ಬುಕ್ ಗೋಡೆಯ ಮೇಲೆ ಮೆತ್ತಲು ಹೆಣಗಾಡುತ್ತಿರುವ ಹತ್ತಾರು ಕೈಗಳು!!**

Facebook, ಬಹುಶಃ ಈ ಪದವನ್ನು ಈಗಿನ ಕಾಲದಲ್ಲಿ ಕೇಳದೆ ಇರದವರು ಬಹಳ ಕಮ್ಮಿ ಅಲ್ವೆ? Facebook ಎಂಬ ಸಾಮಾಜಿಕ ಮಾಧ್ಯಮ ತಾಣವು ಅಥವಾ ಮಿಂಕೂಡಣ ಕಟ್ಟೆಯು ಒಂದು ತರಹದ ಡಿಜಿಟಲ್ ಜನಸಾಗರ! ಅಲ್ಪ ಸ್ವಲ್ಪ ಕಂಪ್ಯೂಟರ್, ಇಂಟರ್ನೆಟ್ ಗಂಧಗಾಳಿ ಸೋಕಿರುವವರು ಯಾರೇ ಇರಲಿ Facebook ಎಂಬ ಡಿಜಿಟಲ್ ಜನಸಾಗರದಲ್ಲಿ ತಮ್ಮ ಅಸ್ಥಿತ್ವವನ್ನು ಸೃಷ್ಟಿಸದೇ ಬಿಟ್ಟಿರುವುದಿಲ್ಲ! ಅದುವೇ Facebookನ ಮಾಯಾಜಾಲದ ಮೋಡಿ.

ಫೇಸ್ ಬುಕ್ ನಲ್ಲಿ ಇಂದಿಗೆ ಸರಾಸರಿ 1.65 ಶತಕೋಟಿಗೂ (ಬಿಲಿಯನ್) ಹೆಚ್ಚು, ಪ್ರತಿ ತಿಂಗಳೂ ಕಾರ್ಯ ನಿರತವಾಗಿರುವ ಸದಸ್ಯರಿದ್ದಾರೆ. ಅವರಲ್ಲಿ ಪ್ರತಿದಿನ 1 ಶತಕೋಟಿ (ಬಿಲಿಯನ್) ಸದಸ್ಯರು ತಮ್ಮ ಖಾತೆಯನ್ನು ಪ್ರತಿದಿನ ನೋಡುತ್ತಾರೆ, 300 ದಶಲಕ್ಷ (ಮಿಲಿಯನ್) ಫೋಟೊಗಳನ್ನು ಹಾಕುತ್ತಾರೆ. ಪ್ರತಿದಿನ 4.5 ಶತಕೋಟಿ (ಬಿಲಿಯನ್) ಯಷ್ಟು ಲೈಕುಗಳು ಮೂಡುತ್ತವೆ. ಪ್ರತಿ ಸೆಕೆಂಡಿಗೆ ಐದು ಹೊಸ ಸದಸ್ಯರು ಈ ಡಿಜಿಟಲ್ ಮಹಾಸಾಗರಕ್ಕೆ ಧುಮುಕುತ್ತಾರೆ. ಹೀಗೆ ಹತ್ತು ಹಲವಾರು ಬೃಹದಾಕಾರ ಅಂಕಿಅಂಶಗಳನ್ನೊಳಗೊಂಡ ಈ ತಾಣವು ಇಲ್ಲಿನ ಸದಸ್ಯರಿಗೆ ಉಪಯುಕ್ತ ಮಾಹಿತಿಗಳನ್ನು, ವಿಚಾರ ವಿನಿಮಯಗಳನ್ನು, ಸಂದೇಶಗಳನ್ನು ಕೊಡುವುದರಲ್ಲಿ ಸಂದೇಹವೇ ಇಲ್ಲ. ತಮ್ಮ ತಮ್ಮಲ್ಲಿ ಮಾಹಿತಿಗಳ ಫೋಟೊ, ವಿಡಿಯೋಗಳ ವಿನಿಮಯ, ಹಳೆಯ ಗೆಳೆಯ, ಗೆಳತಿಯೊರಡನೆ, ಸಂಬಂಧಿಕರೊಡನೆ ಮತ್ತೆ ಸಂಪರ್ಕ ಜೊತೆಗೆ ಹೊಸ ಸಂಬಂಧದ ಕೊಂಡಿಗಳು, ಇವೆಲ್ಲವೂ ಸದಸ್ಯರನ್ನು ಮೋಡಿ ಮಾಡಿಸಿ ಪರಸ್ಪರ ಸಂಬಂಧ ಕಲ್ಪಿಸುವಲ್ಲಿ ಯೋಚನೆಗೂ ನಿಲುಕದಷ್ಟು ಎತ್ತರದಲ್ಲಿ ಅನುಕೂಲಕಾರಿಯಾಗಿದೆ ಎಂಬುದು ಅತಿಶಯೋಕ್ತಿಯಲ್ಲ. ಇದರ ಬಗ್ಗೆ ಹೆಚ್ಚು ವಿಷಯವನ್ನು ಪ್ರಸ್ತಾಪಿಸುವದು ಅಗತ್ಯವಿಲ್ಲ.

ಈ ತಾಣದ ಅವಿಷ್ಕಾರದಿಂದ ಎಷ್ಟು ಒಳ್ಳೆಯ ಅನುಭವಗಳಾಗಿದೆಯೋ ಹಾಗೆಯೇ ಅದರ ಜೊತೆಗೆ ಅಲ್ಲಿ ನಡೆಯುವ ಕೆಲವು ವಿಚಾರ ವಿನಿಮಯದ ವಿದ್ಯಮಾನಗಳು ಅಸಹಜವೋ, ಕೃತಕವೋ, ಫೇಸ್ ಬುಕ್ ಗಾಗಿಯೇ ಸೃಷ್ಟಿಗೊಂಡ ಮಾಹಿತಿಯಂತಲೋ ಅಥವಾ ನಿಜ-ಜೀವನದ ಆ ವ್ಯಕ್ತಿಯ ಗುಣಲಕ್ಷಣಗಳಿಗೂ ಅವನ ಫೇಸ್ ಬುಕ್ ಸ್ಟೇಟಸ್ನಲ್ಲಿ ಬರುವ ಮಾಹಿತಿಗೂ ಅಜಗಜಾಂತರ ವ್ಯತ್ಯಾಸವಿರುವಂತೆ ಭಾಸವಾಗುತ್ತದೆ. ಕೆಲವೊಮ್ಮೆ ಅದು ಕೇವಲ ಯಾಂತ್ರಿಕ ರೀತಿಯ ವಿನಿಮಯ ಕೇಂದ್ರವೇನೋ ಎಂದು ತೋರುತ್ತದೆ.

ಫೇಸ್ ಬುಕ್ಕಿಗೆ ಮೋಡಿಯಾದವರು ತಮ್ಮ ದೈನಂದಿನ ಕೆಲಸವನ್ನು ಶುರು ಮಾಡವುದೇ ಇಲ್ಲಿಂದ! ಅದುವೇ ಜೀವ, ಅದನ್ನು ಬಿಟ್ಟು ಒಂದು ಕ್ಷಣವೂ ಇರಲಾಗುವುದಿಲ್ಲ ಎನ್ನುವ ಮಟ್ಟಿಗೆ ಬೆಳೆದಿದೆ ಫೇಸ್ ಬುಕ್ಕಿನ ಮೋಡಿ!! ಈ ವಿಷಯವಾಗಿ ಅಂತರ್ಜಾಲದಲ್ಲಿ ಹರಿಯತ್ತಿದ್ದ ಒಂದು ಸಂದೇಶ ಹೀಗಿದೆ: ಒಲೆಯ ಮೇಲಿಟ್ಟ ಹಾಲಿನ ತರಹ ಫೇಸ್ ಬುಕ್; ಮಧ್ಯೆ ಮಧ್ಯೆ ನೋಡದೆ ಇದ್ದರೆ ಸಮಾಧಾನವೇ ಇಲ್ಲ !

ನಾಟಕೀಯವಾದ, ಕೃತಕವಾದ ವಿಚಾರ ವಿನಿಮಯಗಳಿಗಂತೂ ಲೆಕ್ಕವೇ ಇಲ್ಲ ಈ ಜನಸಾಗರದಲ್ಲಿ! ಕೆಲವರ ಸ್ಟೇಟಸ್ ಮೆಸೇಜುಗಳು ಹೇಗಿರುತ್ತದೆಂದರೆ, ತಾವು ಮಹಾನ್ ಜ್ಞಾನಿಗಳು, ಭೋಧಕರು, ಜೀವನಶೈಲಿಯನ್ನು ಹೇಗೆ ರೂಢಿಸಿಕೊಳ್ಳಬೇಕು ಎಂಬ ಮಹಾನ್ ನುಡಿಗಳನ್ನು, ವಾಕ್ಯಗಳನ್ನು ಹಾಕುವುದರಲ್ಲಿ ಎತ್ತಿದ ಕೈ! ತಮ್ಮ ನಿಜಜೀವನದಲ್ಲಿ ಎಷ್ಟರಮಟ್ಟಿಗೆ ಅದನ್ನು




ಪಾಲಿಸುತ್ತಾರೋ ದೇವರೇ ಬಲ್ಲ. ಅಂತಹ ಜನರು, ಹಾಕುವ ಭೋಧನಾ ನುಡಿಗಳನ್ನು ಹತ್ತು ಪ್ರತಿಶತ ಅವರೇ ಪಾಲಿಸಿದ್ದರೆ ಈ ಜಗತ್ತು ಹೀಗೆ ಇರುತ್ತಿರಲಿಲ್ಲವೇನೋ? ಅವರ ಕೆಲಸ ಎಲ್ಲಿಂದಲೋ ಬಂದ ನುಡಿಮುತ್ತುಗಳನ್ನು ತಮ್ಮ ಗೋಡೆಯ ಮೇಲೆ ಮೆತ್ತುವುದು, ಮುಂದಕ್ಕೆ ನಡೆಯುವುದು, ಅದನ್ನು ಪಾಲಿಸುವ ಯೋಚನೆ ಅವರದ್ದಲ್ಲ ಎನಿಸುತ್ತದೆ.

ಇಂತಹ ಪುಟಗಳನ್ನು ನೋಡಿದಾಗ ನಾನು ಬರೆದ ಒಂದು ಚುಟುಕ ಹೀಗಿದೆ.

**ಅವನ ಫೇಸ್ ಬುಕ್ ಪುಟಗಳ ತೆರೆದರೆ ,**
**ಒಂದು ಸುಂದರ ಕಾವ್ಯದ ಪುಟಗಳಂತೆ |**
**ಅವನ ನಿಜಜೀವನದ ಪುಟಗಳ ತೆರೆದರೆ ,**
**ಕೇವಲ ರದ್ದಿ ಪುಸ್ತಕದ ಹರಿದ ಹಾಳೆಗಳಂತೆ !|**

ವಿಚಾರ ವಿನಿಮಯಗಳಲ್ಲಿ ತಮ್ಮ ಇಷ್ಟ(like), ಇಷ್ಟವಿಲ್ಲದಿರುವಿಕೆಯನ್ನು (dislike) ಸ್ವತಂತ್ರವಾಗಿ ವ್ಯಕ್ತ ಪಡಿಸುತ್ತಾರೆ. ಈ ಇಷ್ಟಗಳು ಯಾವ ಅತಿರೇಕಕ್ಕೆ ಇರುತ್ತವೆ ಎಂದರೆ, ಸೂಕ್ತವೆನಿಸದ ಸಂದರ್ಭಗಳಲ್ಲಿ ಉದಾಹರಣಗೆ, ಯಾರದೋ ಶ್ರದ್ಧಾಂಜಲಿಯ ವಿಚಾರವನ್ನು ಲೈಕ್ ಮಾಡುವುದು! ಇದೆಂತಹ ವಿಪರ್ಯಾಸ! ಮನಸ್ಸು ಸ್ಥಿಮಿತದಲ್ಲಿರುವವರು ಮಾಡುವ ಕೆಲಸವಲ್ಲ ಇದು. ಹೀಗಿದೆ ಕೆಲವರ ಪ್ರವೃತ್ತಿ ಈ ಜನಸಾಗರದಲ್ಲಿ. ಇನ್ನು ಶ್ರದ್ಧಾಂಜಲಿಗಳಲ್ಲಿ RIP ಗಳ ಸುರಿಮಳೆಯನ್ನೇ ನೋಡಬಹುದು. ಅವರ ಕೆಲಸ ಮೂರು ಅಕ್ಷರದ RIP ಯನ್ನು ಮೂರು ಸೆಕೆಂಡಿನಲ್ಲಿ ಟೈಪ್ ಮಾಡಿ ಮುಂದೆ ಹೋಗುವುದು ಅಷ್ಟೆ! ಅದರ ಹಿಂದಿನ ಭಾವುಕತೆಗೆ ಬೆಲೆಯೇ ಇಲ್ಲ. ಇದೆಷ್ಟು ಕೃತಕಲೋಕ ಎನಿಸುವುದಿಲ್ಲವೇ? ಎಷ್ಟೆಂದರೆ, ಸ್ನೇಹಿತನೊಬ್ಬ ಯಾರದೋ ಶ್ರದ್ಧಾಂಜಲಿಯಲ್ಲಿ RIP ಹೊಡೆದು ಮುಂದೆ ಹೋಗಿದ್ದ, ಕೆಲವು ದಿನಗಳ ನಂತರ ತನ್ನ ಸ್ನೇಹಿತನ ಜೊತೆ ಆ ಸಾವಿನ ವಿಚಾರ ಬಂದಾಗ ಅವನು ಕೇಳಿದ್ದು " ಅವರು ಯಾವಾಗ ತೀರಿಕೊಂಡರು ಅಂತ" ಹೀಗಿದೆ ಕೆಲವರ ಫೇಸ್ ಬುಕ್ ಜಗತ್ತು!

ಸ್ಟೇಟಸ್ ಗಳ ಇನ್ನೊಂದು ಶೈಲಿ, ತಮ್ಮ ದಿನನಿತ್ಯದ ಆಗುಹೋಗುಗಳನ್ನು ಚಾಚೂತಪ್ಪದೆ ಗೋಡೆಯ ಮೇಲೆ ಹಾಕುವ ಪದ್ಧತಿ (ಕೆಟ್ಟ ಪದ್ಧತಿ ?). ಶುಭೋದಯದ ಮೆಸೇಜ್ ನಿಂದ ಶುರುವಾಗಿ, ತಿಂಡಿ ತಟ್ಟೆಯ ಫೋಟೊ, ಮಧ್ಯಾಹ್ನದ ಕೆಲಸವೇನು, ಯಾವ ಚಲನಚಿತ್ರಕ್ಕೆ ತಯಾರಿ, ಮನೆಗೆ ಯಾರು ಬಂದಿದ್ದಾರೆ, ಹೀಗೆ ಹಲವಾರು ವಿಷಯವನ್ನು ಬಿಡಿಬಿಡಿಯಾಗಿ ಹಾಕಿ ಕೂರುವುದು.

ಇಂತಹವರು ರಜೆ ನಿಮಿತ್ತ ಬೇರೆ ಊರಿಗೆ ಹೋದರಂತೂ, ವಿಷಯಗಳ ಮಹಾಪೂರವೇ! ಘಳಿಗೆ ಘಳಿಗೆಗೊಂದು ಸ್ಟೇಟಸ್ ಅಪ್ಡೇಟ್. ಟ್ಯಾಕ್ಸಿ ಹತ್ತುವಾಗಿಂದ ಹಿಡಿದು, ಏರ್ಪೋರ್ಟ್ಗೆ ಬಂದಿಳಿದಿದ್ದು, ಯಾವ ಏರ್ಪೋರ್ಟ್ನಿಂದ ಎಲ್ಲಿಗೆ ಪ್ರಯಾಣ, ಆಸೀನರಾಗಿದ್ದು, ಜೊತೆಗೊಂದು ಫೋಟೊ, ಹೋಗಬೇಕಾದ ಜಾಗ ಸೇರಿದಾಗ ಆ ಏರ್ಪೋರ್ಟ್ನ ವರದಿ... ಹೀಗೆ ಮಿತಿಯೇ ಇಲ್ಲದಷ್ಟು ವರದಿ! ತಮ್ಮ ಆ ದಿನಗಳ ಆಗುಹೋಗುಗಳನ್ನು ಇಡೀ ಜಗತ್ತಿನ ಮುಂದೆ ಬಿಚ್ಚಿಡುತ್ತಾರೆ. ಇದು ಜನ ಜಾತ್ರೆಯ ಮಧ್ಯದಲ್ಲಿ ನಗ್ನರಾದಂತೆ!! ಯಾರಿಗೆ ಆ ವಿಷಯಗಳು ಸೂಕ್ತವೋ ಅವರಿಗಷ್ಟೇ ತಿಳಿದರೆ ಸಾಕು, ಇಡೀ ಜನಸಾಗರಕ್ಕೆ ಅನವಶ್ಯಕ, ಮೇಲಾಗಿ ಹೆಚ್ಚಿನ ತೊಂದರೆಗಳಿಗೂ ಆಸ್ಪದವಾಗಬಹುದು.

ಇನ್ನು ವಿಶೇಷತೆ ಕೂಡಿರುವ ಫೋಟೊ, ವಿಡಿಯೊಗಳನ್ನು ಹಾಕುವುದೇ ಒಂದು ಘನಕಾರ್ಯ. ಅದಕ್ಕೆ ವೈರಲ್ ಅಂತ ಪಟ್ಟ ಸಿಕ್ಕರೆ ಅವರನ್ನ ಹಿಡಿಯೋಕ್ಕೇ ಆಗಲ್ಲ, ಒಂದು ತರಹ ನೊಬೆಲ್ ಪ್ರಶಸ್ತಿ ಸಿಕ್ಕಷ್ಟು ಖುಷಿ. ಇಂತಹ ಫೋಟೊ, ವಿಡಿಯೋಗಳನ್ನು ತೆಗೆಯಲು ತಮ್ಮನ್ನು ವಿವಿಧ ರೀತಿಯ ಅಪಾಯಕಾರಿ ಪರಿಸ್ಥಿತಿಗಳಿಗೆ ತೊಡಗಿಸಿಕೊಂಡು ಅವಗಢಗಳಿಗೆ ಕಾರಣವಾದ ನಿದರ್ಶನಗಳಿವೆ. ಜೊತೆಗೆ ಅವಗಢದ ಸಂದರ್ಭದ ಸ್ಥಳದಲ್ಲಿ ಮಾನವೀಯತೆ ಮರೆತು ಫೋಟೊ, ವಿಡಿಯೊಗಳನ್ನು ತೆಗೆದು ತಮ್ಮ ಫೇಸ್ ಬುಕ್ ಗೋಡೆಯ ಮೇಲೆ ಹಾಕುವ ಹುಚ್ಚು. ಇತ್ತೀಚಿಗೆ ಬೆಂಗಳೂರಿನಲ್ಲಿ ರಸ್ತೆ ಅಪಘಾತ ಸಂಭವಿಸಿದಾಗ, ರಸ್ತೆ ಮಧ್ಯೆ ಎರಡು ತುಂಡಾಗಿ ಬಿದ್ದ ದೇಹ! ಜೀವ ಉಳಿಸಿರೆಂದು ಬೇಡುತ್ತಿರುವ ಒಂದು ತುಂಡಿನ ಎರಡು ಕೈಗಳು! ಅದರ ಸುತ್ತಲೂ ರಣಹದ್ದುಗಳಂತೆ ಸ್ಮಾರ್ಟ್ ಫೋನಿನಲ್ಲಿ ಫೋಟೊ, ವಿಡಿಯೊ ತೆಗೆದು ತಮ್ಮ ಫೇಸ್ ಬುಕ್ ಗೋಡೆಯ ಮೇಲೆ ಮೆತ್ತಲು ಹೆಣಗಾಡುತ್ತಿರುವ ಹತ್ತಾರು ಕೈಗಳು!! ಒಂದು ಜೀವ ಉಳಿಸುವ ಕಾರ್ಯದಲ್ಲಿ ಮುಂದಾಗಿರಬೇಕಾದ ಕೈಗಳು, ವಿಡಿಯೋ ತೆಗೆಯುವಲ್ಲಿ ಮಗ್ನವಾಗಿದ್ದವು. ಇಂತಹ ವರ್ತನೆಗಳ ಸೃಷ್ಟಿಗೆ ಕಾಲಕ್ಕೆ ತಕ್ಕಂತೆ ಬಂದಿರುವ ಫೇಸ್ ಬುಕ್ ತರಹದ ಮಾಧ್ಯಮರೂಪಗಳ ಪಾಲೂ ಇರಬಹುದೇನೋ?

ಯಾವುದೇ ಒಂದು ತಾಣವನ್ನು ಮಿತಿಗೆ ತಕ್ಕಂತೆ, ವಿವೇಚನೆಯಿಂದ ಬಳಸುವದು ಬಹಳ ಸೂಕ್ತ. ಇದರಿಂದ ಒಳ್ಳೆಯ ನೈಜ ರಸಾನುಭವ ಸಿಗುವುದೆಂದು ನನ್ನ ಅನಿಸಿಕೆ. ■

**ಚಿತ್ರ ಕೃಪೆ : ಅಂತರ್ಜಾಲ**


Copyright © KCO – Brindavana




ನಾನು ಓದಿದ ಪುಸ್ತಕ

ರಾಘವೇಂದ್ರ ಕುಂದಲಗುರ್ಕಿ

## ಲೈಫ್ ಈಸ್ ಬ್ಯೂಟಿಫುಲ್ - ಕಣ್ಣ್ ಬಿಟ್ಟ್ ನೋಡ್ರಿ

**ಎಲ್ಲೋ ಮರೆತ ವಿಷಯಗಳಿಗೆ ಹೊಸ ಬೆಳಕು..ಹೊಸ ದೃಷ್ಟಿಕೋನ..ಜೋಗಿಯ ಪುಸ್ತಕ ಓದು ಮುಗಿಸಿ ಇಟ್ಟೊಡನೆ ಮನಸ್ಸಿನಲ್ಲಿ ಬಂದಿದ್ದು " ಜೀವನದ ಸೊಬಗನ್ನು ಮತ್ತೊಮ್ಮೆ ಕಣ್ಣು ಬಿಟ್ಟು ನೋಡ್ರಿ"**




Facebook, Whatsapp ಎಲ್ಲದರ ನಡುವೆ ಬಿಡುವು ಮಾಡಿಕೊಂಡು ಕನ್ನಡದ ಪುಸ್ತಕ ಓದುವುದು ಸಾಮಾನ್ಯ ವಿಷಯವೇನಲ್ಲ. ಇಂತದರ ಮಧ್ಯೆ ಒಂದು ದಿನ ಕಣ್ಣಿಗೆ ಬಿದ್ದ ಪುಸ್ತಕ ನಮ್ಮ ಜೋಗಿಯ "ಲೈಫ್ ಇಸ್ ಬ್ಯೂಟಿಫುಲ್".

ಜೋಗಿ ಕಥೆಗಳ ಒಡನಾಟ ಹೊಸತೇನಲ್ಲ. ದಶಕಗಳ ಹಿಂದಿನ "ಹಾಯ್ ಬೆಂಗಳೂರು" ಹುಟ್ಟಿದಾಗಿಂದಲೂ ಜೋಗಿಯ ಕಾಲಮ್ ನಮ್ಮ Reading ನಲ್ಲಿ ಕಾಯಂ. ಈ ಪುಸ್ತಕದ ಹೆಸರನ್ನು ಓದಿದ ತಕ್ಷಣ ತಟ್ಟನೆ ಅನಿಸಿದ್ದು ಇದ್ಯಾವುದೋ Melodrama ಇರುವ ಪ್ರೀತಿಯಲ್ಲಿ ಬಿದ್ದ ಜೋಗಿ ಮಹಾಶಯರ ಪ್ರೇಮ ವಿಲಾಪದ ಪರಿ ಎಂದು ಅನ್ನಿಸುವುದರಲ್ಲಿ ಅದರ Tag line, "ಕಣ್ಣು ಬಿಟ್ಟು ನೋಡ್ರಿ" ನನ್ನ ಗಮನ ಸೆಳೆಯಿತು. ಜೀವನದ ಪದರಗಳನ್ನು ಕದರ್ ಆಗಿ ಕಥಾಹಂದರದಂತೆ ಹೆಣೆಯುವ ನಮ್ಮ ನವ್ಯ ಕನ್ನಡದ ಕಿಂದರ "ಜೋಗಿ"ಯ ಪುಸ್ತಕ , ಸಣ್ಣ ಸಣ್ಣ ಕಥೆಗಳ ಸಂಗ್ರಹ.ನಿಮ್ಮ ಸಮಯಕ್ಕೆ ಸೂಕ್ತ ಬೆಲೆ ಕೊಡುವ ಕೈಪಿಡಿ.

ಮೊದಲ ಪುಟದಲ್ಲೆ warning sign! ಯಾರೂ ಪುಸ್ತಕ ಓದಿ ಅಂತಲ್ಲ, ದಯವಿಟ್ಟು ಈ ಪುಸ್ತಕ ಓದಬೇಡಿ ಅಂತ!

1. ನೀವು 10 ಗಂಟೆ ಕಾಲ ಫೋನ್ ನಲ್ಲಿ ಮಾತಾಡುತ್ತಿದ್ದರೆ ನಿಮಗಲ್ಲ ಈ ಪುಸ್ತಕ
2. ದಿನವಿಡೀ Facebook ನೋಡುತ್ತಿದ್ದರೆ ನಿಮಗಲ್ಲ ಈ ಪುಸ್ತಕ.
3. ನೀವು ಮಾತಿಗಿಂತ Whatsapp ಮೇಲು ಅನ್ನುವವರಾಗಿದ್ದರೆ ನಿಮಗಲ್ಲ ಈ ಪುಸ್ತಕ.

ಹೀಗೆ ಮುಂದುವರೆಯುತ್ತದೆ, Exclusion list..

ನಮ್ಮ ಅಭ್ಯಾಸಗಳ ತುಂಬು ಪರಿಚಯವಿದ್ದ ಆತ್ಮೀಯವಾದವರ ಬೇಸರದ ನುಡಿಗಳು.. ಪುಸ್ತಕದ ಮೇಲಿನ ಪ್ರೀತಿಯ ಜೊತೆಗೆ ಈಗಿನ ಸಮಕಾಲಿನ ಜನರ ಮೇಲೆ Social media ಮಾಡಿರುವ ಭ್ರಾಂತು ಲೋಕದ ಪರಿಣಾಮ.

೧.ಶ್ರವಣಕುಮಾರ, ಕಾಂಕ್ರೀಟ್ ನಗರದಲ್ಲಿ ದಾರಿಯನ್ನು ತಪ್ಪುವ ಯಮ-ಚಿತ್ರಗುಪ್ತರು, ವಿಳಾಸದ ಗೊಂದಲದಲ್ಲಿ ಅವರನ್ನು ಬೇಟಿಯಾಗುವ ಶಿಸ್ತಿನ ವ್ಯಕ್ತಿ. ಯಮನನ್ನು ಕಂಡೊಡನೆ ಅವನ ಜೀವನದ ಬೇಕು-ಬೇಡಗಳು, ಮಾಡಬೇಕಾದ ಕೆಲಸಗಳು, ಕಳೆದು ಹೋಗುವ ಎಲ್ಲ ಈ ಪ್ರಪಂಚದ ಸುಖಗಳು, ಒಮ್ಮೆಲೇ ಸಾವಿನ ಅಂಚಿನಿಂದ ಕಾಣುವ ಜೀವನದ ಚಲನಚಿತ್ರ. ಹಿಂದಿನ ಬೀದಿಯ ತರಕಾರಿ ಮಾರುವ ಶ್ರವಣಕುಮಾರನಿಗೆ ಬಂದ ಸಾವಿನಲ್ಲಿ ತನ್ನ ಜೀವನದ ಚರಿತ್ರೆಯನ್ನು ಕಾಣುವ ಈ ನಗರವಾಸಿಗೆ ತನ್ನ ಅಂತರಂಗದ ಧ್ವನಿಯನ್ನು ಶ್ರವಣ ಮಾಡಿಸಿ ಜೀವನದ ಮೌಲ್ಯಗಳ ತುಲನೆ ಮಾಡಿ ಎಂದು ಪ್ರಶ್ನೆಯನ್ನು ಮುಂದಿಡುತ್ತಾರೆ. ಈ ಪ್ರಶ್ನೆಯ ಗಾಢತೆ ಎಷ್ಟಂದರೆ ನಾವೆಲ್ಲ ಆ ಶ್ರವಣ ಕುಮಾರರಾಗುತ್ತೇವೆ. ಅವನ ಪ್ರಶ್ನೆಗಳು ನಮ್ಮದಾಗುತ್ತದೆ. ಉತ್ತರಗಳು ಪ್ರಶ್ನೆಯಂತೆ ಬದಲಾಗುತ್ತದೆ.

೨. "ಎಲ್ಲರ ಜೊತೆ ಸಾಗುವುದಕ್ಕೆ ವಿದ್ಯೆ, ಎಲ್ಲರನ್ನೂ ಮೀರುವುದಕ್ಕೆ ಪ್ರತಿಭೆ". ನಾವು ಶಾಲೆಯಲ್ಲಿ ನಿಜವಾಗಿ ಕಲಿತಿದ್ದೇನು? ನಮ್ಮನ್ನು ಸದಾ ಕಾಡುವ ಈ ಪ್ರಶ್ನೆ, ಈ ಓದಿನಿಂದ ನಮ್ಮ ಸುಪ್ತ ಪ್ರತಿಭೆಗಳಿಗೆ ನಾವೆಷ್ಟು ನೀರೆರೆಯುತ್ತೇವೆ? ಬರೀ ಅಂಕಗಳ ಬರೋಬರಿಯಲ್ಲಿ ಯಾವ ಕಾಲೇಜಿನಲ್ಲಿ ಸೀಟು ಸಿಕ್ಕಿತು? ಯಾವ ಕಂಪನಿಯಲ್ಲಿ ಕೆಲಸ? ಸಂಬಳ ಎಷ್ಟು? ಇಷ್ಟೇ, ನಾವು ನಮ್ಮ ಮಕ್ಕಳಿಗೆ ಕೇಳುವ ಪ್ರಶ್ನೆಗಳು, ನಾವು ನಮಗೆ ಹಾಕಿಕೊಳ್ಳುವ ಪ್ರಶ್ನೆಗಳು. ಕುರಿಮಂದೆಯಂತೆ ನಾವು ಬೇರೆಯವರಂತೆ ಇರಬೇಕೆಂಬ ಹಂಬಲ ನಮ್ಮ ಸುಪ್ತ ಪ್ರತಿಭೆಯನ್ನು ಪೋಷಿಸದ ನಮಗೆ ನಾವೆ ಮಾಡಿಕೊಳ್ಳುವ ಒಂದು ವಂಚನೆ. ಜೀವನದ ಅನುಭವ ಹಾಗು ಪ್ರಕೃತಿಯಿಂದ ಕಲಿಯಬೇಕಾದ ಪಾಠಗಳನ್ನು ಪುಸ್ತಕದ ಪಾಠದಲ್ಲಿ ಓದುವ ರೀತಿ ಹೇಗೆ ಉಪಯೋಗವಿಲ್ಲ ಎನ್ನುವ ಮಾತನ್ನು ಸಿ.ಅಶ್ವಥ್ ರವರ ಅನುಭವದ ಮಾತು "ನನ್ನ ಹತ್ತಿರ ಸಂಗೀತ ಕಲಿತು, ನನ್ನಂತೆ ಹಾಡಲು ನೀ ಯತ್ನಿಸಿದರೆ, ನೀನಾಗುವುದು ಮತ್ತೊಬ್ಬ ಸಿ.ಅಶ್ವಥ್! ಪ್ರಪಂಚ ನಿನ್ನನ್ನು ಗುರುತಿಸುವ ರೀತಿ ಮತ್ತೊಬ್ಬ ಸಿ.ಅಶ್ವಥ್ ರೆಂದೇ ಹೊರತು ನಿನ್ನ ನಿಜವಾದ ಸಂಗೀತ ಪ್ರತಿಭೆಯನ್ನಲ್ಲ.." ಹಾಗೂ ಬಿ.ವಿ. ಕಾರಂತರು ನಡೆದು ಬಂದ ಜೀವನ, ತೆಂಡೊಲ್ಕರ್, ಡಾ.ರಾಜ್ ಕುಮಾರ್ ಹಲವಾರು ಹೆಸರಾಂತ ವ್ಯಕ್ತಿಗಳು ಹೇಗೆ break the rules ಅನ್ನೊ philosophyಯಲ್ಲಿ ಹೇಗೆ ಸ್ವಪ್ರತಿಭೆಯನ್ನು ಕಂಡು ಹಿಡಿದು ಅದನ್ನು ಬೆಳಸಿದರು ಎನ್ನುವ ವಿಷಯವನ್ನು ಅತ್ಯಂತ ಮನ ಮುಟ್ಟುವಂತೆ ಮಾಡುವಲ್ಲಿ ಜೋಗಿ ಸಫಲ.

೩. "ನಾವೇನು ಅನ್ನುವುದನ್ನು ನಮ್ಮ ಪ್ರತಿಕ್ರಿಯೆ ಹಾಗು ಕ್ರಿಯಗಳು ಹೇಳುತ್ತದೆ"..ಅವಶ್ಯಕತೆ ಇದ್ದವರು ನಿಮ್ಮನ್ನು ಕರೆಯುವ ರೀತಿ ನಿಮ್ಮ ವೃತ್ತಿಯಿಂದ, ವೈದ್ಯರೊ, ಲಾಯರ್ ಅಥವಾ ಇಂಜಿನಿಯರ್ ಆದರೆ ಅದರ ಅವಶ್ಯಕತೆ ಇಲ್ಲದವರು ಕರೆಯುವ ರೀತಿ ನೀನು "ಮನುಷ್ಯನೋ ಅಲ್ಲವೊ ಎಂದು" ಎಂತಹ ಮಾರ್ಮಿಕತೆ! ಪೂಜಾರಿಯ ಹೋಳಿಗೆ ಹಾಗು ತುಪ್ಪಾ ಬಾಯಲ್ಲಿ ನೀರನ್ನು ಉರಿಸಿದರೂ, ಅದರ ಮೇಲೆ "ವಿಷ" ಎಂದು ಬರೆದರೂ ಅದರ ವಾಸನೆಯ ಜಾಡಿಡಿದ ಶಿಷ್ಯರು ಹೇಗೆ ಎಲ್ಲ ಹೋಳಿಗೆಯನ್ನು ಹಾಗು ವಿಷವೆಂಬ "ತುಪ್ಪ" ವನ್ನು ತಿನ್ನುತ್ತಾರೆ. ನಿಮ್ಮ ಸುಪ್ತ ಪ್ರತಿಭೆಗೆ ಹೆಸರು ಬೇಡ, ನಿನ್ನ passion pursue ಮಾಡು, ನಿನಗೆ ಸೇರಬೇಕಾದ ಫಲ ಸಿಗುತ್ತೆ.

೪. ಹಿಂಟ್ ಪ್ರಶ್ನೆಗಳು ಸರಿಯಿರಲಿ, ಫೇಸ್ ಬುಕ್ ಯುಸರ್ ನೇಮ್ ಸರಿಯಾಗಿತ್ತು ಆದರೆ ಪಾಸ್ ವರ್ಡ ಸರಿ ಇರಲಿಲ್ಲ. ಹಲವಾರು ಪ್ರಯತ್ನಗಳು, ಹಲಾವಾರು ಬಾರಿ ಲಾಕ್ ಔಟ್, ಹಿಂಟ್ಸ್ ಮೇಲೆ ಹಿಂಟ್ಸ್, ಆದರು ನೆನಪಾಗದ ಪಾಸ್ ವರ್ಡ. ನಿಮ್ಮ ತಾಯಿಯ ಮದುವೆಯ ಮುಂಚಿನ ಹೆಸರು? ನೀನು ಬೆಳದ ಊರಿನ ಮೊದಲ ಬೀದಿ..ಹೀಗೆ ..ಪ್ರಶ್ನೆಗಳ ಮೇಲೆ ಪ್ರಶ್ನೆಗಳು..
ನಾ ಬರೆದ ಉತ್ತರಗಳಾವು? ನನಗೆ ಎಲ್ಲದರ ಮರೆವು..
ಪ್ರೀತಿ ಒಂದು ರೀತಿ ಇಂಟರ್ನೆಟ್ ಅಕೌಂಟೆ ಇದ್ದಂಗೆ
ಯಾರು ಬೇಕಾದರು ಹ್ಯಾಕ್ ಮಾಡಬಹುದು. ಎಲ್ಲಿಂದ ಬೇಕಾದರು ಲಾಗಿನ್ ಆಗಬಹದು..ದಿನ ಕಳೆದಂತೆ ಸಂಬಂಧಗಳನ್ನು taken for granted ಆದರೆ.
ಪಾಸ್ ವರ್ಡ ಮರೆಯುವ ಸಾಧ್ಯತೆಗಳು ಹಲವು..ಅದನ್ನು ಮರೆತಾಗ ಉಪಯೋಗಕ್ಕೆ ಬರುವುದು ಹಿಂಟ್ಸ್. ನಿಮ್ಮ ಮೊದಲ ಭೇಟಿ ಎಲ್ಲಿ?
ಮೊದಲು ಬಂದಾಗ ಉಟ್ಟ ಸೀರೆ? ಹೋದ ಮೊದಲ ಹೋಟೆಲ್?
ಹಲವಾರು ಸನ್ನಿವೇಶಗಳು .ಹಲವಾರು ನೆನಪುಗಳು..ಸಂಬಂಧಗಳು ಹಳೆಯದಾದಗ ಬೇಕಾಗುವುದು ಈ ಹಿಂಟ್ಸ್ ಮರೆಯದಿರಿ. ಒಂದೇ ಅಂಕೌಂಟ್ ಇರಲಿ. ಕೆಲವೇ ಪ್ರಶ್ನೆಗಳಿರಲಿ. ನೆನಪಿಗೂ ಸುಲಭ .ಮರೆಯಲೂ ಕಷ್ಟ..

೫. ಬೆಳಕಿಲ್ಲದೆ ದಾರಿ ಕಾಣುವುದಿಲ್ಲ. ಬೆಳಕು ಜಾಸ್ತಿಯಾದರೂ ದಾರಿ ಕಾಣುವುದಿಲ್ಲ. ಜ್ಞಾನದ ಬೆಳಕು ಹೇಗೆ ನಮ್ಮ ಮೇಲೆ ಬೀಳಬೇಕು? ನಮ್ಮ ಹಿಂದೆ ಬೀಳುವ ಬೆಳಕು ಹೇಗೆ ದಾರಿದೀವಿಗೆಯಾಗುತ್ತದೋ , ಅದೇ ಮುಂದೆ ಬೀಳುವ ಬೆಳಕು ಎದುರು ಬರುವ ವಾಹನದ ಹೆಡ್ ಲೈಟ್ ದೀಪಕ್ಕೆ ಹೇಗೆ ಕಣ್ಣು ಕಾಣಿಸುವುದಿಲ್ಲವೋ ಆ ರೀತಿ ನಮ್ಮನ್ನು ಅಜ್ಞಾನದಲ್ಲಿಗೆ ಒಯ್ಯುತ್ತದೆ..
ಹೀಗೆ ಹಲವಾರು ಸಣ್ಣ ಕಥೆಗಳು. ಸಣ್ಣ ಕಥೆಗಳಲ್ಲಿ ಒಂದೊಂದು ಜೀವನ ಸಾರಗಳು. ಅನುಭವಗಳು...
ಎಲ್ಲೋ ಮರೆತ ವಿಷಯಗಳಿಗೆ ಹೊಸ ಬೆಳಕು. ಹೊಸ ದೃಷ್ಟಿಕೋನ. ಜೋಗಿಯ ಪುಸ್ತಕ ಓದು ಮುಗಿಸಿ ಇಟ್ಟೊಡನೆ ಮನಸ್ಸಿನಲ್ಲಿ ಬಂದಿದ್ದು " ಜೀವನದ ಸೊಬಗನ್ನು ಮತ್ತೊಮ್ಮೆ ಕಣ್ಣು ಬಿಟ್ಟು ನೋಡ್ರಿ". ■


Copyright © KCO – Brindavana

ಸಂಚಿಕೆ
೧೪
ಮೇ ೨೦೧೬

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಅಮ್ಮ ನಿನಗಾಗಿ. . . .



### ಅಮ್ಮ

ದಾಶರಥಿ ಘಟ್ಟು

**ಮ**ಗ ಪಾಠದ ಮೇಷ್ಟರ ಮುಂದೆ ಕೂತು ಅವರು ಕೊಟ್ಟ ಸಮಸ್ಯೆಯನ್ನು ಬಿಡಿಸಲು ತಿಣುಕಾಡುತ್ತಿದ್ದಾನೆ. ಮಗನನ್ನು ನೋಡುತ್ತ ನಿಂತಿರುವುದೇ ಕೆಲಸವಾಗಿರುವ ಅಮ್ಮ ಅವನ ಕಡೆ ನೋಡುತ್ತಾ ಆತಂಕಿತಳಾಗಿದ್ದಾಳೆ. ಕಂಗಾಲಾದ ಮಗ ಅಮ್ಮನನ್ನು ಅಸಹಾಯಕತೆಯಿಂದ ನೋಡುತ್ತಾನೆ. ಅಮ್ಮ ಅವನಿಗೆ ಸಮಾಧಾನದಿಂದಿರುವಂತೆ ಸನ್ನೆ ಮಾಡಿ, ಹಾರ್ಲಿಕ್ಸ್ ಮಾಡಿ ತಂದುಕೊಡುತ್ತಾಳೆ. ಅದನ್ನು ಕುಡಿದ ಮಗ ಮೇಷ್ಟರ ನಿರೀಕ್ಷೆಗೂ ಮೀರಿ ಪಾಠ ಒಪ್ಪಿಸಿ, ಮೇಷ್ಟರನ್ನು ದಂಗು ಬಡಿಸುತ್ತಾನೆ. ಇದು ೯೦% ಜಾಹೀರಾತುಗಳಲ್ಲಿ ಕಾಣುವ ಅಮ್ಮ.

ಇನ್ನು ಕನ್ನಡ ಸಿನೆಮಾಗಳ ಅಮ್ಮ - ಬಡವಳಾಗಿದ್ದರೆ, ಜೀವನವಿಡೀ ಕಣ್ಣೀರು ಸುರಿಸುತ್ತಾ, ಹೊಲಿಗೆ ಯಂತ್ರ ತುಳಿದು ಕಾಲು ಸವೆಸುತ್ತಾ, ತಾನು ಹರಕು ಸೀರೆ ಉಟ್ಟು, ಮಗನು ಬೈಕ್ ಕೊಂಡುಕೊಳ್ಳಲು ಹಣ ಕೊಡುತ್ತಾಳೆ. ಶ್ರೀಮಂತ ಅಮ್ಮ, ಮಗನ ಬಯಕೆಗಳನ್ನೆಲ್ಲ ತೀರಿಸುತ್ತಾ, ಯಾರೋ ಕಾಣಬಾರದ ಹುಡುಗಿಯನ್ನು ಧಿಡೀರ್ ಎಂದು ತಂದು ನಿಲ್ಲಿಸಿದಾಗಲೂ ವಿಚಲಿತಳಾಗದೇ, ಹುಡುಗಿಯನ್ನು ಅಪ್ಪಿ, "ನನ್ನ ಮಗನ ಸೆಲೆಕ್ಷನ್ ಯಾವಾಗಲೂ ಬೆಸ್ಟ್" ಅಂತ ಡಯಲಾಗ್ ಹೊಡೆಯುತ್ತಾಳೆ. ಅಮ್ಮ ಎಂದರೆ ಮೇಲಿನ ಯಾವುದಾದರೂ ರೀತಿ ಇರಬೇಕು ಎಂದುಕೊಂಡರೆ ನನಗೆ ನಿರಾಸೆಯಾಗುವುದಂತೂ ಖಂಡಿತ.

ಹದಿನಾರು ವರ್ಷಕ್ಕೇ ಮದುವೆಯಾಗಿ, ನಮ್ಮ ತಂದೆಯ ಮನೆಗೆ ಬಂದ ಅಮ್ಮ ತನ್ನ ೧೭ನೇ ವಯಸ್ಸು ಮುಗಿಯುವಷ್ಟರಲ್ಲಿ ನನ್ನ ತಾಯಾಗಿದ್ದಳು. ಈಗಿನ ಟೀನೇಜ್ ಹುಡುಗಿಯರು ತಾವು ಆಚರಿಸಿಕೊಂಡ ಸ್ವೀಟ್ ಸಿಕ್ಸ್ ಟೀನ್ ಗುಂಗಿನಲ್ಲಿ ಇರುವ ಕಾಲದಲ್ಲಿ, ಅಮ್ಮ ಕೈಯ ಮಗುವನ್ನು ಪಾಲನೆ ಮಾಡುತ್ತಾ, ಅತ್ತೆಯ ಮಡಿ, ಅಡಿಗೆ ಮನೆ, ಮನೆ ಕೆಲಸ, ದನಕರುಗಳ ಉಸ್ತುವಾರಿ ಮತ್ತು ಹೊಲಗದ್ದೆಗಳಿಂದು ಹೈರಾಣಾಗುತ್ತಾ ದಿನದ ಇಪ್ಪತ್ನಾಲ್ಕು ಗಂಟೆಯೂ ಸಾಲದೇನೋ ಎನ್ನುವಂತಿದ್ದಳು.

ಬೆಳಿಗ್ಗೆ ನಾನೇದರೂ ಬೇಗ ಎದ್ದಿದ್ದರೆ, ಅಮ್ಮ ಅಷ್ಟು ಹೊತ್ತಿಗೇ ಎದ್ದು ದನದ ಕೊಟ್ಟಿಗೆ ಕಸ ಗುಡಿಸಿ ತಿಪ್ಪೆಗೆ ಸುರಿದು ಬರಲು ಹೊರಟು ಹೋಗಿರುತ್ತಿದ್ದಳು. ಹೊತ್ತು ಮೂಡಿದ ಮೇಲಂತೂ ಮಡಿ ಉಟ್ಟು ಅಡಿಗೆಮನೆ ಸೇರಿರುತ್ತಿದ್ದಳು.

ವರ್ಷಗಳು ಕಳೆದಂತೆ ತಮ್ಮಂದಿರು, ತಂಗಿಯರು ಮನೆ ತುಂಬಿ, ಮನೆಕೆಲಸ, ಹೊಲದ ಕೆಲಸಗಳಲ್ಲದೆ ನಮ್ಮಗಳಿಗೆ ಸ್ನಾನ ಮಾಡಿಸಿ ತಿನ್ನಲೇನಾದರೂ ಹವಣಿಸಿ ಸ್ಕೂಲಿಗಟ್ಟುವ ಕೆಲಸ ಗೋ-ಲೈವ್ ದಿನದ ಒತ್ತಡಕ್ಕಿಂತ ಹೆಚ್ಚಿರುತ್ತಿತ್ತು.

ಹಳ್ಳಿಯಲ್ಲಿ ಇರುವಷ್ಟು ವರ್ಷಗಳೂ ಹತ್ತು ಹಲವು ಕೆಲಸಗಳಲ್ಲಿ ಹೈರಾಣಾಗಿರುತ್ತಿದ್ದ ಅಮ್ಮನನ್ನು ನೆನೆಸಿಕೊಂಡಾಗಲೆಲ್ಲ ಕಣ್ಣಮುಂದೆ ಬರುವ ಚಿತ್ರಗಳ್ಯಾವುದರಲ್ಲೂ ಅವರು ಒಂದು ಘಳಿಗೆ ಆರಾಮವಾಗಿ ಕುಳಿತಿದ್ದಂಥ ಚಿತ್ರವೇ ಇಲ್ಲ.



ನೆನಪಿನ ತುಂಬಾ ತುಂಬಿರುವುದು-ಬಗ್ಗಿ ಕೊಟ್ಟಿಗೆ ಗುಡಿಸಿ, ಸೆಗಣಿ ತೆಗೆಯುತ್ತಿರುವ ಚಿತ್ರ; ಮನೆ ಗುಡಿಸಿ, ಮನೆ ಮುಂದೆ ಸಾರಿಸಿ ರಂಗೋಲಿ ಇಡುತ್ತಿರುವ ಚಿತ್ರ; ತಲೆಯ ಮೇಲೆ ಕೊಡ ಹೊತ್ತು ಊರ ಮುಂದಿನ ಕುಂಟೆಯಿಂದ ನೀರು ತರುತ್ತಿರುವ ಚಿತ್ರ; ಮಡಿ ಉಟ್ಟು ಅಡಿಗೆ ಮನೆಯಲ್ಲಿ ಅತ್ತೆಯ ಜೊತೆ ಹಸಿ ಕಟ್ಟಿಗೆಯ ಹೊಗೆ ಜೊತೆ ಹೋರಾಡುತ್ತಾ ಅಡಿಗೆ ಮಾಡುತ್ತಿರುವ ಚಿತ್ರ; ಊಟಗಳಾದ ತಕ್ಷಣ ಗೋಮಯ ಮಾಡಿ ಪಾತ್ರೆ ಪಗಡೆ ತೊಳೆಯುತ್ತಿರುವ ಚಿತ್ರ; ಮದ್ಯಾಹ್ನದ ಬಿರುಬಿಸಿಲಿನಲ್ಲಿ ಮಂಕರಿಯ ತುಂಬಾ ಒಗೆಯುವ ಬಟ್ಟೆಗಳನ್ನು ಹೇರಿಕೊಂಡು ಬಾವಿಗೆ ಹೋಗುತ್ತಿರುವ ಚಿತ್ರ; ಬಟ್ಟೆ ಒಗೆದು ಮನೆಗೆ ಬಂದು, ಮದ್ಯಾಹ್ನದ ಕಾಫಿಗೆ ನೀರಿಟ್ಟು ಒಗೆದ ಬಟ್ಟೆ ಒಣ ಹಾಕುವ ಚಿತ್ರ; ಒಂದು ತೊಟ್ಟು ಕಾಫಿ ಕುಡಿದು ಮಾರನೇ ದಿನದ ಸ್ನಾನಕ್ಕೆ ಹಂಡೆ ತುಂಬಿಸಲು ಕೊಡ ಹೊತ್ತು ಕುಂಟೆಯ ಕಡೆ ಹೊರಟ ಚಿತ್ರ; ಊರ ಹತ್ತಿರವೇ ಇದ್ದ ಹೊಲಕ್ಕೆ ಹೋಗಿ ಹುಲ್ಲು ಕೊಯ್ಯುತ್ತಿರುವ ಚಿತ್ರ; ಹಸು ಕರುಗಳಿಗೆ ಹುಲ್ಲೋ ಕಲಗಚ್ಚೋ ಇಡುತ್ತಿರುವ ಚಿತ್ರ; ಸಂಜೆ ಮತ್ತೆ ಮನೆ ಗುಡಿಸಿ ತುಳಸಿ ಬೃಂದಾವನದ ಮುಂದೆ ದೀಪ ಹಚ್ಚುತ್ತಿರುವ ಚಿತ್ರ; ರಾತ್ರಿ ಊಟಕ್ಕೆ ಹಿತ್ತಿಲಲ್ಲಿದ್ದ ಮೈಲಿಗೆ ಒಲೆಯಲ್ಲಿ ಮತ್ತೆ ಅಡಿಗೆ ಮಾಡುವ ಚಿತ್ರ; ಮಲಗುವ ಮುಂಚೆ ಮಡಿ ಅಡಿಗೆ ಮನೆಯ ಒಲೆಗಳನ್ನು ಸಗಣಿ ಸಾರಿಸುವ ಚಿತ್ರ.

ನಮ್ಮ ಊರು ಬಿಟ್ಟು, ಅಪ್ಪನಿಗೆ ವರ್ಗಾವಣೆಯಾದ ಸ್ಥಳಗಳಲ್ಲಿ ಸಂಸಾರ ನಡೆಸುತ್ತಿದ್ದಾಗ ಹೊಲ ಗದ್ದೆಗಳ, ದನಕರುಗಳ ಕೆಲಸ ಇಲ್ಲವಾಗಿದ್ದರೂ, ಮನೆತುಂಬ ಮಕ್ಕಳಿದ್ದ ಮನೆಯಲ್ಲಿ ಕೆಲಸಕ್ಕೇನೂ ಅಮ್ಮನಿಗೆ ಕೊರತೆಯಿರಲಿಲ್ಲ. ಕುಂಟೆಯಿಂದ ನೀರು ಹೊರುವ ಬದಲು ಬಾವಿಯಿಂದ ಸೇದುವುದಾಯ್ತಷ್ಟೆ.

ಅಪ್ಪ ಅಂತರ್ಮುಖಿ, ಯಾರನ್ನೂ ಏನನ್ನೂ ಕೇಳಲಾರದವರು. ಮುಂದೆ ನುಗ್ಗಿ ಕೆಲಸ ಸಾಧಿಸುವ ಸ್ವಭಾವದವರಲ್ಲ. ತುಂಬಾ ಕಡಿಮೆ ಮಾತು, ಅಥವಾ ಇಲ್ಲವೇ ಇಲ್ಲ ಎನ್ನಬೇಕು. ತಮ್ಮಷ್ಟಕ್ಕೆ ತಾವಿರುವ, ಬೇರೇನನ್ನೂ ಹಚ್ಚಿಕೊಳ್ಳದ ನಿರ್ಲಿಪ್ತತೆ. ಹೀಗಾಗಿ ಮಕ್ಕಳನ್ನು ವಹಿಸಿಕೊಂಡು ಜಗಳವಾಡುವುದರಿಂದ ಹಿಡಿದು, ದಿನಸಿ ಅಂಗಡಿಯಲ್ಲಿ ಉದರಿ ವ್ಯವಸ್ಥೆ ಮಾಡುವ, ಇನ್ನೆಲ್ಲೋ ಸೀಮೆಎಣ್ಣೆ ಹವಣಿಸುವ ಮ್ಯಾನೇಜ್ಮೆಂಟ್ ಕೆಲಸಗಳೂ ಅಮ್ಮನ ಜವಾಬ್ದಾರಿ ಆಗಿಹೋಯ್ತು. ಪ್ರೈಮರಿಯಿಂದ ಕಾಲೇಜಿನವರೆಗೂ ಓದುತ್ತಿದ್ದ ಮಕ್ಕಳು ಪುಡಿಕೆಲಸಕ್ಕಾಗುತ್ತಿದ್ದರೆ ಹೊರತು ಸಂಸಾರವನ್ನೆಲ್ಲಿ ಸಂಭಾಳಿಸಾರು?

ಮೈಸೂರಿಗೆ ಬಂದು ನೆಲಸಿದ ಮೇಲೆಯೂ, ಬೆಳಿಗ್ಗೆ ೫ರಿಂದ ೧೧ರವರೆಗೆ ಮತ್ತೆ ಸಂಜೆ ೪ರಿಂದ ರಾತ್ರಿ ೯ರವರೆಗೆ ಪೀಕ್ ಪೀರಿಯಡ್ ಒತ್ತಡದಲ್ಲಿ ಕೆಲಸ ಮಾಡುತ್ತಾ ಅಮ್ಮ ಹೈರಾಣಾಗಿರುತ್ತಿದ್ದಳು. ಒಂದೊಂದು ದಿನ ಅಡಿಗೆಯೋ, ತಿಂಡಿಯೋ ತಡವಾಯಿತೆಂದು ನಾವುಗಳು ಕೂಗಾಡುತ್ತಿದ್ದುದನ್ನು ನೆನೆಸಿಕೊಂಡು ಈಗಲೂ ಬೇಜಾರಾಗುತ್ತದೆ.

ನಾನು ಐದೋ, ಆರೋ ವರ್ಷದವನಿದ್ದಾಗಿನ ಘಟನೆ. ಮನೆಯಲ್ಲಿದ್ದಾಗಲೆಲ್ಲಾ ಏನಾದರೂ ತಿಂಡಿ ಕೊಡು ಎಂದು ಅಮ್ಮನನ್ನು ಪೀಡಿಸುವುದು ನಮ್ಮ ದಿನಚರಿಯಾಗಿತ್ತು. ಹೀಗೆ ಒಂದು ದಿನ ಅಮ್ಮ ಎಲ್ಲಿ ಹೋದರೆ ಅಲ್ಲಿಗೆ ಹಿಂಬಾಲಿಸಿ ಏನಾದರೂ ಕೊಡುವಂತೆ ಪೀಡಿಸುತ್ತಿದ್ದೆ. ಈ ಪೀಡನಾ ವಿದ್ಯೆಯಲ್ಲಿ ಪಳಗಿದ ನಾನು, ದೇನಾಸಿ ಮುಖ ಮತ್ತು ರಾಗವಾಗಿ ಅಳುವ ಅಸ್ತ್ರಗಳನ್ನು ಉಪಯೋಗಿಸುವ ಕಲೆಯಲ್ಲೂ ಪರಿಣಿತನಾಗಿದ್ದೆ. ಯಾವುದೋ ಒತ್ತಡಗಳು ಮತ್ತು ತನ್ನದೇ ರೇಜಿಗೆಗಳಲ್ಲಿ ಖಿನ್ನಳಾಗಿದ್ದ ಅಮ್ಮ ರೇಗಿ ಒಂದೇಟು ಕೊಟ್ಟಳು. ಅದು ತಪ್ಪಿ ನನ್ನ ಹೊಟ್ಟೆಗೆ ಬಿತ್ತು. ನೋವಿನ ಅನೇಕಪಟ್ಟು ನಟಿಸಿ ಅಳಲು ಶುರು ಮಾಡಿದೆ. ತಿನ್ನಲು ಏನಾದರೂ ಕೊಡು ಎಂದು ಕೇಳಿದ ಮಗುವಿನ ಹೊಟ್ಟೆಯ ಮೇಲೇ ಹೊಡೆದುಬಿಟ್ಟೆನಲ್ಲ ಎಂದು ತನ್ನನ್ನೇ ಶಪಿಸಿಕೊಂಡು ಅಳುತ್ತಿದ್ದ ಅಮ್ಮ, ನನ್ನ ಹೊಟ್ಟೆ ಸವರಿ ಸಮಾಧಾನ ಮಾಡಲು ಪ್ರಯತ್ನಿಸಿದಳು.

ಆ ದಿನಗಳಲ್ಲಿ ಅವರಿಗೆ ಅಪರೂಪಕ್ಕೆ ತಂದೆಯಿಂದ ಸಿಗುತ್ತಿದ್ದ ನಾಲ್ಕಾಣೆ, ಎಂಟಾಣೆಗಳಲ್ಲಿ ಅತ್ತೆಯ ಗೃಧ್ರದೃಷ್ಟಿ ತಪ್ಪಿಸಿ ನಮಗೆ ಕಳ್ಳೆಪುರಿ, ಸೀಬೆಹಣ್ಣುಗಳನ್ನು ಕೊಡಿಸಿ ಬರಿಗೈಯಾಗಿಬಿಡುತ್ತಿದ್ದಳು. ಬೇಸಿಗೆ ರಜಕ್ಕೆ ನಮ್ಮನ್ನೆಲ್ಲಾ ಕಟ್ಟಿಕೊಂಡು, ಅವರಮ್ಮನ ಜೊತೆ ಮಾಡಿಕೊಂಡು, ಏಳೆಂಟು ಮೈಲಿ ಬಸ್ ಪ್ರಯಾಣ ಮಾಡಿ, ಮತ್ತೆ ಐದು ಮೈಲಿ ನಡೆದು ಅವರ ಎರಡನೇ ಅಣ್ಣ, ನಮ್ಮ ಸೋದರಮಾವನ ಮನೆಗೆ ಹೋಗುತ್ತಿದ್ದಳು. ನಮ್ಮ ಸೋತ ಮುಖಗಳು ಮತ್ತು ಹಸಿದ ಹೊಟ್ಟೆಗಳ ವಿನಃ ಯಾವ ಕೊಡುಗೆಗಳೂ ನಮ್ಮ ಜೊತೆ ಇರುತ್ತಿರಲಿಲ್ಲ. ಅಲ್ಲೂ ಅಮ್ಮನಿಗೆ ಅವವೇ ಕೆಲಸಗಳಿರುತ್ತಿದ್ದರೂ, ನಮಗೆ ಖಾರದ ನೆಲಗಡಲೆ ಬೀಜ, ತೋಟದಲ್ಲಿ ಬಿಟ್ಟ ಟೊಮೇಟೊ ಹಣ್ಣು, ಕಬ್ಬು ಮತ್ತು ಗಾಣದ ಬಿಸಿಬೆಲ್ಲ ಯಥೇಚ್ಛವಾಗಿ ಸಿಗುತ್ತಿದ್ದವು. **(ಮುಂದಿನ ಪುಟಕ್ಕೆ. . . . .)**


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

# ಅಮ್ಮ ನಿನಗಾಗಿ. . . .



**ಅಮ್ಮ ..... (ಮುಂದುವರೆದುದು)**

ಮಕ್ಕಳಿಗಾಗಿ, ಮನೆಗಾಗಿ ಸದಾ ಕೆಲಸಮಾಡುತ್ತಾ, ಅವರ ರಕ್ಷಣೆಗಾಗಿ ಆಗಾಗ ರೇಗಾಡುತ್ತಾ, ಮಕ್ಕಳಿಗೆ ಎಲ್ಲರಂತೆ ಬಟ್ಟೆಬರೆ ಕೊಡಿಸಲು ಶಕ್ತಿಯಿಲ್ಲದ್ದಕ್ಕೆ ಕಣ್ಣೀರಿಡುತ್ತಾ; ಮಕ್ಕಳ ಓದು, ಮದುವೆ, ಬಾಣಂತನ ಎಂದು ಪ್ರತಿ ಕ್ಷಣವೂ ತಾರಾಡುತ್ತಾ ಬಾಳು ಸವೆಸಿದ; ಈಗಲೂ ಸಹ ಹಬ್ಬ ಹರಿದಿನಗಳಲ್ಲಿ ಅವನಿಗೆ ಬೇಳೆ ಹೋಳಿಗೆ ಇಷ್ಟ, ಇವಳಿಗೆ ಹಾಗಲಕಾಯಿ ಗೊಜ್ಜು ಇಷ್ಟ ಎಂದು ನೆನಪಿಸಿಕೊಂಡು ತನ್ನ ಕೈಲಾಗದಿದ್ದರೂ ಮಾಡಿ ಬಡಿಸುವ, ಅದರಿಂದ ಸಂತೋಷ ಪಡುವ ಅಮ್ಮನನ್ನು 'ಸಹನಾಮಯಿ', 'ಪ್ರೇಮಮಯಿ', 'ತಾಯಿಯೇ ದೇವರು' ಇಂತಹ ಮೆಲೋಡ್ರಾಮಾಟಿಕ್ ಪದಗಳಲ್ಲಿ ವಿವರಿಸುವುದೇ ಮೋಸ ಎಂದು ನನಗನ್ನಿಸುತ್ತದೆ.

ಐದು ದಶಕಗಳಿಗೂ ಹೆಚ್ಚು ಕಾಲದಿಂದ ನನ್ನ ಜೀವನದ ಪ್ರತಿ ವಿವರದಲ್ಲೂ ಭಾಗಿಯಾಗಿರುವ, ಪರೋಕ್ಷವಾಗಿಯೋ ಅಪರೋಕ್ಷವಾಗಿಯೋ ಪ್ರಭಾವ ಬೀರಿರುವ ಅಮ್ಮನ ಬಗ್ಗೆ ಏನು ಬರೆಯಲಿ ಏನು ಬಿಡಲಿ? ಮೂವತ್ತು ವರ್ಷದಿಂದ ಉದರ ನಿಮಿತ್ತ ಮನೆಯಿಂದ ಆಚೆಯಿರುವ ನನಗೆ, ಇಂಡಿಯಾದಲ್ಲಿರುವಷ್ಟು ವರ್ಷಗಳೂ ಅಮ್ಮ ಹತ್ತು ದಿನಗಳ ವಾರ್ಷಿಕ ರಜಾದ ರಿಯಾಲಿಟಿ, ಇಲ್ಲವೇ ಆಗೊಮ್ಮೆ ಈಗೊಮ್ಮೆ ಬರೆಯುವ ಪತ್ರಗಳ ಅಕ್ಷರಗಳಾಗಿದ್ದಳು. ಖಂಡಾಂತರ ಬಂದ ಈ ಹದಿನಾರು ವರ್ಷಗಳಲ್ಲಿ ಅಮ್ಮ ಇರುವುದು ಶನಿವಾರದ ಫೋನ್ ಕಾಲ್ ನ ದನಿಯಾಗಿ ಮಾತ್ರ. ಆದರೆ ಆ ದನಿಯೇ ಹಿಂದಿನ ಎಲ್ಲಾ ದಿನಗಳನ್ನೂ ನೆನಪಿಸಿ, ಪ್ರೀತಿ, ಭದ್ರತೆ ಮತ್ತು ವಿಶ್ವಾಸಗಳನ್ನು ಮನಸ್ಸಿನಲ್ಲಿ ತುಂಬುತ್ತಿರುತ್ತದೆ. ಆ ದನಿಯ ಭಾಗ್ಯ ಎಂದೆಂದಿಗೂ ನನಗಿರಲಿ ಎಂಬುದೇ ಭಗವಂತನಲ್ಲಿ ನನ್ನ ಪ್ರಾರ್ಥನೆ. ■



ವಿ.ಪ್ರಸನ್ನ ಕುಮಾರ್

## "ಅಮ್ಮ"ಳ ದಿನ ....ಪ್ರತಿದಿನ !!!

ನವಮಾಸ ಧರಿಸಿ ನೋವನು ಅನುಭವಿಸಿ
ಹಾಲನು ಉಣಿಸಿ ಸಕಲವನೂ ಸಿದ್ಧಪಡಿಸಿ
ಜಗಕೆ ಕೊಡುವೆ ನೀನು ನವಜಾತ ಶಿಶುವ
ಧೀರ್ಘದಂಡ ನಮನ ನಿನಗೆ ಅಮ್ಮ, ಅಬ್ಬೆ, ಅವ್ವ

ನೀನು ಪಟ್ಟ ನೋವು ತಿಳಿವುದೇನು ಗಂಡುಮಕ್ಕಳಿಗೆ
ಕೇಳಿ ನೋಡಿ ಓದಿ ಮಾತ್ರ ಗೊತ್ತೇನೆಂಬುದು ಹೆರಿಗೆ
ಯಾವ ನೋವು ದೊಡ್ಡದಿಲ್ಲ ನಮ್ಮ ಬೆಳೆಸುವಾಗ ನಿನಗೆ
ಅದೆಷ್ಟು ನೋವು ನಿನಗೆ ವೃದ್ಧಾಶ್ರಮ ಸೇರುವ ಘಳಿಗೆ

ಅಮ್ಮನ ದಿನ ಬರುವರೆಲ್ಲ ನಿನ್ನ ನೋಡಲು
ನಿನ್ನ ಜೊತೆ ನಕ್ಕು ನಲಿದು ಊಟ ಮಾಡಲು !!!!
ನಮ್ಮ ಹೊತ್ತು ಹೆತ್ತ ನಿನ್ನ ಋಣವ ತೀರಿಸಲು
ಹಲವು ಜನುಮ ಹೊತ್ತಿ ಬಂದರೂ ಸಾಧ್ಯವಿಲ್ಲವು

ಮಕ್ಕಳೆಲ್ಲ ಬಯಸುವುದೆ ತಾಯ ಮಮತೆಯು
ದೊರಕಲೀ ಪ್ರೀತಿ ಎಲ್ಲರಿಗೆ ನೂರು ವರ್ಷವು
ನಿತ್ಯ ಬರುವ ನಿನ್ನ ನೆನಪೆ ತರುವುದು ಹರ್ಷವು
ನಿನ್ನ ಹರಕೆಯಿಂದ ಸಿಗಲಿ ಸಕಲರಿಗೂ "ಸಂತೃಪ್ತಿ" ಯು

* ಬೃಂದಾವನ ಕನ್ನಡ ಕೂಟದಲ್ಲಿರುವ ಎಲ್ಲ ತಾಯಂದರಿಗೂ ಹಾಗು ಕೂಟದ ಎಲ್ಲ ಸದಸ್ಯರ ತಾಯಂದರಿಗೂ ಗೌರವಾನ್ವಿತ ಸಮರ್ಪಣೆಯೊಂದಿಗೆ ಈ ಮೇಲಿನ ನನ್ನ ಪದ್ಯ



ಕಾವ್ಯಾ ಕಡಮೆ ನಾಗರಕಟ್ಟೆ

## ಅಮ್ಮ

ನನ್ನಾಳದ ಜ್ವರದ ಕಿಡಿ
ನಿನ್ನ ಮಡಿಲ ನೆನಪಿಸುತ್ತದೆ

ನಿನ್ನ ಮುಂದೆ ಅಳಲೂ ಆಗದಷ್ಟು
ಹರೆಯ ಉರುಳಿ
ಹಾಡುವ ಜೀವ ತೊಯ್ಯುವ
ಜಿನುಗುವ ಚಪ್ಪರಿಸುವ ಕಾಲ
ಕಳೆದಂತೆ ತೇಯುವ ಹೂವು-

ಅರಳಲು ಇನ್ನು ನಿನ್ನ ಕಾಯದು

ಜೀಕುವ ದೇಹಕೆ ತಂಪೆರೆಯಲು
ತೇಯುತ್ತ
ಜೀವಂತ ಮೃದುವಾಗಲು ನಿನ್ನಂತೆ

ಒಮ್ಮೆ ತಿರುಳು ಕಳಚಿ ಹಾಯುವ
ಬೆಂಕಿಗೆ ನಿನ್ನದೇ ನೆರಳು

ತಿಟಃತ್ತಿ ತಿರುಗಿ ನೋಡಲು
ಉರುಳುರುಳಿ ಸರಿದು ಬಂದದ್ದು
ಮುಂದೆಯೋ ಹಿಂದೆಯೋ ತಿಳಿಯದೇ
ಜೀವ ಸವೆದಾಗ ದಾಟಿ ಹಬ್ಬ ಬರುವ
ತಿರುಗಿ ಹಾಡಾಗುವ ನಿನ್ನ
ಒಡಲು

ಆಳ ನಿನ್ನ ಹೆಸರು
ತಳ ಹಿಡಿದ ಪಾತ್ರೆ
ನಿನ್ನ ನನ್ನ ಸೇರಿಸುವುದ
ತಣ್ಣಗೆ ಕಾಯ್ವ ಜೀಕುವ ಲೋಕ

ಇದೀಗ ನನ್ನೊಳಗೆ.

'ಅಮ್ಮ' ಛಾಯಾಚಿತ್ರ ಕೃಪೆ - ಶಿವಶಂಕರ ಬಣಗಾರ (ಹೊಸಪೇಟೆ , ಕರ್ನಾಟಕ)


Copyright © KCO – Brindavana


# ಬೃಂದಾವನ ವಾಣಿ



## ಪುಟಾಣಿ ಪ್ರಪಂಚ

### ಕನ್ನಡ ಕಲಿಕೆ


ಬೃಂದಾವನ ಕನ್ನಡ ಶಾಲೆಯ ಮಕ್ಕಳ ಬರವಣಿಗೆ.


ನಮಸ್ಕಾರ, ನನ್ನ ಹೆಸರು ಪ್ರಣವ್ ಕುಮಾರ್. ನಾನು ಬೃಂದಾವನ ಕನ್ನಡ ಶಾಲೆಯಲ್ಲಿ ಕನ್ನಡ ಕಲಿಯುತ್ತಾ ಇದ್ದೀನಿ. ನನ್ನ ಶಿಕ್ಷಕರು ತುಂಬಾ ಚೆನ್ನಾಗಿ ಕನ್ನಡ ಕಲಿಸುತ್ತಾರೆ. ನನಗೆ ಕನ್ನಡದಲ್ಲಿ ಮಾತಾಡುವುದಕ್ಕೆ, ಓದುವುದಕ್ಕೆ, ಮತ್ತು ಬರೆಯುವುದಕ್ಕೆ ತುಂಬಾ ಇಷ್ಟ ಇದೆ.


ಈ ದಿನ, ತುಂಬಾ ಮಕ್ಕಳಿಗೆ ಕನ್ನಡ ಗೊತ್ತಿಲ್ಲ. ಅದಕ್ಕೆ ಬೃಂದಾವನ ಕನ್ನಡ ಶಾಲೆ ಕನ್ನಡ ಕಲಿಸಬೇಕು.

ನಮ್ಮ ಮೊದಲ ಭಾಷೆ ಕನ್ನಡ, ಅದಕ್ಕೆ ನನಗೆ ಕನ್ನಡ ಕಲಿಯುವುದಕ್ಕೆ ತುಂಬಾ ಆಸೆ ಇದೆ.

ಪ್ರಣವ ಕಮಾರ್


ನಾವು ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯಿಂದ, ಬೃಂದಾವನ ವಸಂತೋತ್ಸವಕ್ಕೆ 'ವಸಂತ ಮಾಸ ಬಂದಾಗ' ಕಿರುನಾಟಕ ಮಾಡಿದೆವು. ನಾಟಕದಲ್ಲಿ ಕನ್ನಡದಲ್ಲಿ ಮಾತುಕತೆಯಿತ್ತು, ನಾವಾಡುವ ನುಡಿಯೇ ಕನ್ನಡನುಡಿ ಹಾಡು ಮತ್ತು ಎಲ್ಲೆಲ್ಲೂ ಹಬ್ಬ ಹಬ್ಬ ಡ್ಯಾನ್ಸ್ ಇತ್ತು. ನಾವೆಲ್ಲ 4 ವಾರ Practice ಮಾಡಿದ್ವಿ. ಮೊದಲಿಗೆ ನಾವೆಲ್ಲ ಕನ್ನಡ ಶಾಲೆಯಲ್ಲಿ ಕಲಿತೆವು. ಆಮೇಲೆ ಉಷಾ ಆಂಟಿ ಮತ್ತು ಪ್ರಸನ್ನ ಅಂಕಲ್ ಮನೇಲಿ Practice ಮಾಡಿದೆವು ಎಪ್ರಿಲ್ 8 ನೇ ತಾರೀಖು ಯುಗಾದಿ ಹಬ್ಬ ಇತ್ತು. ಅವತ್ತು Dress Rehearsal ಮಾಡಿ ಚೆನ್ನಾಗಿ ಕಲಿತೆವು. ವಸಂತೋತ್ಸವದ ದಿನ ಮೊದಲಿಗೆ ಸಂಕೇತ ಗೀತೆ ಕನ್ನಡದ ಕುಲದೇವಿ ಕಾಪಾಡು ಬಾ ತಾಯೆ' ಹಾಡಿದೆವು. ಆಮೇಲೆ ಈಸ್ಟ್ ವಿಂಡ್ಸರ್ ಶಾಲೆಯ 20 ಮಕ್ಕಳು ವಸಂತಮಾಸ ಬಂದಾಗ ಕಿರುನಾಟಕವನ್ನು ಮಾಡಿದೆವು. ಎಲ್ಲರಿಗೂ ತುಂಬಾ ಇಷ್ಟ ಆಯಿತು. ನಮಗೆಲ್ಲ ಸಂತೋಷ ಆಯಿತು. ನಮ್ಮ ಶಾಲೆಯ ಎಲ್ಲ ಟೀಚರ್ ಗಳಿಗೆ Thanks ಹೇಳ್ತೇವಿ.
ಅಭಿಜ್ಞ ಭಾರದ್ವಾಜ

ಅಭಿಜ್ಞ ಭಾರದ್ವಾಜ


ಬೃಂದಾವನ
ಕನ್ನಡ ಶಾಲೆ

ಎಲ್ಲರಿಗೂ ನಮಸ್ಕಾರ! ನನ್ನ ಹೆಸರು ಅನಘ ಪ್ರಸಾದ. ಕನ್ನಡ ಶಾಲೆಯಲ್ಲಿ ವಿದ್ಯಾರ್ಥಿ.

ಕನ್ನಡ ನಮ್ಮ ಮಾತೃ ಭಾಷೆ, ಆದ್ದರಿಂದ ಈ ಜೆನರೇಶನ್ ಮಕ್ಕಳೆಲ್ಲ ಕನ್ನಡ ಕಲಿಯುವುದು ಮುಖ್ಯವಾಗಿದೆ.

ನನಗೆ ಈಗ ಕನ್ನಡ ಬರೆಯುವುದು ಮತ್ತು ಓದಕ್ಕೆ ಸ್ವಲ್ಪ ಬರುವುದು. ಪ್ರತಿ ಶನಿವಾರ, ಕನ್ನಡ ಚೆನ್ನಾಗಿ ಕಲಿತಾಇದ್ದೀನಿ, ಗುರುಗಳೆಲ್ಲ ನಿಧಾನವಾಗಿ ಕನ್ನಡ ಕಲಿಸುತ್ತಾರೆ.

ಮುಂದೆ, ನಾನು ಚೆನ್ನಾಗಿ ಕನ್ನಡ ಕಲಿತುಬಿಟ್ಟು ಬೃಂದಾವನ ಪ್ರೆಸಿಡೆಂಟ್ ಆಗುತ್ತೇನೆ. ಕನ್ನಡ ಭಾಷೆಗೆ ಜೈ!

ಅನಘ ಪ್ರಸಾದ

### ಚಿತ್ತಾರ

ಚಿಣ್ಣರು ಬರೆದ ವರ್ಣಚಿತ್ರಗಳು








ವರ್ಣಚಿತ್ರಗಳು : ನಿಹಾರ್ ತಂತ್ರಿ ( 9 ವರ್ಷ )

### ಪ್ರತಿಭೆ




**ರಚನಾ ಆಚಾರ್ಯ** , ನ್ಯೂ ಜೆರ್ಸಿಯ , ಈಸ್ಟ್ ವಿಂಡ್ಸರಿನ ಪೆರಿ.ಎಲ್.ಡ್ರಿವ್ ಶಾಲೆಯ 3 ನೇ ತರಗತಿಯ ವಿದ್ಯಾರ್ಥಿನಿ. ಶಾಲಾ ಜಿಲ್ಲೆಯಲ್ಲಿ ನಡೆದ 'Earth Day Poster Contest 2016' ನಲ್ಲಿ ಪ್ರಥಮ ಬಹುಮಾನವನ್ನು ಗಳಿಸಿದ್ದಾಳೆ. ರಚನಾಳ ಪೋಸ್ಟರ್ ನ ವಿಷಯ " reduce, reuse, recycle, rebuy". ಸೋಡಾ ಕ್ಯಾನಿನ ಟ್ಯಾಬ್, ಬಾಟಲಿಯ ಮುಚ್ಚಳಗಳು ಮುಂತಾದ ಮರುಬಳಕೆಯ ವಸ್ತುಗಳನ್ನು ಉಪಯೋಗಿಸಿ ಇದನ್ನು ತಯಾರಿಸಿದ್ದಾಳೆ. ಪ್ರಶಸ್ತಿ ನೀಡಿ ಮಾತನಾಡಿದ ಈಸ್ಟ್ ವಿಂಡ್ಸರ್ ನಗರದ ಮೇಯರ್ ಜೆನಿಸ್ ಮಿರೊನೋವ್ , ರಚನಾಳ ಜಾಣ್ಮೆಯನ್ನು ಮೆಚ್ಚಿದರು. ಈಸ್ಟ್ ವಿಂಡ್ಸರ್ ನಗರದ ರಾಜೇಶ್ ಆಚಾರ್ಯ ಮತ್ತು ಅರ್ಚನಾ ಆಚಾರ್ಯ ಅವರ ಪುತ್ರಿ ರಚನಾ, 'ಬೃಂದಾವನ ಕನ್ನಡ ಕಲಿಸೋಣ' ದ ಶಾಖೆಯಾದ ಈಸ್ಟ್ ವಿಂಡ್ಸರ್ ಕನ್ನಡ ಶಾಲೆಯ ವಿದ್ಯಾರ್ಥಿನಿ. ಈ ಪ್ರತಿಭಾವಂತ ಕನ್ನಡದ ಬಾಲಕಿಗೆ 'ಬೃಂದಾವನ ವಾಣಿ'ಯ ಪರವಾಗಿ ಶುಭ ಹಾರೈಕೆಗಳು.




Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ






ಉಮಾ ಮೂರ್ತಿ

## ಸ್ತ್ರೀ - ಅಮೆರಿಕಾದಲ್ಲಿ ನಾ ಕಂಡಂತೆ

**ಭಾ**ರತದಲ್ಲಿದ್ದಾಗ ಪಾಶ್ಚಿಮಾತ್ಯ ದೇಶಗಳ ಜೀವನ ಶೈಲಿ ಬಗ್ಗೆ ಕೇಳುವುದು, ಕೂಡಲೇ ಒಂದು ಅಭಿಪ್ರಾಯಕ್ಕೆ ಬರುವುದನ್ನು ಗಮನಿಸಿದ್ದೆ. ಆದಕ್ಕೆ ನಾನೂ ಹೊರತಾಗಿರಲಿಲ್ಲ. "ವಿದೇಶೀಯರು ಹೆತ್ತವರನ್ನು ಪೋಷಿಸುವುದೇ ಇಲ್ಲವಂತೆ! ವೃದ್ಧಾಶ್ರಮಕ್ಕೆ ಬಿಡುವರಂತೆ! ಇಂದು ವಿವಾಹ , ನಾಳೆ ವಿಚ್ಛೇದನವಂತೆ!". ಹೀಗೆ ಸಂಬಂಧಗಳಿಗೆ ಅರ್ಥವಿಲ್ಲದ ಸ್ವೇಚ್ಛಾ ಜೀವನ. ಸಂಸ್ಕೃತಿ ಎಂದರೆ ಭಾರತದಲ್ಲಿ ಮಾತ್ರ ಎನ್ನುವ ಅಭಿಪ್ರಾಯದ ಸನಿಹಕ್ಕೆ ಬಂದಿದ್ದೆ.

ಕನಸು ಮನಸ್ಸಿನಲ್ಲೂ ಎಣಿಸದ ಅಮೇರಿಕಾ ಜೀವನ ಒದಗಿಬಂತು. ಮೊದಲೆಲ್ಲಾ ಅಪಾರ್ಟ್ ಮೆಂಟ್ ನಲ್ಲಿ ವಾಸಿಸುವಾಗ, ಇಲ್ಲಿಯ ಜೀವನ ನಾನು ಎಣಿಸಿದ್ದಕ್ಕಿಂತ ಅಷ್ಟೊಂದು ಭಿನ್ನವಾಗಿ ಕಾಣಲಿಲ್ಲ. ಒಬ್ಬೊಬ್ಬರೇ ಇರುವ ವೃದ್ಧರನ್ನು ನೋಡಿ ಅಮ್ಮ, ಅಪ್ಪನ ನೆನಪಾಗಿ ಕಣ್ಣು ಒದ್ದೆಯಾಗಿದ್ದಿದೆ. ಒಬ್ಬೊಬ್ಬರೇ ಇರುವುದು ಎಂದು ನಾನು ಭಾವಿಸಿದರೆ ಅವರು ಅದನ್ನು ಸ್ವಾತಂತ್ರ್ಯ ಎಂದುಕೊಳ್ಳುತ್ತಾರೆ. ಜೀವನವನ್ನು ಸರಳವಾಗಿ ನೋಡಿ ಅನುಭವಿಸುತ್ತಾರೆ, ಪರಸ್ಪರ ಹೊಂದಾಣಿಕೆಯ ವ್ಯವಸ್ಥೆಗಳು ಇಲ್ಲಿವೆ ಎನ್ನುವಷ್ಟು ವಾಸ್ತವದ ಪರಿಚಯ ನನಗಾಯ್ತು.

ನಂತರ ವೃತ್ತಿ ಜೀವನ ಪ್ರಾರಂಭ. ಅಮೇರಿಕಾ ಸಹೋದ್ಯೋಗಿಯೊಬ್ಬರು ಶುಕ್ರವಾರ ಬೆಳಗಿನ ಯಾವ ಮೀಟಿಂಗಗಳಿಗೂ ಬರುತ್ತಿರಲಿಲ್ಲ. ೧೦ ಘಂಟೆಯ ನಂತರ ಮೀಟಿಂಗ್ ಇಡುವಂತೆ ವಿನಂತಿಸಿದ್ದರು. ಕಾರಣ ಕೇಳಿದಾಗ, ಅವರು ಮತ್ತು ಅವರ ಪತಿ ಪ್ರತೀ ಶುಕ್ರವಾರ ಬೆಳಿಗ್ಗೆ ಅವರ ವೃದ್ಧ ಅತ್ತೆ, ಮಾವರನ್ನು ಬೆಳಗಿನ ತಿಂಡಿಗಾಗಿ ಪಕ್ಕದಲ್ಲಿರುವ ಡೈನರ್ ಗೆ ಕರೆದುಕೊಂಡು ಹೋಗುವ ಪರಿಪಾಠವಿದೆಯೆಂದೂ, ಇಡೀ ವಾರದ ಆಗು ಹೋಗುಗಳ ಸಂಭಾಷಣೆಯ ಸಮಯವೆಂದು ತಿಳಿಸಿದಾಗ ಅವರ ಬಗ್ಗೆ ತುಂಬಾ ಗೌರವ ಮೂಡಿ ಬಂತು.

ಕೆಲಸ ಮಾಡುವ ವಿಭಾಗ ಮಾನವ ಸಂಪನ್ಮೂಲ. ಹೆಚ್ಚಿನವರು ಮಹಿಳೆಯರು. ಕಷ್ಟ-ಸುಖಗಳನ್ನು ಸುಲಭವಾಗಿ ಹಂಚಿಕೊಳ್ಳಲು ನಮಗಲ್ಲದೇ ಇನ್ನಾರಿಗೆ ಸಾಧ್ಯ?

ಒಮ್ಮೆ ಹೀಗೆಯೇ ಮಾತಾಡುವಾಗ, ನಿವೃತ್ತಿಯ ಅಂಚಿನಲ್ಲಿರುವ ಕೆರೋಲಿನಾಳ ಪರಿಚಯವಾಯ್ತು. ಅವರದು ತುಂಬಾ ಗಂಭೀರ ಸ್ವಭಾವ. ಕಡ್ಡಿ ತುಂಡು ಮಾಡಿದಂತೆ ಮಾತು. ಎಷ್ಟೋ ಸಲ ಅವರು ಉದ್ಯೋಗಿಗಳಿಗೆ ನಿವೃತ್ತಿಯ ಲೆಕ್ಕಾಚಾರಗಳ ವಿವರಣೆ ನೀಡಿ ಫೋನ್ ಕುಕ್ಕುವಾಗ, ಫೋನ್ ತುಂಡಾಯಿತೇನೋ ಎಂದು ನಾವು ಆಡಿಕೊಂಡು ನಕ್ಕಿದ್ದುಂಟು. ಕೆರೋಲಿನಾ, ತನ್ನದೇ ಆದ ಪರಿಧಿಯನ್ನು ಸೃಷ್ಟಿಸಿಕೊಂಡವರು. ಆಗೊಮ್ಮೆ, ಈಗೊಮ್ಮೆ ಅದರಿಂದ ಹೊರಬಂದು ಮಾತಿನ ಬಾಣ ಎಸೆಯುತ್ತಿದ್ದರು. ಕೊನೆಗೊಮ್ಮೆ, "ನಿವೃತ್ತಿ ವೇತನ" ನಿಭಾಯಿಸುವ ಬಗೆಯನ್ನು ಅವರಿಂದ ಕಲಿಯುವ ಸಂದರ್ಭ ಒದಗಿಬಂತು.

ಯಾವುದೇ ಭಾರತೀಯ ವಿದ್ಯಾರ್ಥಿಯಂತೆ ಭಯ, ಭಕ್ತಿಯಿಂದ ಗುರು ಕೆರೋಲಿನಾ ಜೊತೆ ಕುಳಿತಾಗ ಬೇರೊಂದೇ ವ್ಯಕ್ತಿಯನ್ನು ನೋಡಿದ ಅನುಭವ.

ಕೆರೋಲಿನಾ ಮದುವೆಯಾಗಿದ್ದು ಮೂವತ್ತರ ನಂತರ. ಅವರ ಪತಿಗೆ ಇದು ಎರಡನೆ ಮದುವೆ. ಆತ ವಿಜ್ಞಾನಿ. ಮೊದಲ ಪತ್ನಿಗೆ ಇಬ್ಬರು ಮಕ್ಕಳು. ಕೆರೋಲಿನಾಗೆ ಒಬ್ಬಳೇ ಮಗಳು. ಮೆಚ್ಚಿನ ಪತಿ, ಮುದ್ದಾದ ಮಗಳು, ಉತ್ತಮ ಕೆಲಸ! ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಎನ್ನುತ್ತಿರುವಾಗಲೇ ಪತಿಯ ದುರ್ಮರಣ! ಕೆರೊಲಿನಾಗೆ ಸಿಡಿಲು ಬಡಿದಂಥ ಅನುಭವ! ಪರಿಸ್ಥಿತಿ ಸಹಜತೆಗೆ ಮರಳಿದಾಗ ತಿಳಿಯಿತು ಜೀವ ವಿಮಾ ಹಣ ಕೆರೊಲಿನಾರ ಹೆಸರಿನಲ್ಲಿದೆ ಎಂದೂ, ಮೊದಲ ಪತ್ನಿಗೆ ಯಾವೊಂದೂ ಪ್ರಯೋಜನ ದೊರೆತಿಲ್ಲವೆಂದು ತಿಳಿಯಿತು.

ಕೆರೋಲಿನಾರ ಮಾತ್ರ ಹೃದಯ, ಇನ್ನೊಂದು ಮಾತೃ ಹೃದಯಕ್ಕೆ ಸ್ಪಂದಿಸಿ, ಬಂದ ವಿಮಾ ಹಣದಲ್ಲಿದ ಪಾಲನ್ನು ಮೊದಲ ಪತ್ನಿಗೆ ನೀಡಿದರು. ಈ ವಿಚಾರ ನನಗೆ ತಿಳಿದಿದ್ದು ನಮ್ಮ ವಿಭಾಗದ ಮುಖ್ಯಸ್ಥರಿಂದ.

ನಂತರದ ದಿನಗಳಲ್ಲಿ ಜೀವನದ ಗತಿ ಬದಲಾದಾಗ ಮಗಳ ವಿದ್ಯಾಭ್ಯಾಸ, ತಮ್ಮ ತಾಯಿಯ ಪೋಷಣೆಯ ಜವಾಬ್ದಾರಿ ಹೊತ್ತು ನಿವೃತ್ತಿಯ ನಂತರವೂ ಉದ್ಯೋಗ ಮಾಡುತ್ತಿರುವ ಕೆರೊಲಿನಾ, ಜಿ. ಎಸ್. ಶಿವರುದ್ರಪ್ಪನವರ "ಸ್ತ್ರೀ ಎಂದರೆ ಅಷ್ಟೇ ಸಾಕೇ?" ಕವನವನ್ನು ನೆನಪಿಸುತ್ತಾರೆ.

ಜೀವನದ ಒಂದೊಂದೇ ಮೆಟ್ಟಿಲೇರಿದಂತೆ ವಾಸ್ತವತೆಯ ಅರಿವಾಗುತ್ತದೆ. ಭಾರತ, ಅಮೇರಿಕಾ ಅಥವಾ ಜಗತ್ತಿನ ಯಾವುದೇ ಭಾಗವಿರಲಿ, ಹೃದಯದ ಸ್ಪಂದನ ಒಂದೇ. ಸಂಬಂಧಗಳು, ಪ್ರೇಮಾನುರಾಗಗಳು ಒಂದೇ. ಉತ್ತಮ ಸಂಸ್ಕೃತಿ ಎನ್ನುವುದು ಯಾವುದೇ ಒಂದು ಭೂ ಭಾಗಕ್ಕೆ ಸೀಮಿತವಲ್ಲ. ಅದು ಮನುಕುಲದ ಸಂಪತ್ತು. ■



### ಸವಿರುಚಿ

## ಚಮಕ್ ಚಕ್ಕುಲಿ



ಸುಜಯ ರಾವ್

<u>ಬೇಕಾಗುವ ಸಾಮಗ್ರಿಗಳು:</u>

| | |
|---|---|
| ಎಣ್ಣೆ | - ಅರ್ಧ ಲೀಟರ್ |
| ಉದ್ದಿನ ಬೇಳೆ | - 1 ಬಟ್ಟಲು |
| ಅಕ್ಕಿ ಹಿಟ್ಟು | - 3 ಬಟ್ಟಲು |
| ಜೀರಿಗೆ | - 1ಚಮಚ |
| ಬಿಳಿ ಎಳ್ಳು | - 1ಚಮಚ |
| ಉಪ್ಪು | ( ರುಚಿಗೆ ತಕ್ಕಷ್ಟು) |
| ಬೆಣ್ಣೆ | - 4-5 ಚಮಚ |
| ಇಂಗು | - 1/4 ಚಮಚ |

ವಿಧಾನ:

1 ಬಟ್ಟಲು ಉದ್ದಿನ ಬೇಳೆಯನ್ನು , 1 ಬಟ್ಟಲು ನೀರಿನೊಂದಿಗೆ ಪ್ರೆಷರ್ ಕುಕ್ಕರ್‌ನಲ್ಲಿ ಚೆನ್ನಾಗಿ ಮೆತ್ತಗಾಗುವವರೆಗೆ ಬೇಯಿಸಿ.
( 2ರಿಂದ 3 ವಿಷಲ್ ಬರುವವರೆಗೆ )
ಮತ್ತೊಂದು ಪಾತ್ರೆಯಲ್ಲಿ ಅಕ್ಕಿ ಹಿಟ್ಟು ,ಜೀರಿಗೆ ,ಬೆಣ್ಣೆ ,ಉಪ್ಪು ,ಇಂಗು ಎಲ್ಲವನ್ನೂ ಹಾಕಿ ಕಲಸಿಡಿ.
ನಂತರ ಬೇಯಿಸಿದ ಉದ್ದಿನ ಬೇಳೆಯನ್ನು(ತಣ್ಣಗಾದ ಮೇಲೆ) , ಮೇಲಿನ ಮಿಶ್ರಣಕ್ಕೆ ಬೆರಸಿ ,ಚೆನ್ನಾಗಿ ನಾದಬೇಕು. ಆಮೇಲೆ ಆ ಹಿಟ್ಟನ್ನು ಚಕ್ಕುಲಿ ಒರಳಿಗೆ ಹಾಕಿ ,ಒತ್ತಿ ,ಎಣ್ಣೆಯಲ್ಲಿ ಕೆಂಪು ಬಣ್ಣ ಬರುವವರೆಗೆ ಕರಿಯಬೇಕು.





(ಚಿತ್ರ ಕೃಪೆ : ಅಂತರ್ಜಾಲ)


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ವನಿತೆಯ ಮನದಾಳ

ಸರಿತಾ ನವಲಿ



## ಅಮ್ಮನಾಗಿ ಅಮ್ಮನನ್ನು ಅರಿತಾಗ........

**'ಅಭಯ' , 'ಆತ್ಮವಿಶ್ವಾಸ' , ಮಮತೆಯ ಕಡಲು ಎನ್ನಿಸಿಕೊಳ್ಳುವ ಆ ಅಮ್ಮ, ದುರ್ಬಲಳೂ ಅಲ್ಲ , ಅಸಹಾಯಕಳೂ ಅಲ್ಲ .**

"**ತಾ**ಯೊಲವೆ ತಾಯೊಲವು ಈ ಲೋಕದೊಳಗೆ, ಕಡಲಿಂಗೆ ಕಡಲಲ್ಲದುಂಟೆ ಹೋಲಿಕೆಗೆ !" – ಜಿ.ಎಸ್.ಶಿವರುದ್ರಪ್ಪ ಅವರ ಕವನದ ಸಾಲುಗಳು ಹೇಳುವಂತೆ, ತಾಯಿ ತೋರುವ ಒಲವಿಗೆ ಹೋಲಿಕೆಯುಂಟೆ ?

ತಾಯಿ ಎಂದೊಡನೆ ಮನದಲ್ಲಿ ಮೂಡುವ ಭಾವನೆ , ಮಕ್ಕಳಿಗೆ ಮಮತೆ ತೋರುವ , ಧೈರ್ಯ ತುಂಬುವ , ಸಹನೆ ತುಂಬಿರುವ ತ್ಯಾಗಮಯಿ ಜೀವ. "ಜೀನಾ ಉಸಕಾ ಜೀನಾ ಹೈ , ಜೋ ಔರೋಂಕೊ ಜೀವನ್ ದೇತಾ ಹೈ" , ಒಂದು ಹಿಂದಿ ಚಿತ್ರದ ಗೀತೆಯ ಅರ್ಥಪೂರ್ಣ ಪದಗಳಿವು. ಇನ್ನೊಂದು ಜೀವಕ್ಕೆ 'ಜೀವನ' ಕೊಡುವುದೇ ಬದುಕಿನ ಸಾರ್ಥಕತೆ ಎಂದು ಹೇಳುವ ಗೀತೆ. ಈ ಗೀತೆಯನ್ನು ಕೇಳಿದಾಗಲೆಲ್ಲ ,ತಾಯಿಗೆಂದೇ ಬರೆದಂತಿದೆಯಲ್ಲಎಂದು ಅನ್ನಿಸುವುದಿಲ್ಲವೇ?

ನಿಜ ,ಈ ಗೀತೆಯನ್ನೊಳಗೊಂಡ ಚಲನಚಿತ್ರವೂ ಸಹ , ಮಕ್ಕಳ ಒಳಿತಿಗಾಗಿ ಬದುಕಿನ ಸಂಕಟಗಳನ್ನು ಎದುರಿಸುವ ತಾಯಿಯ ಕಥೆಯನ್ನೇ ಆಧಾರಿಸಿದೆ. ತಾಯಿಯ ಬಗ್ಗೆ ಬರೆಯಬೇಕೆಂದುಕೊಂಡಾಗ ಅಂತರ್ಜಾಲದಲ್ಲಿ ಸಿಕ್ಕಿತ್ತೊಂದು ಸುಂದರ ಸಂದೇಶ !! ಜನ್ಮತಾಳಲಿರುವ ಮಗು ಮತ್ತು ಸೃಷ್ಟಿಕರ್ತನ ನಡುವಿನ ಸಂಭಾಷಣೆಯ ಕುರಿತಾದ ಸಂದೇಶದಲ್ಲಿ , ಮಗುವಿನಲ್ಲಿ ಮೂಡುವ ಪ್ರಶ್ನೆಗಳಿಗೆಲ್ಲ ಉತ್ತರವಾಗಿ 'ಅಮ್ಮ' ಎಂಬ' 'ದೇವತೆ'ಯ ಬಗ್ಗೆ ಹೇಳುತ್ತಾನೆ ಆ ಸೃಷ್ಟಿಕರ್ತ.

ಅಮ್ಮ ಎಂದರೆ , 'ಅಭಯ'! ಅಮ್ಮ ಎಂದರೆ 'ಆತ್ಮವಿಶ್ವಾಸ'!, ಅಮ್ಮ ಎಂದರೆ 'ಮಮತೆ'. . . .

ಅಮ್ಮನ ಮಮತೆಯಲ್ಲಿ ಬೆಳೆಯುವ ಮಗಳು ,ಆ ಮಮತೆಯ ಆಳವನ್ನು ಅರಿಯುವುದು ಸ್ವತಃ ಅಮ್ಮನಾದಾಗ ! ಮಾತೃತ್ವದ ಪ್ರತಿ ಮಜಲುಗಳನ್ನು ಏರಿದಾಗ ! ಕಂದನ ಆರೈಕೆಯಲ್ಲಿ ನಿದ್ದೆಗೆಟ್ಟಾಗ, ಹಟಹಿಡಿವ ಮಗುವನ್ನು ಸಂತೈಸುವಾಗ, ತನ್ನಮ್ಮನ ತಾಳ್ಮೆಯ ಅರಿವು , ಈ ಅಮ್ಮನಲ್ಲೂ ಮೂಡುತ್ತದಲ್ಲವೇ ? ಕತ್ತಲಿಗೋ, ಎತ್ತರಕ್ಕೋ , ಆತ್ಮವಿಶ್ವಾಸದ ಕೊರತೆಯಿಂದಲೋ ಮನದಲ್ಲಿ ಭಯವನ್ನು ಬೆಳೆಸಿಕೊಂಡು , ತನ್ನ ತಾಯಿಯನ್ನು ಆಸರಿಸುತ್ತಿದ್ದ ಮಗಳು, ಅಮ್ಮನಾದ ಆ ಕ್ಷಣದಿಂದ , ತನ್ನ ಕಂದನನ್ನು ಕಾಪಾಡಿಕೊಳ್ಳಲು ಮುಂದಾಗುವ ಧೈರ್ಯವಂತೆ ಆಗುತ್ತಾಳೆ. ತನ್ನಲ್ಲಿನ ಭಯಗಳನ್ನು ಮೆಟ್ಟಿ ನಿಲ್ಲುತ್ತಾಳೆ. ತನ್ನಲ್ಲಿ ಆತ್ಮವಿಶ್ವಾಸವನ್ನು ತುಂಬಿ, ಬೆಂಗಾವಲಾಗಿ ನಿಲ್ಲುತ್ತಿದ್ದ ಅಮ್ಮನನ್ನು ನೆನೆಯುತ್ತಾಳೆ. ಅಮ್ಮನ ಅತಿ ಕಾಳಜಿಗೆ ಕಿರಿಕಿರಿಗೊಳ್ಳುತ್ತಿದ್ದ ಮಗಳು, ತನ್ನ ಕಂದಮ್ಮಗಳಿಗೆ ಅದೇ ಕಾಳಜಿ ತೋರಿ, ಈ ನಿಟ್ಟಿನಲ್ಲಿ ತನ್ನಿಂದಾದ ತಪ್ಪನ್ನು ಅರಿಯುತ್ತಾಳೆ. ಮಕ್ಕಳ ಪಾಲನೆಗೆ ವೃತ್ತಿ ಜೀವನ ಬಿಟ್ಟುಕೊಟ್ಟ ಅಮ್ಮ, ತನ್ನ ಗೆಲುವಿನ ಸಾಮರ್ಥ್ಯವನ್ನು ಕಡೆಗಣಿಸಿ, ಮಕ್ಕಳ ಗೆಲುವಿನಲ್ಲಿ ಸಂತೋಷವನ್ನು ಕಂಡಿದ್ದ ಅಮ್ಮನ ಬಗ್ಗೆ ಹೆಚ್ಚಿನ ತಿಳಿವು ಮೂಡುವುದು ಅಂತಹದೇ ಪರಿಸ್ಥಿತಿಗಳನಲ್ಲಿ ತನ್ನನ್ನು ಕಂಡುಕೊಂಡಾಗ !

ಇನ್ನು ಗೃಹಿಣಿಯಾಗಿರುವ, ಕಾಲೇಜಿನ ಕಟ್ಟೆ ಹತ್ತದೇ (ಅನುಭವ ಜ್ಞಾನ) ಇದ್ದ , ದುಡ್ಡಿನ ವಿಷಯವಾಗಿ ಸ್ವಾವಲಂಬಿ ಆಗಿದರ ಅಮ್ಮನ್ನನ್ನು , ಆಫೀಸಿಗೆ ಹೋಗಿ ದುಡಿಯುವ, ಹಣ ಗಳಿಸುವ ಅಪ್ಪನಿಗೆ ಹೋಲಿಸಿ ನೋಡಿ, ಅಮ್ಮನ ಸಾಮರ್ಥ್ಯವನ್ನು ಶಂಕಿಸಿದ ಪ್ರಸಂಗಗಳೆಲ್ಲ ತನ್ನ ಅನುಭವಕ್ಕೂ ಬಂದಾಗ , ತನ್ನಮ್ಮನ ಬಗ್ಗೆ ತನ್ನಲ್ಲಿ ಮೂಡಿದ್ದ ತಪ್ಪು ಗ್ರಹಿಕೆಗಳನ್ನು ಅರಿತು , ಅಮ್ಮ ಅನುಭವಿಸಿದ ನೋವಿನ ಕ್ಷಣಗಳಿಗೆ ಸ್ಪಂದಿಸುವಂತಾಗುತ್ತಾಳೆ.ಸಹನಾಮಯಿಯಾಗಿ, ತ್ಯಾಗಮಯಿಯಾಗಿ ತನ್ನ ಜೀವನದ ಸಾರ್ಥಕ್ಯವನ್ನು ಇನ್ನೊಂದು ಜೀವಕ್ಕೆ 'ಜೀವನ' ಕೊಡುವಲ್ಲಿ ಕಂಡುಕೊಳ್ಳುವಂತಾದಾಗ, ತನ್ನ ಅಮ್ಮನ ಪ್ರತಿಬಿಂಬವಾಗುತ್ತಾಳಲ್ಲವೇ ಈ ಅಮ್ಮ ?

ಹೀಗೆ ಅಮ್ಮನಾಗಿ ಅಮ್ಮನನ್ನು ಅರಿತಾಗ, ಮಾತೃತ್ವದ ಅರಿವು ಮೂಡಿದಾಗ, ಅಮ್ಮನ ಕುರಿತು ಗೌರವ, ಪ್ರೀತಿ, ಕಾಳಜಿ, ಅಭಿಮಾನಗಳು (ಆಗೊಮ್ಮೆ, ಈಗೊಮ್ಮೆ ಕಂಡುಬಂದ ವ್ಯತ್ಯಾಸಗಳನ್ನು ಕಡೆಗಣಿಸಿ) ಇನ್ನೂ ಹೆಚ್ಚುವವು. ಈ ಬಗ್ಗೆ ಯೋಚಿಸಿದಾಗ , 'ಅಭಯ' , 'ಆತ್ಮವಿಶ್ವಾಸ' , ಮಮತೆಯ ಕಡಲು ಎನ್ನಿಸಿಕೊಳ್ಳುವ ಆ ಅಮ್ಮ, ದುರ್ಬಲಳೂ ಅಲ್ಲ , ಅಸಹಾಯಕಳೂ ಅಲ್ಲ . ಏಕೆಂದರೆ ಆ ಅಮ್ಮನ ಪ್ರತಿಬಿಂಬವೇ ಆಗಿರುವ ಈ ಅಮ್ಮನಿಗೆ ತಿಳಿದಿದೆ ತಾಯಿ ಎಂದಿಗೂ ದುರ್ಬಲಳಲ್ಲ , ಇನ್ನೊಂದು ಜೀವ ತನ್ನ ಜೀವನವನ್ನು ರೂಪಿಸಿಕೊಳ್ಳುವುದರಲ್ಲಿ ಮಹತ್ತರ ಪಾತ್ರವಹಿಸುವ ಅಮ್ಮ ಅಸಹಾಯಕಳಲ್ಲ.

ಇನ್ನು , ಇಂದಿನ ಪೀಳಿಗೆಯ ಮಹಿಳೆ ಬಹಳಷ್ಟು ಕ್ಷೇತ್ರಗಳಲ್ಲಿ ಸಬಲಳಾಗಿರುವಾಗ , ಅಮ್ಮನಾಗಿ ಅಮ್ಮನನ್ನು ಅರಿತಾಗ, ಹಿಂದಿನ ಪೀಳಿಗೆಯ, ಹೆಚ್ಚಿನ ವಿದ್ಯೆ ಸಿಕ್ಕದಿದ್ದರೂ , ಅನುಭವದ ಜ್ಞಾನ ಪಡೆದು ಜೀವನವನ್ನೆಲ್ಲ ಮಕ್ಕಳ ಹಿತಕ್ಕೋಸ್ಕರ ಮುಡಿಪಾಗಿಟ್ಟ ಇಳಿವಯಸ್ಸಿನ ಅಮ್ಮನ ಬಗ್ಗೆ ಜವಾಬ್ದಾರಿಗಳು ಹೆಚ್ಚುವುದಿಲ್ಲವೇ? ಮನೋಬಲದಲ್ಲಿ , ಮಾತೃತ್ವದಲ್ಲಿ ಕಡಿಮೆಯೆನಿಸದ ಅಮ್ಮ , ಪರಿಸ್ಥಿತಿಗಳ ಅಸಹಾಯಕತೆಯಿಂದ , ಒಂಟಿಯಾಗಿ, ನೋವಿನಲ್ಲಿ ತನ್ನ ಬಗ್ಗೆ ತನಗೇ ಇದ್ದ ವಿಶ್ವಾಸವನ್ನು ಕಳೆದುಕೊಂಡು ಕೊರಗುವಂತಾಗಬೇಕೆ ? ತನ್ನ ಮಕ್ಕಳ ಬಾಳಿನ ದೀಪ ಬೆಳಗಿಸುವ ಅಮ್ಮ, ವೃದ್ಧಾಶ್ರಮದ ಕೋಣೆಯ ಕತ್ತಲಿನಲ್ಲಿ ಕುಳಿತು ಅಂತ್ಯವನ್ನು ಎದುರುನೋಡುವಂತಾಗಬೇಕೆ ?

ಇಲ್ಲ , ಅಮ್ಮನಾಗಿ ಅಮ್ಮನನ್ನು ಅರಿಯುವ ಮಹಿಳೆ , ನ್ಯೂನತೆಗಳನ್ನು ಮೆಟ್ಟಿ ನಿಂತು, ಪರಿಸ್ಥಿತಿಗಳನ್ನು, ಜವಾಬ್ದಾರಿಗಳನ್ನು ನಿಭಾಯಿಸುವ ಜಾಣ್ಮೆಯನ್ನು ರೂಢಿಸಿಕೊಂಡು, ತನ್ನ ಕುಟುಂಬಕ್ಕೂ ಆದರ್ಶಪ್ರಾಯಳಾಗಿ, ಶಕ್ತಿಗುಂದಿದ, ವಿಶ್ವಾಸವನ್ನು ಕಳೆದುಕೊಂಡ ಇಳಿವಯಸ್ಸಿನ 'ಅಮ್ಮ'ನಿಗೂ 'ಅಮ್ಮ'ನಾಗಲಿ. ಮುಂದಿನ ಪೀಳಿಗೆಯ ಅಮ್ಮಂದಿರಿಗೆ ಮಾದರಿಯಾಗುವ ಸಂಕಲ್ಪ ಕೈಗೊಳ್ಳಲಿ.

ಅಮ್ಮ ಎಂದರೆ 'ಅಭಯ'! ಅಮ್ಮ ಎಂದರೆ 'ಆತ್ಮವಿಶ್ವಾಸ'!, ಅಮ್ಮ ಎಂದರೆ 'ಮಮತೆ'......

"ಜೀನಾ ಉಸಕಾ ಜೀನಾ ಹೈ , ಜೋ ಔರೋಂಕೊ ಜೀವನ್ ದೇತಾ ಹೈ" . ಇನ್ನೊಂದು ಜೀವಕ್ಕೆ 'ಜೀವನ' ಕೊಡುವುದೇ ಬದುಕಿನ ಸಾರ್ಥಕತೆ ! ■



## ತಾಯಂದಿರ ದಿನದ ಶುಭಾಶಯಗಳು !!

(ಛಾಯಾಚಿತ್ರ ಕೃಪೆ : ದೀಪ್ತಿ ಗಡ್)

## ಸುಂದರ ಸಂಪ್ರದಾಯ

### ರಂಗೋಲಿ ಕಲೆ



ದೀಪ್ತಿ ಗಡ್







Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕ್ಯಾಮೆರಾ ಕಣ್ಣಿಂದ....

### ಮಮತೆ . . .




ಛಾಯಾಚಿತ್ರ ಕೃಪೆ : ರಜನಿ ಮಹೇಶ (ಶಾರ್ಲೆಟ್ , ಉತ್ತರ ಕೆರೊಲೀನಾ)



ಛಾಯಾಚಿತ್ರ ಕೃಪೆ : ಉಷಾ ಬಸ್ರೂರ (ನ್ಯೂ ಜೆರ್ಸಿ)







ಛಾಯಾಚಿತ್ರ ಕೃಪೆ : ಶಿವಶಂಕರ ಬಣಗಾರ (ಹೊಸಪೇಟೆ , ಕರ್ನಾಟಕ)

## ಸಹಾಯ ಹಸ್ತ



ಮಹೇಶ ರಂಗಸ್ವಾಮಿ

**ವ**ಸಂತೋತ್ಸವ ಆಚರಣೆಯಂದು ಬೃಂದಾವನ ಕನ್ನಡ ಕೂಟ , 'ಆಶ್ರಯ ಸ್ವಯಂಸೇವಾ ಸಂಸ್ಥೆ' ಗೆ ಹಣ ಸಹಾಯ ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.'ಆಶ್ರಯ ಸ್ವಯಂಸೇವಾ ಸಂಸ್ಥೆ' ೨೦೦೮ ರಲ್ಲಿ " ಅರಿವಿನ ಅರಮನೆ" ಎಂಬ ಕಾರ್ಯಕ್ರಮದಡಿಯಲ್ಲಿ ಸಂಚಾರಿ ಪುಸ್ತಕ ಭಂಡಾರವನ್ನು ಕರ್ನಾಟಕದ ಕಣ್ಣೂರು, ಕೆಂಪಯ್ಯನ ಹಟ್ಟಿ, ರಾಮಪುರ, ಬಸಪ್ಪನ ದೊಡ್ಡಿ,ಮಂಗಳ್ಳಿ, ಹನುರು, ಮಂಗಳ, ಬಂದಳ್ಳಿ ಮತ್ತು ಲೊಕ್ಕನ ಗ್ರಾಮಗಳ ಹಿರಿಯ ಪ್ರಾಥಮಿಕ ಶಾಲೆಗಲ್ಲಿ ಚಾಲನೆಗೊಳಿಸಿತು. ಪ್ರಸ್ತುತ ೬ ಶಾಲೆಗಳಲ್ಲಿ ಕಲೆಯ ಕಾರ್ಯಕ್ರಮಗಳು, ವಿಜ್ಞಾನ ಕೂಟಗಳು, ತಿಂಗಳಿಗೊಮ್ಮೆ ನಡೆಸುವ ಪುಸ್ತಕ ಕೂಟಗಳು ಮತ್ತು ಬೆಳವಣಿಗೆ ಹಂತದ ಹಲವಾರು ಮಾರ್ಗದರ್ಶನದ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಶಾಲೆಗಳಲ್ಲಿ ಅಳವಡಿಸುವ ಯೋಜನೆಯಲ್ಲಿದೆ.

'ಆಶ್ರಯ ಸ್ವಯಂಸೇವಾ ಸಂಸ್ಥೆಯ ಸ್ಥಾಪಕರಾದ ಶ್ರೀ ವಾಸುಕಿ ಸುಬ್ಬರಾವ್ ಸಿಯಾಟಲ್ ನಗರದ ವಾಸಿಯಾಗಿದ್ದು , ಕನ್ನಡ ನಾಡಿನಲ್ಲಿ ಸೇವೆಯಲ್ಲಿ ನಿರತರಾಗಿದ್ದಾರೆ. ಬೃಂದಾವನ ಕೂಟದ ಸದಸ್ಯರು ನೀಡಿದ ಸಹಾಯವನ್ನು ಸ್ಮರಿಸಿ ಬಹಳ ಸಂತಸ ವ್ಯಕ್ತಪಡಿಸಿದರು. ವಸಂತೋತ್ಸವ ಆಚರಣೆಯ ಶುಭ ಸಂದರ್ಭದಲ್ಲಿ ಹಣ ಸಂಗ್ರಹಿಸಲು ನೆರವು ನೀಡಿದ ಬೃಂದಾವನ ಸದಸ್ಯರಿಗೆಲ್ಲ ನಮ್ಮ ಹೃತ್ಪೂರ್ವಕ ಧನ್ಯವಾದಗಳು. ಈ ಸಹಾಯದಿಂದ " ಅರಿವಿನ ಅರಮನೆ "ಪುಸ್ತಕ ಭಂಡಾರಕ್ಕೆ ಮತ್ತಷ್ಟು ಪುಸ್ತಕಗಳು ಸೇರ್ಪಡೆಯಾಗಲಿವೆ. 'ಆಶ್ರಯ ಸ್ವಯಂಸೇವಾ ಸಂಸ್ಥೆ' ಹಮ್ಮಿಕೊಂಡಿರುವ ಕಾರ್ಯಕ್ರಮಗಳು, ಯೋಜನೆಗಳ ವಿವರಗಳು ಹಾಗು ಹೆಚ್ಚಿನ ಮಾಹಿತಿ ಮತ್ತು ಹಣ ಸಹಾಯ ತೋರಲು ಈ ಕೆಳಕಂಡ ವೆಬ್ ಸೈಟ್ ಅಥವಾ ಇಮ್ಮೈಲ್ ನಲ್ಲಿ ಸಂಪರ್ಕಿಸಬಹುದು.

www.ashraya-usa.org ಅಥವಾ contact@ashraya-usa.org


Copyright © KCO – Brindavana

## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

### ಸೂಚನೆ:

ನ್ಯೂ ಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು- ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ,ಬಾಲಪ್ರತಿಭೆ, ಕ್ರೀಡೆ, ಅಮೆರಿಕಾ ನಾಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ.
**ಅಮೆರಿಕಾ ನಾಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು.ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ,ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.








Copyright © KCO – Brindavana